ಸಂಪುಟ: 05 ಸಂಚಿಕೆ: 24 ಪುಟಗಳು: 08 ಮಂಗಳವಾರ 08 ಏಪ್ರಿಲ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833

₹5

**ಮುಂಜಾನೆ ಮಾತು**

ದೊಡ್ಡ ಗುರಿ, ಜ್ಞಾನದ ಸಂಪಾದನೆ, ಕಠಿಣ ಪರಿಶ್ರಮ ಮತ್ತು ದೃಢ ಹಾಗೂ ಸತತ ಪ್ರಯತ್ನ ಎಂಬ ನಾಲ್ಕು ವಿಷಯಗಳನ್ನು ಅನುಸರಿಸಿದರೆ ಏನು ಬೇಕಾದರೂ ಸಾಧಿಸಬಹುದು.


# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಉನ್ನತ ಸ್ಥಾನದಲ್ಲಿರೋರು ಎಚ್ಚರಿಕೆಯಿಂದ ಇರಬೇಕಿತ್ತು

**ಬಿಎಸ್‌ವೈ ಪೋಕ್ಸೋ ಕೇಸ್**

• **ಉದಯವಾಹಿನಿ, ಬೆಂಗಳೂರು**



ಪೋಕ್ಸೊ ಪ್ರಕರಣದಲ್ಲಿ ತಮಗೆ ನೀಡಿರುವ ಜಾಮೀನಿನ ಷರತ್ತು ಸಡಿಲಿಸುವಂತೆ ಕೋರಿ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಸಲ್ಲಿಸಿರುವ ಅರ್ಜಿ ಸಂಬಂಧ ಕರ್ನಾಟಕ ಹೈಕೋರ್ಟ್ ನಿಂದ ರಾಜ್ಯ ಸರಕಾರಕ್ಕೆ ನೋಟಿಸ್ ಜಾರಿಗೊಳಿಸಲಾಗಿದೆ.

ಕೋರ್ಟ್ ವ್ಯಾಪ್ತಿ ಬಿಟ್ಟು ತೆರಳದಂತೆ ವಿಧಿಸಿದ್ದ ಷರತ್ತು ಸಡಿಲಿಕೆ ಕೋರಿ ಬಿಎಸ್ ಯಡಿಯೂರಪ್ಪ ಸಲ್ಲಿಸಿರುವ ಅರ್ಜಿ ನ್ಯಾ. ಪ್ರದೀಪ್ ಸಿಂಗ್ ಯೆರೂರ್ ಅವರಿದ್ದ ಏಕಸದಸ್ಯ ಪೀಠದ ಮುಂದೆ ವಿಚಾರಣೆಗೆ ಬಂದಿತು. ಕೆಲ ಕಾಲ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗೆ ಆಕ್ಷೇಪಣೆ ಸಲ್ಲಿಸಲು ಸೂಚನೆ ನೀಡಿ ಬೇಸಿಗೆ ರಜೆ ಮುಗಿದ ನಂತರ ಅರ್ಜಿಯನ್ನು ವಿಚಾರಣೆಗೆ ನಿಗದಿ ಮಾಡುವಂತೆ ಆದೇಶಿಸಿತು. ಆಗ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ನ್ಯಾಯವಾದಿ ಸಿ.ವಿ.ನಾಗೇಶ್, ಅರ್ಜಿದಾರರು ಹಿರಿಯ ರಾಜಕಾರಣಿ ಆಗಿರುವುದರಿಂದ ಹೊಸದಿಲ್ಲಿಗೆ ತೆರಳಬೇಕಿದೆ. ಅವರು ರಾಜಕೀಯ ಪಕ್ಷದ ಸಂಸದೀಯ ಸಮಿತಿ ಸದಸ್ಯರಾಗಿದ್ದಾರೆ. ಹಾಗಾಗಿ, ಅವರು ನ್ಯಾಯಾಲಯದ ವ್ಯಾಪ್ತಿ ಬಿಟ್ಟು ಹೊಸದಿಲ್ಲಿ ಮತ್ತಿತರ ಕಡೆ ಸಂಚಾರ ಮಾಡಲು ಅನುವಾಗುವಂತೆ ಷರತ್ತು ಸಡಿಲಿಸಬೇಕು ಎಂದು ಮನವಿ ಮಾಡಿದರು.

**ಎಚ್ಚರಿಕೆಯಿಂದ ಇರಬೇಕಿತ್ತು:** ಆಗ ನ್ಯಾಯಪೀಠ, ಅರ್ಜಿದಾರರು ಇಂತಹುದರ ಬಗ್ಗೆ ಎಚ್ಚರಿಕೆಯಿಂದ ಇರಬೇಕಿತ್ತು. ಉನ್ನತ ಸ್ಥಾನದಲ್ಲಿ ಇರುವವರು ಇಂತಹ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರೆ ಅದು ಖಂಡನೀಯ. ಅಂತಹವರು ಇತರರಿಗೆ ಮಾದರಿಯಾಗುವಂತಹ ನಡವಳಿಕೆ ಹೊಂದಿರಬೇಕು ಎಂದು ,ಮೌಖಿಕವಾಗಿ ಹೇಳಿತು.

ಅರ್ಜಿದಾರರ ಮನವಿಗೆ ಆಕ್ಷೇಪ ಎತ್ತಿದ ಎಸ್‌ಪಿಪಿ ಪ್ರೊ. ರವಿವರ್ಮಕುಮಾರ್, ನಾವು ಎಲ್ಲಾ ಅಂಶಗಳನ್ನು ನ್ಯಾಯಾಲಯದ ಗಮನಕ್ಕೆ ತರುತ್ತೇವೆ. ಆನಂತರ ನ್ಯಾಯಾಲಯ ಸಡಿಲಿಕೆ ಬಗ್ಗೆ ತೀರ್ಮಾನಿಸಬಹುದು ಎಂದರು.

**ಬೇಸಿಗೆ ರಜೆ ಬಳಿಕ ವಿಚಾರಣೆ:** ಆಗ ನ್ಯಾಯಮೂರ್ತಿ, ಮುಂದಿನ ಒಂದು ತಿಂಗಳು ನೀವು ಎಲ್ಲೂ ಹೋಗುವುದಿಲ್ಲಅಲ್ಲವೇ ಮುಂದಿನ ವಾರ ನಾನು ರಜೆಯಲ್ಲಿರುತ್ತೇನೆ. ಆ ನಂತರ ಕರ್ನಾಟಕ ಹೈಕೋರ್ಟ್‌ಗೆ ಒಂದು ತಿಂಗಳು ಬೇಸಿಗೆ ರಜೆ ಇದೆ. ರಜೆ ಮುಗಿದ ನಂತರ ವಿಚಾರಣೆ ನಡೆಸೋಣ. ಅಷ್ಟರಲ್ಲಿಎಸ್‌ಪಿಪಿ ಆಕ್ಷೇಪಣೆಗಳನ್ನು ಸಲ್ಲಿಸಲಿ ಎಂದು ಹೇಳಿದರು. ಅರ್ಜಿದಾರರ ಪರ ವಕೀಲರು, ಬಿಎಸ್ ಯಡಿಯೂರಪ್ಪ ವಿರುದ್ಧದ ಆರೋಪ ಸುಳ್ಳೆಂಬ ಕಾರಣಕ್ಕೆ ವಿಚಾರಣೆಗೆ ತಡೆ ನೀಡಲಾಗಿದೆ ಎಂದರು. ಕಳೆದ ಫೆಬ್ರವರಿ 7ರಂದು ನಿರೀಕ್ಷಣಾ ಜಾಮೀನು ನೀಡುವಾಗ ನ್ಯಾಯಾಲಯ ಅರ್ಜಿದಾರರು ಕೋರ್ಟ್ ವ್ಯಾಪ್ತಿ ಬಿಟ್ಟು ಹೊರಗೆ ಹೋಗಬಾರದು ಎಂಬ ಷರತ್ತು ವಿಧಿಸಿದೆ.

## ಜನಾಕ್ರೋಶ ಯಾತ್ರೆ, ಬಿಜೆಪಿಗೆ ಭಾರೀ ಮುಜುಗರ ತಂದ ಆದೇಶ

• **ಉದಯವಾಹಿನಿ, ಬೆಂಗಳೂರು**

ಮೈಸೂರಿನಲ್ಲಿ ನಡೆಸುತ್ತಿರುವ ಬೆಲೆ ಏರಿಕೆ, ಮುಸ್ಲಿಂ ಓಲೈಕೆ ಮತ್ತು ದಲಿತರ ಹಣ ಲೂಟಿ ಈ ಮೂರು ವಿಚಾರವನ್ನು ಇಟ್ಟುಕೊಂಡು, ಕರ್ನಾಟಕ ಬಿಜೆಪಿ ಘಟಕ ನಾಲ್ಕು ಹಂತಗಳ ಜನಾಕ್ರೋಶ ಯಾತ್ರೆಯನ್ನು ಮೈಸೂರಿನಲ್ಲಿ ಆರಂಭಿಸಿದೆ. ರಾಜ್ಯ ಬಿಜೆಪಿಯ ಹಲವು ಪ್ರಮುಖ ನಾಯಕರು ಇದರಲ್ಲಿ ಭಾಗವಹಿಸಿದ್ದಾರೆ. ಬಿಜೆಪಿಯ ಈ ಯಾತ್ರೆಯ ಬಗ್ಗೆ ಪಕ್ಷದಿಂದ ಉಚ್ಚಾಟಿತಗೊಂಡಿರುವ ಬಸನಗೌಡ ಪಾಟೀಲ್ ಯತ್ನಾಳ್ ವ್ಯಂಗ್ಯವಾಡಿದ್ದರು.

ಯಾತ್ರೆಯ ರೂಪುರೇಷೆ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ನಿವಾಸದಲ್ಲಿ ವಿಜಯೇಂದ್ರ ನಡೆಸಿದ್ದಾರೆ ಎಂದು ಯತ್ನಾಳ್ ಆರೋಪಿಸಿದ್ದರು. ಬಿಜೆಪಿಯ ಈ ಯಾತ್ರೆಗೆ ಕೇಂದ್ರದ ಆದೇಶ ತೀವ್ರ ಮುಜುಗರವನ್ನು ತಂದೊಡ್ಡಿದೆ. ಸಾರ್ವಜನಿಕ ವಲಯದಲ್ಲಿ ಬಿಜೆಪಿಯ ಈ ಪ್ರತಿಭಟನೆಯನ್ನು ಸಾರ್ವಜನಿಕರು ಪ್ರಶ್ನಿಸುವಂತಾಗಿದೆ. ಬೆಲೆ ಏರಿಕೆಯ ವಿರುದ್ಧ ಬಿಜೆಪಿ ಇಲ್ಲಿ ಪ್ರತಿಭಟನೆ ನಡೆಸುತ್ತಿದ್ದರೆ, ದೆಹಲಿಯಿಂದ ಹೊರಬಿದ್ದ ಆದೇಶ, ಪಕ್ಷದ ಜನಾಕ್ರೋಶ ಯಾತ್ರೆಯ ಉದ್ದೇಶವನ್ನೇ ಪ್ರಶ್ನಿಸುವಂತಿದೆ.

## ಇಡೀ ಸರ್ಕಾರ ಒಬ್ಬ ಹೆಚ್‌ಡಿಕೆಯನ್ನ ಸೈಲೆಂಟ್ ಮಾಡಲು ಯತ್ನಿಸುತ್ತಿದೆ

• **ಉದಯವಾಹಿನಿ, ಬೆಂಗಳೂರು**

ನಮ್ಮದು ಬಂದೂಕು ಸಂಸ್ಕೃತಿಯಲ್ಲ, ನಮ್ಮದು ಸರ್ವ ಜನಾಂಗದ ಶಾಂತಿಯ ತೋಟದ ಸಂಸ್ಕೃತಿ. ದಾಖಲೆಗಳ ಮುಂದೆ ಬಂದೂಕು ಕೆಲಸಕ್ಕೆ ಬರಲ್ಲ. ಕರ್ನಾಟಕ ರಾಜ್ಯ ಸಿಡಿ, ಪೆನ್‌ಡ್ರೈವ್ ತಯಾರು ಮಾಡುವ ರಾಜ್ಯವಾಗಿದೆ ಎಂದು ಕಾಂಗ್ರೆಸ್‌ನ ಸಚಿವರೆ ಹೇಳಿದ್ದಾರೆ. ಯಾವ ತನಿಖೆ ಮಾಡಿದ್ದೀರಾ ಪರಮೇಶ್ವರ್ ಅವರೇ ಸಿದ್ದರಾಮಯ್ಯಗೆ ಇದರ ಬಗ್ಗೆ ಮಾಹಿತಿ ಇಲ್ವಾ ಯಾರ ಮನೆ ರೇಡ್ ಮಾಡಿಸಿದ್ದೀರಿ ಏನೇನು ಸಿಕ್ತು ಯಾಕೆ ಸುಪಾರಿ ಕೊಟ್ರು ಸುಮ್ಮನೆ ಕೊಡ್ತಾರಾ ತನಿಖೆ ನಡೆಸಿ ಸತ್ಯ ಹೊರ ತರುತ್ತೀರಾ ಎಂದು ಸಾಲು ಸಾಲು ಪ್ರಶ್ನೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ನಾನು ಮಾಜಿ ಪ್ರಧಾನಿ ಮಗ, 2 ಬಾರಿ ಸಿಎಂ ಆಗಿದ್ದೆ. ಈಗ ಕೇಂದ್ರ ಮಂತ್ರಿಯಾಗಿದ್ದೇನೆ ನಾನು ಒತ್ತುವರಿ ಮಾಡಲು ಸಾಧ್ಯನಾ ರೆವಿನ್ಯೂ ಪ್ರಕರಣಕ್ಕೆ ಡಿವೈಎಸ್‌ಪಿ ತನಿಖಾಧಿಕಾರಿ ಮಾಡಿದ್ದು ಇತಿಹಾಸದಲ್ಲೇ ಮೊದಲು. ನನಗೆ ಈ ಪರಿಸ್ಥಿತಿ ತಂದವರು ಇನ್ನೆಷ್ಟು ಮನೆ ಹಾಳು ಮಾಡಿದ್ದೀರಿ ಎಂದು ಕಿಡಿಕಾರಿದ್ದಾರೆ. ಕೆರೆ ನುಂಗಿ ಅಣ್ಣನ ಹೆಸರಿಗೆ ರಿಜಿಸ್ಟರ್ ಮಾಡಿಸಿ, ಗಿಫ್ಟ್ ಪಡೆಯುವವರು ಕುಮಾರಸ್ವಾಮಿ ಬಗ್ಗೆ ಮಾತಾಡ್ತೀರಾ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಎಷ್ಟು ಜನರನ್ನ ಬಲಿ ಪಡೆದಿದೆ ಈ ಸರ್ಕಾರ ದ್ವೇಷದ ರಾಜಕಾರಣ ಮಾಡ್ತಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ.ಇದನ್ನು ಸಂಸದರು ಖಾರವಾಗಿ ಪ್ರಶ್ನಿಸಿದ್ದಾರೆ.

## ಬಿಜೆಪಿಯ 8 ಕ್ಷೇತ್ರಕ್ಕೆ ಆದ್ಯತೆ, ಡಿಕೆಶಿಯಿಂದ 'ನೋ' ತಾರತಮ್ಯ

• **ಉದಯವಾಹಿನಿ, ಬೆಂಗಳೂರು**

ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯ 10 ವಿಧಾನಸಭಾ ವ್ಯಾಪ್ತಿಯ ವಿವಿದೆಡೆ, ಬೆಂಗಳೂರು ಉಸ್ತುವಾರಿಯೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಸ್ತೆಗಳ ಡಾಂಬರೀಕರಣದ ಕಾಮಗಾರಿಗಳ ಭೂಮಿ ಪೂಜೆಯನ್ನು ನೆರವೇರಿಸಿದರು. ಹತ್ತು ವಿಧಾನಸಭಾ ಕ್ಷೇತ್ರಗಳಲ್ಲಿ ಭೂಮಿಪೂಜೆ ಏನು ನೆರವೇರಿಸಲಾಯಿತೋ, ಆ ಪೈಕಿ 8 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಯ ಶಾಸಕರಿದ್ದಾರೆ. ಆ ಮೂಲಕ, ಅಭಿವೃದ್ದಿಯ ವಿಚಾರದಲ್ಲಿ ಬಿಜೆಪಿ, ಕಾಂಗ್ರೆಸ್ ಎಂದು ತಾರತಮ್ಯ ಮಾಡುವುದಿಲ್ಲ ಎನ್ನುವ ಸಂದೇಶವನ್ನು ಡಿಸಿಎಂ ಡಿಕೆಶಿ ರವಾನಿಸಲು ಹೊರಟಂತಿದೆ. ಒಟ್ಟಾರೆಯಾಗಿ 187.50 ಕೋಟಿ ರೂಪಾಯಿಯ ಕಾಮಗಾರಿ ಇದಾಗಿದ್ದು, ಯಶವಂತಪುರ ಕ್ಷೇತ್ರಕ್ಕೆ ಸಿಂಹಪಾಲು 75 ಕೋಟಿ ರೂಪಾಯಿ ಲಭಿಸಿದೆ. ಭೌಗೋಳಿಕ ವ್ಯಾಪ್ತಿಯಲ್ಲಿ ಇದು ದೊಡ್ಡ ಕ್ಷೇತ್ರವಾಗಿದೆ. ಬಿಜೆಪಿಯಲ್ಲಿ ಇದ್ದೂ, ಇಲ್ಲದಂತಿರುವ ಎಸ್.ಟಿ.ಸೋಮಶೇಖರ್ ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಬೆಂಗಳೂರು ನಗರದ ವಿವಿಧೆಡೆ ಶಂಕುಸ್ಥಾಪನೆ ನೆರವೇರಿಸಿದ್ದೇನೆ. ಸೋಮವಾರ ಒಂದೇ ದಿನ 10 ಕಡೆಗಳಲ್ಲಿ ಬ್ಲಾಕ್ ಟಾಪಿಂಗ್ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಬೆಂಗಳೂರು ನಗರದೊಳಗೆ ಒಟ್ಟು 1,600 ಕಿ.ಮೀ ರಸ್ತೆಗೆ ವೈಟ್ ಟಾಪಿಂಗ್ ಹಾಗೂ ಬ್ಲಾಕ್ ಟಾಪಿಂಗ್ ಕಾರ್ಯಕ್ರಮ ರೂಪಿಸಿದ್ದೇವೆ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

**ಭೋವಿ ನಿಗಮದ ಮೇಲೆ ಇಡಿ ದಾಳಿ ಪ್ರಕರಣ ಸಂಬಂಧ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ 97 ಕೋಟಿ ರೂ. ಹಣ ದುರುಪಯೋಗವಾಗಿರುವುದಾಗಿ ಜಾರಿ ನಿರ್ದೇಶನಾಲಯ ಅಧಿಕೃತ ಮಾಹಿತಿ ನೀಡಿದೆ. ಭೋವಿ ಸಮುದಾಯದ ಏಜೆಂಟರ ಮೂಲಕ ನಕಲಿ ಫಲಾನುಭವಿಗಳ ಬ್ಯಾಂಕ್ ಖಾತೆ ಬಳಸಿಕೊಂಡು ಹಣ ವರ್ಗಾವಣೆ ಮಾಡಲಾಗಿದೆ**

# ಬಹುಕೋಟಿ ಹಗರಣ ಪತ್ತೆಯಾಯ್ತು ಅಕ್ರಮ ಹಣ

- ಭೋವಿ ನಿಗಮದಲ್ಲಿ 97 ಕೋಟಿ ರೂ. ಅಕ್ರಮ
- ಇ.ಡಿಯಿಂದ ಅಧಿಕೃತ ಮಾಹಿತಿ
- ಕರ್ನಾಟಕದಲ್ಲಿ ಮತ್ತೆ ಇ.ಡಿ ಸದ್ದು
- ಅಕ್ರಮ ಹಣ ವರ್ಗಾವಣೆ ಪತ್ತೆ
- ಮಹತ್ವದ ದಾಖಲೆ ಕಲೆಹಾಕಿದ ED

• **ಉದಯವಾಹಿನಿ, ಬೆಂಗಳೂರು**

ಕೆಬಿಡಿಸಿಯಿಂದ ಹಣವನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗಿದೆ. ದಾಳಿ ವೇಳೆ ಸಂಗ್ರಹಿಸಿದ ಪುರಾವೆಗಳ ಆಧಾರದ ಮೇಲೆ ಮಾಜಿ ಎಂಡಿ ನಾಗರಾಜಪ್ಪನನ್ನು ವಶಕ್ಕೆ ಪಡೆಯಾಲಾಗಿದ್ದು, ಅಕ್ರಮ ಹಣ ವರ್ಗಾವಣೆಯಲ್ಲಿ ಭಾಗಿಯಾಗಿರುವುದು ಪತ್ತೆಯಾಗಿದೆ. ನಕಲಿ ಖಾತೆಗಳನ್ನು ಬಳಸಿಕೊಂಡು ತಮ್ಮ ಸ್ನೇಹಿತರು ಮತ್ತು ಕುಟುಂಬ ಸದಸ್ಯರ ಬ್ಯಾಂಕ್ ಖಾತೆಗಳಲ್ಲಿ ಹಣ ವರ್ಗಾವಣೆ ಮಾಡಿದ್ದಾರೆ.

ಸದ್ಯ ನಾಗರಾಜಪ್ಪನನ್ನು ಬಂಧಿಸಿ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿದ ಇ.ಡಿ ಹೆಚ್ಚಿನ ತನಿಖೆಗಾಗಿ ನಾಗರಾಜಪ್ಪನನ್ನು 14 ದಿನ ವಶಕ್ಕೆ ಪಡೆದಿದೆ. ಇಡಿ ತನಿಖೆ ವೇಳೆ ಅಕ್ರಮ ಹಣ ವರ್ಗಾವಣೆ ಮಾಡಿರುವುದು ಪತ್ತೆಯಾಗಿದೆ ಎಂದು ಇ.ಡಿ. ಅಧಿಕೃತವಾಗಿ ಪ್ರಕಟಣೆಯಲ್ಲಿ ತಿಳಿಸಿದೆ.

**ಏನಿದು ಆರೋಪ.. :** ಭೋವಿ ಅಭಿವೃದ್ಧಿ ನಿಗಮದ ಉದ್ಯಮಶೀಲತಾ ಯೋಜನೆ ಮತ್ತು ನೇರ ಸಾಲ ಯೋಜನೆಗಳಡಿ ಲಕ್ಷಾಂತರ ರೂ. ಸಾಲ ಕೊಡಿಸುವುದಾಗಿ ಮಧ್ಯವರ್ತಿಗಳ ಮೂಲಕ ಆಮಿಷವೊಡ್ಡಿ ಸಾರ್ವಜನಿಕರ ಗುರುತಿನ ದಾಖಲೆಗಳು, ಬ್ಯಾಂಕ್ ಚೆಕ್ ಪಡೆದು ದುರ್ಬಳಕೆ ಮಾಡಿಕೊಂಡಿರುವುದು ತನಿಖೆಯಲ್ಲಿ ಪತ್ತೆಯಾಗಿತ್ತು. ಈ ಹಿನ್ನೆಲೆ ಇಡಿ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು. ಈ ಸಂಬಂಧ ಮೂರು ದಿನಗಳ ಹಿಂದೆ ನಿಗಮದ ಅಧ್ಯಕ್ಷ ವ್ಯವಸ್ಥಾಪಕ ನಿರ್ದೇಶಕ ನಾಗರಾಜಪ್ಪ, ಹಾಗೂ ಲೀಲಾವತಿ ಸೇರಿದಂತೆ ಹಲವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ ನಡೆಸಿ ಶೋಧ ಕಾರ್ಯವನ್ನು ಇಡಿ ಅಧಿಕಾರಿಗಳು ಕೈಗೊಂಡಿದ್ದರು. ಈ ವೇಳೆ ವಿಚಾರಣೆ ನಡೆಸಿದ ವೇಳೆ ಸರಿಯಾದ ಮಾಹಿತಿ ನೀಡದಿದ್ದರಿಂದ ಬಂಧಿಸಿ ವಿಚಾರಣೆಗೊಳಪಡಿಸಿದ್ದಾರೆ ಎಂದು ವರದಿಯಾಗಿದೆ.

**ಭೋವಿ ನಿಗಮ ಅಕ್ರಮ:** ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದಲ್ಲಿ, ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಬಿ.ಕೆ.ನಾಗರಾಜಪ್ಪ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) 14 ದಿನಗಳ ಕಸ್ಟಡಿಗೆ ಪಡೆದಿದೆ. 2018-2023ರ ಅವಧಿಯಲ್ಲಿ ನಿಗಮದ ಖಾತೆಯಿಂದ ಅಕ್ರವಾಗಿ 97 ಕೋಟಿ ವರ್ಗಾವಣೆ ಮಾಡಿಕೊಳ್ಳಲಾಗಿದೆ. ಈ ಸಂಬಂಧ ಸಿಐಡಿ ತನಿಖೆ ನಡೆಸುತ್ತಿದ್ದು. ಭೋವಿ ನಿಗಮದ ಕಚೇರಿ, ನಾಗರಾಜಪ್ಪ ಮತ್ತು ಅವರ ಆಪ್ತರ ಮನೆಗಳಲ್ಲಿ ಇ.ಡಿ ಅಧಿಕಾರಿಗಳು ಶೋಧ ಆರಂಭಿಸಿದ್ದರು.'ನಾಗರಾಜಪ್ಪ ಅವರನ್ನು ವಶಕ್ಕೆ ಪಡೆದು, ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಎದುರು ಹಾಜರುಪಡಿಸಲಾಯಿತು. ವಿಚಾರಣೆಗಾಗಿ ಅವರನ್ನು 14 ದಿನಗಳವರೆಗೆ ಕಸ್ಟಡಿಗೆ ಪಡೆಯಲಾಯಿತು' ಎಂದು ಇ.ಡಿ ತಿಳಿಸಿದೆ. ನಿಗಮದ ಹಣ ದುರ್ಬಳಕೆ ಸಂಬಂಧ ಕರ್ನಾಟಕ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಹಣ ದುರ್ಬಳಕೆ ಮತ್ತು ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ನಾಗರಾಜಪ್ಪ ಅವರದ್ದೇ ಪ್ರಮುಖ ಪಾತ್ರ ಎಂಬುದನ್ನು ಪುಷ್ಟೀಕರಿಸುವ ದಾಖಲೆಗಳು ಅವರ ಮನೆ ಮತ್ತು ನಿಗಮದ ಕಚೇರಿಯಲ್ಲಿ ಪತ್ತೆಯಾಗಿವೆ' ಎಂದು ಮಾಹಿತಿ ನೀಡಿದೆ.'ಫಲಾನುಭವಿಗಳ ಹೆಸರಿನಲ್ಲಿ ನಾಗರಾಜಪ್ಪ ತಾನೇ ಬ್ಯಾಂಕ್ ಖಾತೆ ತೆರೆದು, ಅವುಗಳಿಗೆ ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ. ವಿವಿಧ ಯೋಜನೆ ಅಡಿ ತಮ್ಮ ಪಾಲುದಾರಿಕೆ ಇರುವ ಕಂಪನಿಗಳಿಗೆ ಹಣ ವರ್ಗಾವಣೆ ಮಾಡಿದ್ದಾರೆ' ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ.




### 10 ಲಕ್ಷ ರೂ. ಹಣ ವಶ

ಬೆಂಗಳೂರು ನಗರ ಎಸಿಬಿಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಈ ಹಿನ್ನೆಲೆ ಭೋವಿ ಅಭಿವೃದ್ಧಿ ಪ್ರಾಧಿಕಾರದ ಎಂ.ಡಿ. ಲೀಲಾವತಿ ಹಾಗೂ ನಾಗರಾಜ್ ಅವರ ಕಚೇರಿ ಹಾಗೂ ಮನೆಗಳ ಮೇಲೆ ದಾಳಿ ಮಾಡಲಾಗಿತ್ತು. ಈ ವೇಳೆ, 10 ಲಕ್ಷ ರೂ. ಹಣ ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದರು.

**200ಕ್ಕೂ ಹೆಚ್ಚು ಕಡತ ಕಳವು**

2021-22ನೇ ಸಾಲಿನಲ್ಲಿ ಉದ್ಯಮಿಗಳಿಗೆ ಸಾಲ ನೀಡುವಾಗ ಅಕ್ರಮ ನಡೆದಿದ್ದು, ಲಕ್ಷಾಂತರ ರೂ. ಸಾಲ ಕೊಡಿಸುವುದಾಗಿ ಸಾರ್ವಜನಿಕ ದಾಖಲೆ ದುರ್ಬಳಕೆ ಜೊತೆಗೆ 10 ಕೋಟಿ ರೂ. ಹೆಚ್ಚು ಹಣ ಅಕ್ರಮವಾಗಿ ವರ್ಗಾವಣೆ ಮಾಡಿದ ಆರೋಪ ಕೇಳಿಬಂದಿತ್ತು. ಬಳಿಕ ಪ್ರಕರಣ ಮುಚ್ಚಿಹಾಕಲು ನಿಗಮದ ಅಧೀಕ್ಷಕ ಸುಬ್ಬಪ್ಪ, ಭೋವಿ ಅಭಿವೃದ್ಧಿ ನಿಗಮದ ಲೆಕ್ಕಪತ್ರ ಕಡತ, ನಗದು ಪುಸ್ತಕಗಳು, ಯೋಜನಾ ಕಡತ, ಬ್ಯಾಂಕ್ ಚೆಕ್ ಸೇರಿ 200ಕ್ಕೂ ಹೆಚ್ಚು ಕಡತಗಳನ್ನು ಕಳವು ಮಾಡಿದ್ದ ಕುರಿತು ಬೆಂಗಳೂರು, ಬೆಂಗಳೂರು ಗ್ರಾಮಾಂತರ ಕಲಬುರಗಿ ಜಿಲ್ಲೆಯಲ್ಲಿ ದೂರು ದಾಖಲಾಗಿತ್ತು. ಇತ್ತೀಚೆಗೆ ರಾಜ್ಯಸರ್ಕಾರ ಪ್ರಕರಣವನ್ನು ಸಿಐಡಿ ತನಿಖೆಗೆ ಆದೇಶಿಸಿತ್ತು. ಸಿಐಡಿ ಅಧಿಕಾರಿಗಳು ಭೋವಿ ನಿಗಮದ ಅಧೀಕ್ಷಕ ಸುಬ್ಬಪ್ಪನನ್ನ ಬಂಧಿಸಿದ್ದರು. ಇದೇ ಹಗರಣಕ್ಕೆ ಸಂಬಂಧಿಸಿದಂತೆ ಸಿಐಡಿ ತನಿಖೆ ಎದುರಿಸಿದ್ದ ಉದ್ಯಮಿ ಜೀವಾ, ಬೆಂಗಳೂರಿನ ಪದ್ಮನಾಭನಗರದ ರಾಘವೇಂದ್ರ ಲೇಔಟ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು.

1. ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಬಹುಕೋಟಿ ರೂ. ಹಗರಣ
2. ಹಗರಣ ಸಂಬಂಧ ಹಲವು ಕಡೆ ದಾಳಿ ನಡೆಸಿದ ಇ.ಡಿ ಅಧಿಕಾರಿಗಳು

**ಇ.ಡಿ ಮೂಲ ಹೇಳಿದ್ದು**

ಪ್ರಕರಣದಲ್ಲಿ ಇನ್ನೂ ಹಲವು ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗಿಯಾಗಿರುವ ಶಂಕೆ ಸಂಬಂಧಿಸಿದ ದಾಖಲೆಗಳನ್ನು ಕಲೆ ಹಾಕಲಾಗಿದೆ * ಮತ್ತಷ್ಟು ಮಂದಿಯನ್ನು ವಿಚಾರಣೆಗೆ ಕರೆಯಲಾಗುವುದು

**ಎಸಿಬಿ ಅಧಿಕಾರಿಗಳಿಂದ ದಾಖಲೆ ಪರಿಶೀಲನೆ**

ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಕಚೇರಿ ,ಅಧಿಕಾರಿಗಳ ಮನೆ ಮೇಲೆ ಎಸಿಬಿ ಅಧಿಕಾರಿಗಳು ದಿಢೀರ್ ದಾಳಿ (ಏ.29-2022) ನಡೆಸಿದ್ದರು. ರಾಜಾಜಿನಗರದಲ್ಲಿರುವ ಭೋವಿ ಅಭಿವೃದ್ಧಿ ನಿಗಮದ ಎಂ.ಡಿ. ಲೀಲಾವತಿ ಮತ್ತು ಜಿ.ಎಂ. ನಾಗರಾಜಪ್ಪ ಮನೆ ಮೇಲೆ ಎಸಿಬಿ ಅಧಿಕಾರಿಗಳು ದಾಳಿ ನಡೆಸಿ ಕಡತಗಳ ಪರಿಶೀಲನೆ ಕೈಗೊಂಡಿದ್ದರು. ಭೋವಿ ಅಭಿವೃದ್ಧಿ ಪ್ರಾಧಿಕಾರದ ವ್ಯವಹಾರಗಳ ಸಂಬಂಧ ಸಾರ್ವಜನಿಕರಿಂದ ದೂರುಗಳು ಕೇಳಿ ಬಂದಿದ್ದವು. ಪ್ರಾಥಮಿಕ ತನಿಖೆಯಲ್ಲಿ ಉದ್ಯಮ ಶೀಲತೆ ಯೋಜನೆ, ಐರಾವತ ಯೋಜನೆ, ಗಂಗಾಕಲ್ಯಾಣ, ಭೂ ಒಡೆತನ, ಸಮೃದ್ಧಿ, ನೇರ ಸಾಲ ಹಾಗೂ ಇತರ ಯೋಜನೆಗಳಲ್ಲಿ ಅವ್ಯವಹಾರ ಬೆಳಕಿಗೆ ಬಂದಿತ್ತು. ಹೀಗಾಗಿ ಎಂ. ಡಿ. ಲೀಲಾವತಿ, ಜಿ.ಎಂ. ನಾಗರಾಜ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದರು.

## 2ನೇ ಏರ್‌ಪೋರ್ಟ್ ಸಮೀಕ್ಷೆಗೆ ಬಂತು ಕೇಂದ್ರ ಸರ್ಕಾರದ ಎಎಐ ತಂಡ

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು 2 ನೇ ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದಂತೆ ಸ್ಥಳಗಳ ಸಮೀಕ್ಷೆ ನಡೆಸಲೆಂದು ಕೇಂದ್ರ ಸರ್ಕಾರದ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (ಎಎಐ) ತಂಡ ಆಗಮಿಸಿದೆ. ರಾಜ್ಯ ಸರ್ಕಾರ ಗುರುತಿಸಿ ಪ್ರಸ್ತಾವನೆ ಸಲ್ಲಿಸಿರುವ 3 ಸ್ಥಳಗಳಿಗೆ ಈ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಲಿದೆ.

ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ದಟ್ಟಣೆಯನ್ನು ತಗ್ಗಿಸುವ ನಿಟ್ಟಿನಲ್ಲಿ 2 ನೇ ವಿಮಾನ ನಿಲ್ದಾಣವನ್ನು 2034 ರ ವೇಳೆ ನಿರ್ಮಿಸಲು ಕರ್ನಾಟಕ ಸರ್ಕಾರ ಯೋಜನೆ ಹಾಕಿಕೊಂಡಿದ್ದು, ಇದಕ್ಕಾಗಿ ಬೆಂಗಳೂರು ಸುತ್ತ ಮೂರು ಸ್ಥಳಗಳನ್ನು ಗುರುತು ಮಾಡಿ ಮಾರ್ಚ್ ಆರಂಭದಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಸದ್ಯ ವಿಮಾನ ನಿಲ್ದಾಣಕ್ಕೆ ಅನುಮತಿ ನೀಡಿವ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿಕಾರಿಗಳ ತಂಡ ಬೆಂಗಳೂರಿಗೆ ಆಗಮಿಸಿದೆ.



**ಈ ಮೂರು ಸ್ಥಳಗಳಿಗೆ ಭೇಟಿ**

ಬೆಂಗಳೂರಿನ ಎರಡನೇ ವಿಮಾನ ನಿಲ್ದಾಣಕ್ಕೆ ಸೂಕ್ತವಾದ ಸ್ಥಳ ಗುರುತಿಸಲು ಬಂದಿರುವ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಹಿರಿಯ ಅಧಿಕಾರಿಗಳ ತಂಡಕ್ಕೆ ಕರ್ನಾಟಕ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಖುಷ್ಬು ಗೋಯಲ್ ಅವರು ಉದ್ದೇಶಿತ ಮೂರು ಸ್ಥಳಗಳ ಬಗ್ಗೆ ಮಾಹಿತಿ ನೀಡಿದರು. ಈ ತಂಡ ನಾಳೆ ಕನಕಪುರ ರಸ್ತೆಯ ಎರಡು ಮತ್ತು ನೆಲಮಂಗಲ- ಕುಣಿಗಲ್ ರಸ್ತೆಯ ಒಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಿದೆ. ಬಳಿಕ ಬುಧವಾರ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಅವರನ್ನು ಭೇಟಿ ಮಾಡಲಿದೆ. ಕೇಂದ್ರ ತಂಡವು ಮೊದಲು ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಕನಕಪುರ ರಸ್ತೆ ಕಡೆಯಿಂದ ಸ್ಥಳ ವೀಕ್ಷಣೆ ಆರಂಭಿಸಲಿದೆ. ನಂತರ ನೆಲಮಂಗಲ ಜಾಗಕ್ಕೆ ತೆರಳಲಿದೆ ಎಂದು ಮೂಲಗಳು ತಿಳಿಸಿವೆ.

**ಈ ಮೂರು ಸ್ಥಳಗಳಿಗೆ ಭೇಟಿ;** ಕನಕಪುರ ರಸ್ತೆಯ ನೈಸ್ ಜಂಕ್ಷನ್‌ನಿಂದ 10 ಕಿ.ಮೀ ದೂರದ ಸ್ಥಳ., ಹಾರೋಹಳ್ಳಿ., ನೆಲಮಂಗಲ - ಹಾಸನ ರಸ್ತೆಯಲ್ಲಿ ನೆಲಮಂಗಲ ವೃತ್ತದಿಂದ 10 ಕಿ.ಮೀ ದೂರ ಸ್ಥಳ.

## ಹೊಸ ಮೈಲಿಗಲ್ಲು ಸೃಷ್ಟಿಸಿದ ಬೆಂಗಳೂರು ವಿಮಾನ ನಿಲ್ದಾಣ

### 2024-25ರ ಹಣಕಾಸು ವರ್ಷದಲ್ಲಿ 41.88 ದಶಲಕ್ಷ ಪ್ರಯಾಣಿಕರ ಸಂಖ್ಯೆಯಲ್ಲಿ ಏರಿಕೆ

• **ಉದಯವಾಹಿನಿ, ಬೆಂಗಳೂರು**

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬೆಂಗಳೂರು 2024-25ರ ಹಣಕಾಸು ವರ್ಷದಲ್ಲಿ ಹೊಸ ದಾಖಲೆ ಬರೆದಿದ್ದು, ಪ್ರಯಾಣಿಕರ ಸಂಚಾರ ಮತ್ತು ಸರಕು ಸಾಗಣೆಯಲ್ಲಿ ಮೈಲಿಗಲ್ಲು ಸೃಷ್ಟಿಸಿದೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ 2024-25ರ ಹಣಕಾಸು ವರ್ಷದಲ್ಲಿ 41 ದಶಲಕ್ಷ ಪ್ರಯಾಣಿಕರು ಪ್ರಯಾಣಿಸಿದ್ದು, 500,000 ಮೆಟ್ರಿಕ್ ಟನ್ ತೂಕದ ಸರಕುಗಳನ್ನು ಸಾಗಿಸಲಾಗಿದೆ.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಕಳೆದ ಹಣಕಾಸು ವರ್ಷದಲ್ಲಿ 37.53 ದಶಲಕ್ಷ ಪ್ರಯಾಣಿಕರು ಪ್ರಯಾಣಿಸಿದ್ದರು. 2024-25ರ ಹಣಕಾಸು ವರ್ಷದಲ್ಲಿ ಪ್ರಯಾಣಿಕರ ಸಂಖ್ಯೆಯಲ್ಲಿ ಏರಿಕೆಯಾಗಿ 41.88 ದಶಲಕ್ಷಕ್ಕೆ ತಲುಪಿದ್ದು, ಶೇ. 11.6ರಷ್ಟು ಹೆಚ್ಚಳವಾಗಿದೆ. ದೇಶೀಯ ಪ್ರಯಾಣಿಕರ ಸಂಖ್ಯೆಯು ಶೇ.10ರಷ್ಟು ಬೆಳವಣಿಗೆಯಾಗಿ 36.05 ದಶಲಕ್ಷ ತಲುಪಿದ್ದರೆ, ಅಂತಾರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆಯು ಶೇ.25 ರಷ್ಟು ಹೆಚ್ಚಳವಾಗಿ, 5.83 ದಶಲಕ್ಷಕ್ಕೆ ಏರಿಕೆಯಾಗಿದೆ.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಪ್ರಯಾಣಿಸುವ ಅಂತಾರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಳವಾಗಲು, ಇಂಡಿಗೋ ವಿಮಾನಯಾನ ಸಂಸ್ಥೆಯು ತನ್ನ ಜಾಗತಿಕ ಜಾಲವನ್ನು ವಿಸ್ತರಿಸಿರುವುದು ಪ್ರಮುಖ ಕಾರಣವಾಗಿದೆ. ಜೊತೆಗೆ, ಬೆಂಗಳೂರಿನಿಂದ ಲಂಡನ್ ಹೀಥ್ರೂಗೆ ದೈನಂದಿನ ಹೆಚ್ಚುವರಿ ವಿಮಾನ ಹಾರಾಟ, ಕ್ಯಾಥೆ ಪೆಸಿಫಿಕ್, ಕೆಎಲ್‌ಎಂ, ಜಪಾನ್ ಏರ್‌ಲೈನ್ಸ್, ಕ್ವಾಂಟಾಸ್ ಸೇರಿದಂತೆ ಹಲವು ವಿದೇಶಿ ವಿಮಾನಯಾನ ಸಂಸ್ಥೆಗಳು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಒದಗಿಸುವ ವಿಮಾನ ಸೇವೆಯನ್ನು ಇನ್ನಷ್ಟು ಹೆಚ್ಚಿಸಿರುವುದು ಸಹ ಅಂತಾರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಗಿದೆ.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು, ಕಳೆದ ನಾಲ್ಕು ತಿಂಗಳುಗಳಿಂದ ಅಂತಾರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆಯಲ್ಲಿ ಭಾರತದ ಮೂರನೇ ಅತ್ಯಂತ ಜನನಿಬಿಡ ವಿಮಾನ ನಿಲ್ದಾಣವಾಗಿ ಸ್ಥಾನ ಪಡೆದುಕೊಂಡಿದೆ.

**ತಡೆರಹಿತ ವಿಮಾನ ಸೇವೆ ಲಭ್ಯ**

76 ದೇಶೀಯ ಮತ್ತು 33 ಅಂತಾರಾಷ್ಟ್ರೀಯ ತಾಣಗಳಿಗೆ ಬೆಂಗಳೂರಿನಿಂದ ತಡೆರಹಿತ ವಿಮಾನ ಸೇವೆ ಲಭ್ಯವಿದ್ದು, ಇದೇ ವರ್ಷದ ಮೇ ತಿಂಗಳಿನಿಂದ ವಿಯೆಟ್ನಾಂನ ಹನೋಯಿ ನಗರಕ್ಕೆ ಆರಂಭವಾಗಲಿರುವ ವಿಮಾನ ಸೇವೆಯು 34ನೇ ಅಂತಾರಾಷ್ಟ್ರೀಯ ತಾಣವಾಗಿ ಹೊರಹೊಮ್ಮಲಿದೆ.

**500,000 ಮೆಟ್ರಿಕ್ ಟನ್ ದಾಟಿದ ಸರಕು ಸಾಗಣೆ**

ಸರಕು ಸಾಗಣೆಯಲ್ಲಿಯೂ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ದಾಖಲೆ ನಿರ್ಮಿಸಿದೆ. ಇದೇ ಮೊದಲ ಬಾರಿಗೆ, 500,000 ಮೆಟ್ರಿಕ್ ಟನ್‌ಗಿಂತ ಹೆಚ್ಚು ಸರಕು ಸಾಗಣೆ ಮಾಡುವ ಮೂಲಕ ಮಹತ್ವದ ಮೈಲಿಗಲ್ಲು ಸಾಧಿಸಿದೆ. 2024-25ರ ಆರ್ಥಿಕ ವರ್ಷದಲ್ಲಿ ಒಟ್ಟು 502,480 ಮೆಟ್ರಿಕ್ ಟನ್ ಸರಕನ್ನು ಸಾಗಣೆ ಮಾಡಲಾಗಿದ್ದು, ವರ್ಷದಿಂದ ವರ್ಷಕ್ಕೆ ಗಮನಾರ್ಹವಾದ ಶೇ.14ರಷ್ಟು ಬೆಳವಣಿಗೆ ದಾಖಲಾಗುತ್ತಿದೆ.

ಈ ಪೈಕಿ, ಅಂತಾರಾಷ್ಟ್ರೀಯ ಸರಕು ಸಾಗಣೆಯಲ್ಲಿ ಶೇ.21ರಷ್ಟು ಏರಿಕೆಯಾಗಿದ್ದು, ಒಟ್ಟು 321,418 ಮೆಟ್ರಿಕ್ ಟನ್ ಸರಕು ಸಾಗಿಸಲಾಗಿದೆ. ದೇಶೀಯ ಸರಕು ಸಾಗಣೆಯಲ್ಲಿ ಶೇ.4% ರಷ್ಟು ಏರಿಕೆಯಾಗಿದ್ದು, 181,062 ಮೆಟ್ರಿಕ್ ಟನ್ ತಲುಪಿದೆ.

ಸತತ ನಾಲ್ಕನೇ ವರ್ಷ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಕೊಳೆತುಹೋಗುವ ಪದಾರ್ಥಗಳ ರಫ್ತಿನಲ್ಲಿ ಭಾರತದ ನಂ.1 ವಿಮಾನ ನಿಲ್ದಾಣವಾಗಿ ಹೊರಹೊಮ್ಮುವ ಮೂಲಕ ತನ್ನ ಸ್ಥಾನವನ್ನು ಬಲಪಡಿಸಿಕೊಂಡಿದೆ. ಇದು ದೇಶದ ಕೃಷಿ ಪೂರೈಕೆ ಸರಪಳಿಯನ್ನು ಬಲಪಡಿಸುವಲ್ಲಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಪಾತ್ರವನ್ನು ಒತ್ತಿ ಹೇಳುತ್ತದೆ.




**ಸರಕುಗಳು ಆಮದಾಗುವ ಪ್ರಮುಖ ತಾಣ**

ವಿಮಾನ ನಿಲ್ದಾಣವು ಮಾವು ಮತ್ತು ಕೊತ್ತಂಬರಿ ಸೊಪ್ಪಿನ ರಫ್ತಿನಲ್ಲಿ ಮುನ್ನಡೆ ಸಾಧಿಸಿದ್ದು, ಸಿದ್ಧ ಉಡುಪುಗಳು, ಔಷಧಗಳು ಮತ್ತು ಯಂತ್ರೋಪಕರಣಗಳ ಭಾಗಗಳ ಸಾಗಣೆಯಲ್ಲೂ ಹೆಚ್ಚಳವಾಗಿದೆ. ಸರಕು ಸಾಗಣೆಗೆ ಮೀಸಲಾದ 12 ವಿಮಾನಯಾನ ಸಂಸ್ಥೆಗಳ ಮೂಲಕ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಬೆಂಗಳೂರಿನಿಂದ ಸಿಂಗಾಪುರ, ಲಂಡನ್, ಫ್ರಾಂಕ್‌ಫರ್ಟ್, ಚಿಕಾಗೊ ಮತ್ತು ಮಸ್ಕತ್‌ನಂತಹ ಪ್ರಮುಖ ರಫ್ತು ಕೇಂದ್ರಿತ ನಗರಗಳನ್ನು ಸಂಪರ್ಕಿಸುತ್ತದೆ. ಶೆನ್ಜೆನ್, ಸಿಂಗಾಪುರ್, ಶಾಂಘೈ, ಹಾಂಗ್ ಕಾಂಗ್ ಮತ್ತು ಫ್ರಾಂಕ್‌ಫರ್ಟ್ ನಗರಗಳು ಕೆಂಪೇಗೌಡ ಅಂತಾರಾಷ್ಟ್ರೀಯ ನಿಲ್ದಾಣಕ್ಕೆ ಸರಕುಗಳು ಆಮದಾಗುವ ಪ್ರಮುಖ ತಾಣಗಳಾಗಿವೆ.

| | |
|---|---|
| ಈ ದಿನದ ದರ | ಪೆಟ್ರೋಲ್: 103.50 ₹/L |
| | ಡೀಸೆಲ್ : 90.99 ₹/L |
| | ಬಂಗಾರ: ₹9,038/Gram24ct ₹8,285/Gram22ct |
| | ಬೆಳ್ಳಿ: ₹94.00/Gram |

ಅಂತರಾಳದಿಂದ.. EDITORIAL

# ಮೈಬಣ್ಣಕ್ಕೆ ಮೌಲ್ಯ ಆರೋಪಿಸುವ ಜಾಢ್ಯ ಇಲ್ಲವಾಗಿಸಲು ಪ್ರಬಲ ಇಚ್ಛಾಶಕ್ತಿ ಬೇಕು

ಇದು ಕಪ್ಪು ಎಂದು ಕರೆಸಿಕೊಳ್ಳುವುದಕ್ಕೆ ಸಂಬಂಧಿಸಿದೆ (ಅದರ ಜೊತೆಯಲ್ಲೇ, ಹೆಣ್ಣಾಗಿರುವುದಕ್ಕೂ ಇಲ್ಲಿ ಒಂದು ಸಂಬಂಧ ಇದೆ), ಇದರ ಬಗ್ಗೆ ತೀವ್ರವಾಗಿ ನಾಚಿಕೆಪಟ್ಟು ಕೊಳ್ಳಬೇಕು ಎಂಬಂತಿದೆ' ಎಂದು ಶಾರದಾ ಬರೆದಿದ್ದಾರೆ. ಶಾರದಾ ಅವರ ಈ ಬರಹವು ಮೈಬಣ್ಣ ಆಧರಿಸಿದ ಪೂರ್ವಗ್ರಹಗಳು ಗಮನ ಸೆಳೆದಿದೆ. ಶಾರದಾ ಅವರ ಬರಹವು ಎರಡು ಪೂರ್ವಗ್ರಹಗಳನ್ನು ಪ್ರಧಾನವಾಗಿ ತೋರಿಸಿದೆ. ಮೊದಲನೆಯದು, ಕಪ್ಪಾಗಿರುವುದು; ಎರಡನೆಯದು, ಹೆಣ್ಣುಮಕ್ಕಳಿಗೆ ಸಂಬಂಧಿಸಿದ್ದು. ಮಹಿಳೆಯರನ್ನು ನಮ್ಮ ಸಮಾಜವು ಪುರುಷರನ್ನು ನೋಡುವ ರೀತಿಯಲ್ಲೇ ನೋಡುವುದಿಲ್ಲ. ಮಹಿಳೆಯ ಚರ್ಮದ ಬಣ್ಣ ಯಾವುದು ಎಂಬುದು ಕೂಡ ಆಕೆಯ ಬಗ್ಗೆ ಸಮಾಜ ತೀರ್ಮಾನ ತೆಗೆದುಕೊಳ್ಳುವಾಗ




**ಕೇರಳ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾರದಾ ಮುರಳೀಧರನ್ ಅವರು ಫೇಸ್‌ಬುಕ್‌ನಲ್ಲಿ ಈಚೆಗೆ ಪ್ರಕಟಿಸಿರುವ ಬರಹವೊಂದು ಸಮಾಜದಲ್ಲಿ ಬಹಳ ಆಳವಾಗಿ ಬೇರೂರಿರುವ, ಮೈಬಣ್ಣ ಆಧಾರಿತ ಪೂರ್ವಗ್ರಹಗಳ ಬಗ್ಗೆ ದೊಡ್ಡ ಚರ್ಚೆ ಹುಟ್ಟುಹಾಕಿದೆ. ಮುಖ್ಯ ಕಾರ್ಯದರ್ಶಿಯಾಗಿ ತಮ್ಮ ಅಧಿಕಾರ ಅವಧಿಯನ್ನು ಯಾರೋ ಅಪರಿಚಿತ ವ್ಯಕ್ತಿಯೊಬ್ಬರು ತಮ್ಮ ಪತಿ ವಿ. ವೇಣು ಅವರ ಅಧಿಕಾರ ಅವಧಿಯ ಜೊತೆ ಹೋಲಿಸಿದ್ದುದರ ಬಗ್ಗೆ ಶಾರದಾ ಬರೆದಿದ್ದಾರೆ. ವೇಣು ಅವರ ಮೈಬಣ್ಣ ಎಷ್ಟು ಬಿಳಿಯಾಗಿದೆಯೋ ಅಷ್ಟೇ ಕಪ್ಪಾಗಿದೆ ಶಾರದಾ ಅವರ ಅಧಿಕಾರ ಅವಧಿ ಎಂಬುದು ಆ ಅಪರಿಚಿತನ ಮಾತು. ಆ ವ್ಯಕ್ತಿಯು ಶಾರದಾ ಅವರ ಕಪ್ಪು ಮೈಬಣ್ಣವನ್ನೂ ಪರೋಕ್ಷವಾಗಿ ಬೊಟ್ಟು ಮಾಡಿದ್ದಾನೆ.**

ಪ್ರಭಾವ ಬೀರುತ್ತದೆ. ಪೂರ್ವಗ್ರಹಪೀಡಿತ ಮನಸ್ಸುಗಳು ಹೆಣ್ಣಿನ ಬಗ್ಗೆ ತಾತ್ಸಾರ ಮನೋಭಾವ ಬೆಳೆಸಿಕೊಂಡಿರುತ್ತವೆ.

ಅದರಲ್ಲೂ ಕಪ್ಪು ಮೈಬಣ್ಣದ ಹೆಣ್ಣಿನ ಬಗ್ಗೆ ಪೂರ್ವಗ್ರಹವು ತೀವ್ರವಾಗಿ ಇರುತ್ತದೆ. ಪೂರ್ವಗ್ರಹಗಳು, ಮೈಬಣ್ಣದ ಆಧಾರದಲ್ಲಿ ತಾರತಮ್ಯ ಎಸಗುವುದು ಬಹಳ ವ್ಯಾಪಕವಾಗಿದೆ. ಬಿಳಿ ಮೈಬಣ್ಣ ಅಂದರೆ ಒಳ್ಳೆಯದು, ಕಪ್ಪು ಮೈಬಣ್ಣ ಹೊಂದಿರುವುದು ಕೆಟ್ಟದ್ದು ಎಂಬ ಆಲೋಚನೆಯು ನಮ್ಮ ಸಮಾಜದ ಪ್ರಜ್ಞೆಯ ಆಳಕ್ಕೆ ಇಳಿದುಬಿಟ್ಟಿದೆ. ಇದು ನಮ್ಮ ಆಲೋಚನೆ. ನಮ್ಮ ನಡತೆ ಮತ್ತು ನಮ್ಮ ಭಾಷೆಯ ಮೇಲೆ ಪ್ರಭಾವ ಬೀರಿದೆ. ಹಲವು ಬಗೆಗಳಲ್ಲಿ ಈ ಪ್ರಭಾವ ಕಾಣಿಸುತ್ತದೆ. ಮೈಬಣ್ಣದ ಬಗ್ಗೆ ಸಮಾಜದ ಧೋರಣೆ ಹೇಗಿದೆ ಎಂಬುದನ್ನು ವೈವಾಹಿಕ ಸಂಬಂಧ ಬಯಸಿ ನೀಡುವ ಜಾಹೀರಾತುಗಳಲ್ಲಿ ನೇರವಾಗಿಯೋ ಪರೋಕ್ಷವಾಗಿಯೋ ಇರುವ ಗೋಧಿಬಣ್ಣದವರು ಬೇಕು ಎಂಬ ಒಕ್ಕಣೆಯು ಬಹಳ ಚೆನ್ನಾಗಿ ವಿವರಿಸುತ್ತದೆ. ಹೆಣ್ಣುಮಕ್ಕಳಲ್ಲಿ ಬಹಳಷ್ಟು ಮಂದಿ ತಮ್ಮ ಮೈಬಣ್ಣದ ಕಾರಣಕ್ಕಾಗಿ ದುಬಾರಿ ಬೆಲೆ ತೆತ್ತಿದ್ದಾರೆ. ನಮ್ಮ ಕಲೆ, ಸಾಹಿತ್ಯ ಮತ್ತು ಸಮಾಜದ ಜೀವನದ ಇತರ ಹಲವು ಚಟುವಟಿಕೆಗಳಲ್ಲಿ ಇವೆಲ್ಲ ಕಾಣುತ್ತವೆ. ಚರ್ಮದ ಬಣ್ಣವನ್ನು ಬದಲಾಯಿಸುವುದಾಗಿ ಹೇಳುವ ಉದ್ಯಮದ ಮೇಲೆ ಕೋಟ್ಯಂತರ ರೂಪಾಯಿ ಸುರಿಯಲಾಗುತ್ತಿದೆ. ಸಾಮಾಜಿಕ ಹಾಗೂ ಆರ್ಥಿಕ ಹಿಂದುಳಿದಿರುವಿಕೆಗೂ ಸಮುದಾಯಗಳ ಚರ್ಮದ ಬಣ್ಣಕ್ಕೂ ಹಲವು ಸಂದರ್ಭಗಳಲ್ಲಿ ನಂಟು ಇದೆ. ಕಪ್ಪು ಮೈಬಣ್ಣದವರು ಎಂದರೆ ಹಿಂದುಳಿದವರು ಎಂದು ಭಾವಿಸಿರುವುದೂ ಇದೆ. ಕಪ್ಪು ಎಂದರೆ ಕೆಟ್ಟದ್ದೆಲ್ಲವನ್ನೂ ಪ್ರತಿನಿಧಿಸುತ್ತದೆ ಎನ್ನುವ ಧೋರಣೆಯು ಭಾರತಕ್ಕೆ ಮಾತ್ರ ಸೀಮಿತವಾದುದಲ್ಲ, ಇದು ಎಲ್ಲೆಡೆ ಕಾಣುವ ಜಾಢ್ಯ. ಕಪ್ಪು ಎಂದರೆ ಕೆಡುಕು ಎಂಬ ಭಾವನೆಯನ್ನು ಬಿಳಿ ಮೈಬಣ್ಣ ಹೊಂದಿಲ್ಲದವರ ಮನಸ್ಸಿನಲ್ಲಿಯೂ ತುಂಬಲಾಗಿದೆ. ಇದರ ಪರಿಣಾಮವಾಗಿ ಕಪ್ಪು ಮೈಬಣ್ಣದ ವ್ಯಕ್ತಿಗಳು ಕೀಳರಿಮೆ ಬೆಳೆಸಿಕೊಂಡಿರುವುದಿದೆ. ಅವರ ಆತ್ಮಗೌರವಕ್ಕೆ ಪೆಟ್ಟುಬಿದ್ದ ನಿದರ್ಶನಗಳು ಇವೆ. ಜನಾಂಗೀಯವಾದದ ಬೇರುಗಳು ಇರುವುದು ಕೂಡ ಇಂತಹ ಧೋರಣೆಗಳಲ್ಲಿಯೇ. ಆದರೆ, ಅತ್ಯುನ್ನತ ಹುದ್ದೆಯಲ್ಲಿ ಇರುವ ಅಧಿಕಾರಿಯೊಬ್ಬರು ಕೂಡ ಈ ಬಗೆಯ ಧೋರಣೆಯ ಸಂತ್ರಸ್ತೆ ಎಂಬುದು ಈ ಪೂರ್ವಗ್ರಹವು ಎಷ್ಟು ಬಲಶಾಲಿಯಾಗಿ ಬೆಳೆದಿದೆ ಎನ್ನುವುದನ್ನು ತೋರಿಸುತ್ತದೆ. ಈ ವಿಚಾರವನ್ನು ಬಹಿರಂಗವಾಗಿ ಹೇಳುವ ಮೂಲಕ ಶಾರದಾ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ತಾನು ಮಗುವಾಗಿದ್ದಾಗ ಬೆಳ್ಳನೆಯ ಮೈಬಣ್ಣ ಹೊಂದಲು ಬಯಸಿದ್ದುದಾಗಿ, ತಾನು ಪರಿಪೂರ್ಣ ಅಲ್ಲ ಎಂದು ಭಾವಿಸಿದ್ದುದಾಗಿ ಹೇಳಿಕೊಂಡಿದ್ದಾರೆ. ಮೈಬಣ್ಣಕ್ಕೆ ಮೌಲ್ಯವನ್ನು ಆರೋಪಿಸುವ ಸಾಮಾಜಿಕ ಧೋರಣೆಯನ್ನು ಇಲ್ಲವಾಗಿಸಬೇಕಿದೆ. ಆದರೆ ಈಗಾಗಲೇ ಕಲಿತಿರುವ ಇಂತಹ ಕೆಟ್ಟ ಬುದ್ಧಿಯನ್ನು ಬಿಡುವುದಕ್ಕೆ ಸಮಾಜಕ್ಕೆ ಬಹಳ ಕಾಲ ಬೇಕಾಗಬಹುದು. ಚರ್ಮದ ಬಣ್ಣ ಯಾವುದೇ ಇದ್ದರೂ ಎಲ್ಲರೂ ಸಮಾನರು ಎನ್ನುವ ಪಾಠವನ್ನು ಶಾಲೆಗಳಲ್ಲಿಯೇ ಹೇಳಿಕೊಡಬೇಕು. ಇದು ಒಂದು ನೈತಿಕ ಮೌಲ್ಯವಾಗಿ ಸಮಾಜದಲ್ಲಿಯೂ ವ್ಯಾಪಕವಾಗಿ ಪಸರಿಸಬೇಕು.

## ರಾಮಾಯಣ



### ದಶರಥ ರಾಯನ ದು:ಖ

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ಸುಮಂತ್ರನು ಶೀಘ್ರದಲ್ಲಿ ಅಂತಃಪುರಕ್ಕೆ ಬಂದು ಅಲ್ಲಿದ್ದ ಸ್ತ್ರೀಯರನ್ನು ಕುರಿತು ದಶರಥ ರಾಯನು ನಿಮ್ಮನ್ನು ಶೀಘ್ರದಲ್ಲಿ ಕರೆತರಹೇಳಲು ನಾನು ನಿಮ್ಮ ಸಮೀಪಕ್ಕೆ ಬಂದೆನು. ನೀವೆಲ್ಲರೂ ಬನ್ನಿರಿ ಎಂದು ಹೇಳಿದನು. ಆ ಮಾತನ್ನು ಕೇಳಿ ಅಂತಃಪುರದಲ್ಲಿದ್ದ ಸ್ತ್ರೀಯರು ಸುಮಂತ್ರನೊಡನೆ ದಶರಥರಾಯನ ಸಮೀಪಕ್ಕೆ ಬಂದರು. ಆಗ ಮುನ್ನೂರೈವತ್ತು ಮಂದಿ ಸ್ತ್ರೀಯರು ಕೌಸಲಾದೇವಿಯ ಸುತ್ತಲೂ ಬರುತ್ತಿದ್ದರು. ದಶರಥರಾಯನು ತನ್ನ ಅಂತಃಪುರದ ಸ್ತ್ರೀಯರೆಲ್ಲರೂ ಬಂದಮೇಲೆ ಶ್ರೀರಾಮನನ್ನು ಕರೆದುಕೊಂಡುಬರಹೇಳಿ ಸುಮಂತ್ರನನ್ನು ಕಳುಹಿಸಿದನು. ಆತನು ಶೀಘ್ರವಾಗಿ ಆರಮನೆಯ ಹೊರಬಾಗಿಲಿಗೆ ಬಂದು ಸೀತಾಲಕ್ಷ್ಮಣ ಸಮೇತನಾದ ಶ್ರೀರಾಮನನ್ನು ಕರೆದುಕೊಂಡು ದಶರಥರಾಯನ ಸಮೀಪಕ್ಕೆ ಬಂದನು. ದೂರದಲ್ಲಿಯೇ ಕೈ ಮುಗಿದುಕೊಂಡು ಬರುತ್ತಿದ್ದ ಶ್ರೀರಾಮನನ್ನು ಕಂಡು ದಶರಥರಾಯನು ಪುತ್ರ ವಾತ್ಸಲ್ಯದಿಂದೆದ್ದು ಬರುತ್ತ ದುಃಖಾತಿಶಯದಿಂದ ಮೂರ್ಛಿತನಾಗಿ ಭೂಮಿಯಲ್ಲಿ ಬಿದ್ದನು. ಶ್ರೀರಾಮನು ಲಕ್ಷ್ಮಣನೊಡನೆ ಕೂಡಿ ಆತನನ್ನು ಕೈಗಳಿಂದೆತ್ತಿ ಮಂಚದ ಮೇಲೆ ಮಲಗಿಸಿದನು. ಸ್ವಲ್ಪ ಹೊತ್ತಿನಲ್ಲಿ ದಶರಥನು ಚೇತರಿಸಿಕೊಂಡು ಎಚ್ಚತ್ತು ಶೋಕವೆಂಬ ಸಮುದ್ರದಲ್ಲಿ ಮುಳುಗಿ ಹೋದನು. ಶ್ರೀರಾಮನು ಕೈಮುಗಿದುಕೊಂಡು ಆತನನ್ನು ಕುರಿತು ಮಹಾರಾಜ, ನೀನು ಸಮಸ್ತ ಲೋಕಗಳಿಗೂ ನಮಗೂ ಒಡೆಯನು. ನಿನ್ನನ್ನು ಬೇಡಿಕೊಂಡು ನಿನ್ನ ಅಪ್ಪಣೆಯಿಂದ ದಂಡ ಶ್ರೀಚಾಮರಾಜೋಕ್ತಿವಿಲಾಸವೆಂಬ ಕನ್ನಡ ರಾಮಾಯಣ ಕಾರಣ್ಯಕ್ಕೆ ಪ್ರಯಾಣವಾಗಿ ಬಂದ ನನ್ನನ್ನು ಕೃಪಾದೃಷ್ಟಿಯಿಂದ ನೋಡು. ನನ್ನ ಸಂಗಡ ಲಕ್ಷ್ಮಣನೂ ಸೀತಾದೇವಿಯೂ ಬರುವುದಾಗಿ ಹೇಳುತ್ತಾರೆ. ನಾನು ಬರಕೂಡದೆಂದು ಬಹಳವಾಗಿ ಒಡಂಬಡಿಸಿದರೂ ಕೇಳದೆ ನನ್ನೊಡನೆ ಪ್ರಯಾಣವಾಗಿ ಹೊರಟಿದ್ದಾರೆ. ನಿನ್ನ ಚಿತ್ರಕ್ಕೆ ಸರಿಬಂದರೆ ಸೀತಾದೇವಿ ಲಕ್ಷ್ಮಣರನ್ನು ನನ್ನ ಜೊತೆಯಲ್ಲಿ ಕಳುಹಿಸು. ನೀನು ಮನಸ್ಸಿನಲ್ಲಿ ಚಿಂತೆಯನ್ನು ಬಿಡು. ಬ್ರಹ್ಮದೇವನು ತನ್ನ ಮಕ್ಕಳಿಗೆ ಆಜ್ಞಾಪಿಸುವಂತೆ ನೀನು ನಿಮ್ಮನ್ನು ವನವಾಸಕ್ಕೆ ಏಕಾಗ್ರಚಿತ್ರದಿಂದ ಕಳುಹಿಸು ಎಂದನು.

ದಶರಥರಾಯನು ಶ್ರೀರಾಮನನ್ನು ಕುರಿತು ಶ್ರೀರಾಮ, ಕೈಕೇಯಿಗೆವರವನ್ನು ಕೊಟ್ಟು ಆಕೆಯ ಮಾತುಗಳಿಗೆ ಒಳಪಟ್ಟಿತು. ನೀನು ನನ್ನನ್ನು ಸೆರೆಯಲ್ಲಿಟ್ಟು ರಾಜ್ಯವನ್ನು ವಹಿಸಿಕೊಂಡು ಆಯೋಧಾಪಟ್ಟಣದಲ್ಲಿ ಸುಖವಾಗಿರು ಎಂದು ನುಡಿದನು. ಸಮಸ್ತ ಧರ್ಮರಹಸ್ಯವನ್ನೂ ಬಲ್ಲ ಶ್ರೀರಾಮನು ಕೈ ಮುಗಿದುಕೊಂಡು ಆ ರಾಜನನ್ನು ಕುರಿತು ಮಹಾರಾಜ, ನೀನು ಇನ್ನು ಸಾವಿರವರುಷಗಳವರೆಗೆ ಭೂಮಿಗೆ ಒಡೆಯನಾಗಿರಬೇಕು. ನಾನು ವನವಾಸವನ್ನು ಹದಿನಾಲ್ಕು ವರುಷಗಳವರೆಗೆ ಮಾಡುತ್ತೇನೆ. ನಿನ್ನ ಪ್ರತಿಜ್ಞಾಭಂಗವನ್ನು ಮಾಡಲಾರೆನು ಎಂದು ಹೇಳಿ ನಮಸ್ಕರಿಸಿದನು. ಆ ರಾಜನು ತನ್ನ ಸತ್ಯವನ್ನು ತಪ್ಪಬಾರದೆಂಬ ಬುದ್ಧಿಯಿಂದ ಕೈಕೇಯಾದೇವಿಯ ಮಾತನ್ನು ಮೀರದೆ ಆಳುತ್ತಾ ಪ್ರಿಯಪುತ್ರನಾದ ಶ್ರೀರಾಮನನ್ನು ಕುರಿತು ಹೀಗೆ ಹೇಳಿದನು : ಶ್ರೀರಾಮ ನೀನು ವನಕ್ಕೆ ತೆರಳು. ನಿನಗೆ ಬಹು ಶ್ರೇಯಸ್ಸಾಗುವುದು ! ನಿನ್ನ ಮನೋರಥವು ಅಭಿವೃದ್ಧಿ ಯಾಗಲಿ! ನೀನು ಮಾರ್ಗದಲ್ಲಿ ಭಯವಿಲ್ಲದೆ ನಿರ್ವಿಘ್ನವಾಗಿ ವ್ರತಸಮಾಪ್ತಿ ಮಾಡಿ ತಿರುಗಿ ಬರುವೆ.


ಮುಂದುವರಿಯುವುದು...

# ಮೂರು ಭಯಾನಕ ಕಾಯಿಲೆಗಳು ಅಪಾಯವು ಪ್ರತಿ ವರ್ಷವೂ ಹೆಚ್ಚುತ್ತಿದೆ!

ಆರೋಗ್ಯವೇ ಭಾಗ್ಯ ಎಂಬುದು ಎಲ್ಲರಿಗೂ ತಿಳಿದಿ ರುವ ವಿಚಾರ. ಇಂದಿನ ವೇಗದ ಜೀವನದಲ್ಲಿ ನಮ್ಮಲ್ಲಿ ಬಹುತೇಕ ಮಂದಿ ಜೀವನಶೈಲಿಯನ್ನೇ ಬದಲಾಯಿಸಿ ಕೊಂಡಿದ್ದೇವೆ. ಸಮಯವಿಲ್ಲ ಎಂದು ಹೆಚ್ಚಾಗಿ ಹೊರಗಿನ ತಿಂಡಿ ತಿನಿಸುಗಳ ಮೇಲೆಯೇ ಅವಲಂಬಿತರಾಗಿದ್ದೇವೆ. ಜಡ ಜೀವನಶೈಲಿ, ಒಂದೇ ಕಡೆ ಬಹು ಗಂಟೆ ಕುಳಿತು ಕೆಲಸ ಮಾಡುವುದು, ಸದಾ ಕಾಲ ಮೊಬೈಲ್ ಜಾಲಾಡುವುದು ಇತ್ಯಾದಿ ನಮ್ಮ ಆರೋಗ್ಯದ ಮೇಲೆ ಸಾಕಷ್ಟು ಹಾನಿಕಾರಕ ಪರಿಣಾಮಗಳನ್ನು ಬೀರುತ್ತಿದೆ

ಇಂದಿನ ದಿನಗಳಲ್ಲಿ ನಮ್ಮ ಪರಿಸ್ಥಿತಿ ಹೇಗೆ ಆಗಿಬಿಟ್ಟಿದೆ ಎಂದರೆ ಆಧುನಿಕ ಜೀವನಶೈಲಿಯಿಂದಾಗಿ, ನಮ್ಮ ಆರೋಗ್ಯದ ಕಡೆಗೆ ಗಮನಹರಿಸಲು ಸಮಯವೇ ಸಿಗುತ್ತಿಲ್ಲ! ಹೀಗಾಗಿ ಏನಾದರೊಂದು ಕಾಯಿಲೆಗಳು ನಮ್ಮನ್ನು ಮುತ್ತಿಕ್ಕಿಕೊಂಡು ಹೋಗುತ್ತದೆ. ಇದರಿಂದ ಹೊರಬರಲು ದುಡಿದಿರುವಂತಹ ಹಣವನ್ನು ಆಸ್ಪತ್ರೆಗಳಿಗೆ ಸುರಿಯಬೇಕಾಗುತ್ತದೆ. ಇದಕ್ಕೆಲ್ಲಾ ಪ್ರಮುಖ ಕಾರಣ ಒತ್ತಡದ ಜೀವನಶೈಲಿ, ಅನಾರೋಗ್ಯಕಾರಿ ಆಹಾರಪದ್ಧತಿ ನಿರಂತರವಾಗಿ ಮೊಬೈಲ್ ಅಥವಾ ಲ್ಯಾಪ್‌ಟಾಪ್‌ನಲ್ಲಿ ರಾತ್ರಿ, ಹಗಲು ಎನ್ನದೆ ತೊಡಗಿಸಿ ಕೊಳ್ಳುವುದು, ಹೀಗೆ ಹಲವಾರು ಕಾರಣಗಳಿಂದಾಗಿ ಹಲವಾರು ದೀರ್ಘಕಾಲದ ಕಾಯಿಲೆಗಳು, ಸೈಲೆಂಟಾಗಿ ನಮ್ಮನ್ನು ಆವರಿಸಿಕೊಂಡು ಬಿಡುತ್ತಿದೆ!





ವಿಶೇಷವಾಗಿ ಪ್ರತಿ ವರ್ಷ ವೇಗವಾಗಿ ಹೆಚ್ಚುತ್ತಿರುವ ಮೂರು ಕಾಯಿಲೆಗಳಾದ ಕ್ಯಾನ್ಸರ್, ಹೃದ್ರೋಗ ಮತ್ತು ಲಿವರ್‌ಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳು ಬಹಳ ವೇಗವಾಗಿ ಮನುಷ್ಯರಲ್ಲಿ ಸಣ್ಣ ವಯಸ್ಸಿಗೆ ಕಾಣಿಸಿಕೊಳ್ಳುತ್ತಿದೆ! ಈ ಮೂರು ಕಾಯಿಲೆಗಳು ಎಷ್ಟು ಅಪಾಯಕಾರಿಯೆಂದರೆ, ಒಮ್ಮೆ ಮನುಷ್ಯನನ್ನು ಈ ಕಾಯಿಲೆಗಳು ಆವರಿಸಿಬಿಟ್ಟರೆ, ನಂತರ ಈ ಕಾಯಿಲೆಗಳಿಂದ ಹೊರಬರುವುದು ಅಷ್ಟು ಸುಲಭದ ಮಾತಲ್ಲ! ಅವುಗಳಲ್ಲಿ ಕ್ಯಾನ್ಸರ್ ಅತ್ಯಂತ ಅಪಾಯಕಾರಿ..

ಜಗತ್ತಿನಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಕಾಯಿಲೆಗಳು ಜಗತ್ತಿನಲ್ಲಿ ಕ್ಯಾನ್ಸರ್, ಹೃದ್ರೋಗ ಹಾಗೂ ಲಿವರ್ ಕಾಯಿಲೆಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ.

ಈ ಹಿಂದೆ ಇಂತಹ ಆರೋಗ್ಯ ಸಮಸ್ಯೆಗಳು ವಯಸ್ಸಾದವರಿಗೆ ಮಾತ್ರ ಸೀಮಿತ ವೆಂದು ಪರಿಗಣಿಸಲಾಗಿತ್ತು, ಆದರೆ ಈಗನ ಪರಿಸ್ಥಿತಿ ಮುಂಚಿನ ಹಾಗೆ ಇಲ್ಲ! ಸಣ್ಣ ವಯಸ್ಸನವರಲ್ಲಿಯೂ ಕೂಡ, ಪ್ರಾಣಕ್ಕೆ ಅಪಾಯ ಉಂಟು ಮಾಡುವಂತಹ ಕಾಯಿಲೆಗಳು ಕಾಣಸಿಕೊಳ್ಳುತ್ತದೆ. ಇಂದಿನ ಲೇಖನದಲ್ಲಿ ಸಣ್ಣ ವಯಸ್ಸಿಗೆ ಕಾಣಿಸಿ ಕೊಳ್ಳುತ್ತಿರುವ ಕೆಲವೊಂದು ಕಾಯಿಲೆಗಳ ಬಗ್ಗೆ ನೋಡೋಣ ಬನ್ನಿ

**ಹೃದಯಕ್ಕೆ ಸಂಬಂಧಿಸಿದ ಕಾಯಿಲೆ :** ಹೃದಯಾಘಾತ ಅಥವಾ ಹಾರ್ಟ್ ಅಟ್ಯಾಕ್ ಎಂದರೆ ಅದು ವಯಸ್ಸಾದವರಿಗೆ ಮಾತ್ರ ಎನ್ನುವುದನ್ನು ನಾವೆಲ್ಲರೂ ಅಂದು ಕೊಂಡಿದ್ದೇವು. ಆದರೆ ಇಂದಿನ ದಿನಗಳಲ್ಲಿ ಹೃದಯಾಘಾತ ಎನ್ನುವುದು ಮಕ್ಕಳಿಂದ ಹಿಡಿದು ವಯಸ್ಸಾದವರ ತನಕ ಪ್ರತಿಯೊಬ್ಬರನ್ನು ಕಾಡಲು ಆರಂಭಿಸಿದೆ.

ಅದರಲ್ಲೂ ಹದಿಹರೆಯದವರು ಹೃದಯಾಘಾತಕ್ಕೆ ಒಳಗಾಗು ವುದು ಹೆಚ್ಚಾಗಿದ್ದು, ವಿಶ್ವದಾದ್ಯಂತ ಸುಮಾರು 17.9 ಮಿಲಿಯನ್ ಜನರು ಹೃದಯಾಘಾತಕ್ಕೆ ಬಲಿಯಾಗಿದ್ದಾರಂತೆ ಇದಕ್ಕೆಲ್ಲಾ ಪ್ರಮುಖ ಕಾರಣ ಅತಿಯಾದ ಒತ್ತದ ಜೀವನಶೈಲಿ, ಸರಿಯಾದ ವ್ಯಾಯಾಮ, ಆಹಾರಪದ್ಧತಿ ಅನುಸರಿಸದಿರುವುದು, ಹಾಗೂ ದುರಾಭ್ಯಾಸಗಳಾದ ತಂಬಾಕು ಸೇವನೆ ಧೂಮಪಾನ, ಆಲ್ಕೋ ಹಾಲ್ ನಂತಹ ಕೆಲವು ದುರಾಭ್ಯಾಸಗಳು ಹೃದಯದ ಕಾಯಿಲೆಗಳಿಗೆ ಪ್ರಮುಖ ಕಾರಣವಾಗಿದೆ ಹೃದಯಾಘಾತವನ್ನು ಸೈಲೆಂಟ್ ಕಿಲ್ಲರ್ ಹಾಗೂ ಬಹಳ ಅಪಾಯಕಾರಿ ಕಾಯಿಲೆ ಎಂದು ಕರೆಯುತ್ತಾರೆ. ಯಾಕೆಂದ್ರೆ, ನಿನ್ನೆಯವರೆಗೆ ನಮ್ಮ ಕಣ್ಣ ಮುಂದೆ ಓಡಾಡಿ ಕೊಂಡಿರುವ ವ್ಯಕ್ತಿ, ಇಂದು ಹೃದಯಾಘಾತದ ಕಾರಣ ದಿಂದಾಗಿ ದೇವರ ಪಾದ ಸೇರುತ್ತಾನೆ!

ಸದ್ದಿಲ್ಲದೆ ದೇಹದ ಒಳಗೊಳಗೆ ಷಡ್ಯಂತ್ರ ಮಾಡಿ, ಒಬ್ಬ ವ್ಯಕ್ತಿ ಯನ್ನು ಮುಗಿಸಿ ಬಿಡುವ ಖತರ್ನಾಕ್ ಕಾಯಿಲೆಗಳಲ್ಲಿ ಹೃದಯಾ ಘಾತ ಕೂಡ ಒಂದು ಇನ್ನು ಈ ಕಾಯಿಲೆ ಎಷ್ಟು ಅಪಾಯಕಾರಿ ಎಂದರೆ, ಕೆಲವೊಮ್ಮೆ ಈ ಕಾಯಿಲೆಯ ರೋಗ ಲಕ್ಷಣಗಳನ್ನು ಕಂಡು ಹಿಡಿಯಲು ವೈದ್ಯರಿಗೂ ಕೂಡ ಸಾಧ್ಯವಾಗುವುದಿಲ್ಲ ಈ ಕಾಯಿಲೆಯ ಲಕ್ಷಣಗಳ ಬಗ್ಗೆ ನೋಡುವುದಾದರೆ, ಪದೇ ಪದೇ ಆಯಾಸ ಸುಸ್ತು ಕಾಣಿಸಿಕೊಳ್ಳುವುದು, ಉಸಿರಾಟದಲ್ಲಿ ತೊಂದರೆ ಕಾಣಿಸಿಕೊಳ್ಳುವುದು ಇಲ್ಲಾಂದ್ರೆ, ನಿಧಾನಕ್ಕೆ ತಲೆತಿರುಗುವಿಕೆಯಂ ತಹ ಲಕ್ಷಣಗಳು ಕಾಣಿಸಿ ಕೊಳ್ಳುವುದು, ಕಣ್ಣುಗಳಲ್ಲಿ ಉರಿ, ಕೈ ತೋಳಿನ ಹಾಗೂ ಭುಜದಲ್ಲಿ ನೋವು ಕಾಣಿಸಿಕೊಳ್ಳುವುದು. ಆದರೆ ಬೇಜಾರಿನ ಸಂಗತಿ ಏನೆಂದ್ರೆ, ಅನೇಕ ಜನರಿಗೆ ತಮಗೆ ಹೃದಯ ಸಮಸ್ಯೆ ಇದೆ ಎಂದು ತಿಳಿದಿರುವುದಿಲ್ಲ,

## ಮೊದಲನೇಯದಾಗಿ ಕ್ಯಾನ್ಸರ್ ಕಾಯಿಲೆ

**ಅಯ್ಯೋ ಕ್ಯಾನ್ಸರ್ ಎನ್ನುವ ಪದ ಕೇಳಿದರೆ ಸಾಕು ಕುಳಿತಲ್ಲೇ ನಡುಕ ಶುರುವಾಗುತ್ತದೆ ಮನಸ್ಸಿನಲ್ಲಿ ಏನೋ ಒಂದು ರೀತಿಯ ಭಯದ ವಾತಾವರಣ ಕಂಡು ಬರುತ್ತದೆ. ಯಾಕೆಂದ್ರೆ ಈ ಕಾಯಿಲೆ ಒಮ್ಮೆ ಮನುಷ್ಯನನ್ನು ಅವರಿಸಿಬಿಟ್ಟರೆ, ಆತ ಇನ್ನು ಹೆಚ್ಚು ಬದುಕುವುದಿಲ್ಲ ಎನ್ನುವ ಆಲೋಚನೆ ಆಗಲೇ ಮನಸ್ಸಿನಲ್ಲಿ ಮೂಡಿಬಿಡುತ್ತದೆ ಹೀಗಾಗಿ ವಿಶ್ವದೆಲ್ಲೆಡೆಯಲ್ಲಿ ಹಬ್ಬುತ್ತಿರುವಂತಹ ಕ್ಯಾನ್ಸರ್ ಎನ್ನುವ ಮಹಾಮಾರಿಯನ್ನು ದೂರವಿಡಲು ಅದನ್ನು ಆರಂಭದಲ್ಲೇ ಪತ್ತೆ ಮಾಡುವುದು ಅತೀ ಅಗತ್ಯ. ಯಾಕೆಂದರೆ ಇದನ್ನು ಅಂತಿಮ ಹಂತದಲ್ಲಿ ಪತ್ತೆಯಾದರೆ, ಆಗ ಇದಕ್ಕೆ ಯಾವುದೇ ರೀತಿಯ ಚಿಕಿತ್ಸೆಯು ಫಲಿಸದು. ಇದರಲ್ಲಿಯೂ ಕೂಡ ಹಲವು ರೀತಿಯ ಕ್ಯಾನ್ಸರ್‌ಗಳು ಸೇರಿವೆ. ಸ್ತನ ಕ್ಯಾನ್ಸರ್, ಶ್ವಾಸಕೋಶದ ಕ್ಯಾನ್ಸರ್, ಕರುಳಿನ ಕ್ಯಾನ್ಸರ್, ಯಕೃತ್ತಿನ ಕ್ಯಾನ್ಸರ್, ಚರ್ಮದ ಕ್ಯಾನ್ಸರ್ ಕೂಡ ಇಂದಿನ ದಿನಗಳಲ್ಲಿ ಯುವಜನರಲ್ಲಿ ಕಾಣಿಸಿಕೊಳ್ಳುತ್ತಿದೆ.**



# 10 ರೂಪಾಯಿ ಖರ್ಚಿಲ್ಲದೆ ಮುಖದ ಕಾಂತಿ ಹೆಚ್ಚಿಸೋದು ಹೇಗೆ ಈ ಫೇಸ್ ಮಾಸ್ಕ್ ಬಳಸಿ..!

ಮುಖದ ಕಾಂತಿ ಹೆಚ್ಚಿಸಿಕೊಳ್ಳಬೇಕು. ಕಲೆಗಳು ನಿವಾರಣೆಯಾಗಬೇಕು. ಅನ್ನೋದು ಎಲ್ಲಾ ಮಹಿಳೆಯರ ಆಸೆಯಾಗಿರುತ್ತೆ. ಅದರಲ್ಲೂ ಯುವ ಜನತೆ ತಮ್ಮ ಮುಖದ ಕಾಂತಿ ಹೆಚ್ಚಿಸಿಕೊಳ್ಳಲು ಹಲವು ರೀತಿಯ ಪ್ರಯತ್ನದಲ್ಲಿ ತೊಡಗುವುದು ನೋಡಬಹುದು. ಇದಕ್ಕಾಗಿ ಹತ್ತಾರು ಬಗೆಯ ಅದರಲ್ಲೂ ಮಾರುಕಟ್ಟೆಯಲ್ಲಿ ಸಿಗುವಂತಹ ದುಬಾರಿ ಬೆಲೆಯ ವಸ್ತುಗಳನ್ನು ಮುಖಕ್ಕೆ ಹಚ್ಚಲು ಬಳಸುತ್ತಾರೆ. ಇನ್ನು ಮಹಿಳೆಯರು ಪಾರ್ಲರ್‌ಗೆ ತೆರಳುವ ಮೂಲಕ ಈ ರೀತಿಯಾಗಿ ಮುಖ ಹೊಳಪು ಬರುವಂತೆ ಫೇಷಿಯಲ್ ಮಾಡಿಸುವುದು ನೋಡಬಹುದು. ಪಾರ್ಲರ್‌ನಲ್ಲೂ ಸಾವಿರಾರು ರೂಪಾಯಿ ನೀಡಬೇಕಾಗುತ್ತದೆ. ಅದು ಕೂಡ ನಿಗದಿತ ಸಮಯದಲ್ಲಿ ಮತ್ತೆ ಮತ್ತೆ ಫೇಷಿಯಲ್‌ಗೆ ಒಳಗಾಗಬೇಕಾಗುತ್ತದೆ. ಹೀಗಾಗಿ ಪಾರ್ಲರ್‌ಗೆ ಹೋಗುವ ಮಂದಿ ಯಾವಾಗಲು ಅದಕ್ಕೆ ಹೊಂದಿಕೊಳ್ಳುತ್ತಾರೆ. ಇನ್ನು ಪಾರ್ಲರ್ ಸೌಂದರ್ಯವನ್ನು ಮನೆಯಲ್ಲೇ ಪಡೆದರೆ ಹೇಗೆ ಹೌದು ಪಾರ್ಲರ್‌ಗೆ ಸಾವಿರಾರು ರೂಪಾಯಿ ಖರ್ಚು ಮಾಡುವ ಬದಲಾಗಿ ಮನೆಯಲ್ಲೇ ಸುಲಭವಾಗಿ ಕಡಿಮೆ ಖರ್ಚಿನಲ್ಲಿ ಮುಖದ ಕಾಂತಿ ಹೊಳೆಯುವಂತೆ ಮಾಡಬಹುದು. ಅಂದಹಾಗೆ ಮನೆಯಲ್ಲಿ ಯಾವ ರೀತಿಯಾಗಿ ಫೇಷಿಯಲ್ ಮಾಡಿಕೊಳ್ಳಬಹುದು. ಅದಕ್ಕೆ ಯಾವ ವಸ್ತುಗಳ ಬಳಸಬೇಕು ಎಂಬುದನ್ನು ನಾವಿಂದು ತಿಳಿದುಕೊಳ್ಳೋಣ. ಮುಖವು ಬಾಡಿರುವಂತೆ ಅಥವಾ ಹೊಳಪು ಕಳೆದುಕೊಂಡಂತೆ ಕಾಣಲು ಹಲವು ಕಾರಣಗಳಿವೆ. ಅದರಲ್ಲೂ ನೈಸರ್ಗಿಕವಾಗಿ ನಿಮ್ಮ ಮುಖದ ಟೋನ್ ಬದಲಾಗಿದ್ದರೆ ಈ ರೀತಿಯಾಗಿ ನೀವು ಮನೆಯಲ್ಲೇ ಫೇಷಿಯಲ್ ಮಾಡಿಕೊಳ್ಳುವುದು ಉತ್ತಮ.

**ಜೇನು ತುಪ್ಪ ಹಾಗೂ ಅರಶಿಣ:** ಮೊದಲು ಒಂದು ಬೌಲ್‌ನಲ್ಲಿ 1 ಚಮಚ ಜೇಣು ತುಪ್ಪ ತೆಗೆದುಕೊಳ್ಳಿ, ನಂತರ ಅರ್ಧ ಚಮಚ ಅರಶಿಣ ಪುಡಿ ಸೇರಿಸಿ ಮಿಶ್ರಣ ಮಾಡಿಕೊಳ್ಳಿ. ನಂತರ ತಣ್ಣೀರಿನಲ್ಲಿ ಮುಖವನ್ನು ತೊಳೆದು ಶುದ್ದ ಬಟ್ಟೆಯಲ್ಲಿ ಒರೆಸಿಕೊಳ್ಳಿ. ನಂತರ ಪೇಸ್ಟ್ ಅನ್ನು ಮುಖಕ್ಕೆ ಚೆನ್ನಾಗಿ ಹಚ್ಚಿಕೊಂಡು 15 ನಿಮಿಷ ಹಾಗೆಯೇ ಬಿಡಿ. ನಂತರ ಉಗುರು ಬೆಚ್ಚಗಿನ ನೀರಿನಿಂದ ಮುಖ ತೊಳೆದುಕೊಳ್ಳಿ. ಇದೇ ರೀತಿಯ ಪೇಸ್ಟ್ ಅನ್ನು ವಾರದಲ್ಲಿ 2 ರಿಂದ 3 ಬಾರಿ ಮಾಡಿದರೆ ಮುಖದ ಕಾಂತಿ ಹೊಳೆಯುತ್ತದೆ.

**ಆವಕಾಡೊ ಮತ್ತು ಮೊಸರು ಮಾಸ್ಕ್ :** ಆವಕಾಡೋ ಮಾಸ್ಕ್ ಮಾಡಲು ಆವಕಾಡೋವನ್ನು ಸಣ್ಣದಾಗಿ ಹೆಚ್ಚಿಕೊಂಡು ಅದಕ್ಕೆ 1 ಚಮಚ ಮೊಸರು ಸೇರಿಸಿ ಚೆನ್ನಾಗಿ ಕಲಸಿಕೊಳ್ಳಿ. ನಂತರ ಮುಖಕ್ಕೆ ಹಚ್ಚಿಕೊಂಡು 20 ನಿಮಿಷ ಹಾಗೆಯೇ ಬಿಡಿ. ನಂತರ ತಣ್ಣೀರಿನಿಂದ ಮುಖ ತೊಳೆದು ಶುದ್ದ ಬಟ್ಟೆಯಲ್ಲಿ ಒರೆಸಿಕೊಳ್ಳಿ. ಈ ರೀತಿ ವಾರದಲ್ಲಿ 2 ಬಾರಿ ಮಾಡಿ ನೋಡಿ.

**ಬಾಳೆಹಣ್ಣು ಮತ್ತು ಜೇನುತುಪ್ಪದ ಮಾಸ್ಕ್:** ಅರ್ಧ ಮಾಗಿದ ಬಾಳೆಹಣ್ಣನ್ನು ತೆಗೆದುಕೊಂಡು ಅದನ್ನು ಒಂದು ಬಟ್ಟಲಿನಲ್ಲಿ ಮ್ಯಾಶ್ ಮಾಡಿಕೊಳ್ಳಿ. ನಂತರ 1 ಚಮಚ ಜೇನುತುಪ್ಪ ಹಾಕಿಕೊಂಡು ಚೆನ್ನಾಗಿ ಮಿಕ್ಸ್ ಮಾಡಿ. ನಂತರ ಮುಖಕ್ಕೆ ಈ ಪೇಸ್ಟ್ ಹಚ್ಚಿಕೊಂಡು 15 ಕಾಲ ಹಾಗೆಯೇ ಬಿಡಿ. ನಂತರ ನೀರಿನಿಂದ ತೊಳೆದುಕೊಳ್ಳಿ. ಈ ರೀತಿ ವಾರದಲ್ಲಿ 3 ಬಾರಿ ಮಾಡಿ ನೋಡಿ.

**ಅಲೋವೆರಾ ಮತ್ತು ನಿಂಬೆ ಮಾಸ್ಕ್ :** ಈ ಮಾಸ್ಕ್ ಮಾಡಲು ಮೊದಲು 2 ಚಮಚ ಅಲೋವೆರಾ ಜೆಲ್ ತೆಗೆದುಕೊಳ್ಳಿ. ನಂತರ ಅದಕ್ಕೆ 1 ಚಮಚ ನಿಂಬೆ ರಸ ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ. ನಂತರ ಮುಖಕ್ಕೆ 10 ನಿಮಿಷ ಬಿಟ್ಟು ತೊಳೆದುಕೊಳ್ಳಿ. ವಾರದಲ್ಲಿ 2 ಬಾರಿ ಈ ರೀತಿ ಮಾಡಿ ನೋಡಿ. ನಿಮ್ಮ ಮುಖದ ಕಾಂತಿ ಹೆಚ್ಚಾಗುವುದು ಪಕ್ಕ. ಈ ರೀತಿಯ ಫೇಸ್ಟ್ ಮಾಸ್ಕ್ ಮಾಡಿದರೆ ಮುಖ ಕಾಂತಿಯುವತವಾಗಿ ಹೊಳೆಯಲಿದೆ.



# ಭಕ್ತ ಶಿರೋಮಣಿ ಸಂಕಟಮೋಚನ ಹನುಮಂತನ ವಿವಿಧ ಗುಣವೈಶಿಷ್ಟ್ಯಗಳು

■ ಶ್ರೀ. ವಿನೋದ್ ಕಾಮತ್

**ಜಿತೇಂದ್ರಿಯ :** ಮಾರುತಿ ಎಂದರೆ ಮೂರನೇ ನೇತ್ರವನ್ನು ತೆರೆದು ಕಾಮದೇವನನ್ನು ಭಸ್ಮಗೊಳಿಸಿದ ಶಿವಶಂಕರನ ಅಂಶಾವತಾರವಾಗಿದ್ದಾನೆ. ಆದ್ದರಿಂದ ಅವನು ಕಾಮವಾಸನೆ ಸಹಿತ ಷಡ್ರಿಪುಗಳನ್ನು ಜಯಿಸಿದ್ದಾನೆ. ಎಲ್ಲ ಇಂದ್ರಿಯಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವ ಸಾಮರ್ಥ್ಯ ಹನುಮಂತನಿಗಿರುವುದರಿಂದ ಅವನನ್ನು 'ಜಿತೇಂದ್ರಿಯ'ನೆಂದು ಗೌರವಿಸಲಾಗಿದೆ.

**ವಜ್ರಾಂಗ ಬಜರಂಗಬಲಿ :** ಹನು ಮಂತನ ದೇಹ ವಜ್ರದಂತೆ ಕಠೋರವಾದೆ. ಆದ್ದರಿಂದ ಶತ್ರುಗಳು ಬಿಡುವ ದಿವ್ಯಾಸ್ತ್ರಗಳು ಅವನ ದೇಹವನ್ನು ಭೇದಿಸುವುದಿಲ್ಲ. ತ್ರೇತಾಯುಗದಲ್ಲಿ ರಾವಣನ ಸೈನ್ಯವು ವಾನರ ಸೈನ್ಯದ ಮೇಲೆ ಮತ್ತು ದ್ವಾಪರಯುಗದಲ್ಲಿ ಮಹಾಭಾರತ ಯುದ್ಧದಲ್ಲಿ ಕೌರವರು ಪಾಂಡವರ ಮೇಲೆ ಪ್ರಯೋಗಿಸಿದ ದಿವ್ಯಾಸ್ತ್ರಗಳು ಹನುಮಂತನ ಕೃಪೆಯಿಂದ ವಿಫಲವಾದವು. ತ್ರೇತಾ ಮತ್ತು ದ್ವಾಪರ ಯುಗದ ಯುದ್ಧಗಳಲ್ಲಿ ಶತ್ರುಗಳಿಂದ ಅಸಂಖ್ಯಾತ ಶಸ್ತ್ರಾಸ್ತ್ರಗಳ ಆಘಾತವಾದರೂ ವಜ್ರಾಂಗ ಹನುಮಂತನ ಮೇಲೆ ಯಾವುದೇ ಪರಿಣಾಮವಾಗಲಿಲ್ಲ.



**ಮಹಾವೀರ ಮತ್ತು ಮಹಾಶಕ್ತಿಶಾಲಿ:** ಹನುಮಂತನು ಸೀತೆಯನ್ನು ಹುಡುಕಲು ಮಾರುವೇಷದಲ್ಲಿ ಲಂಕಾನಗರದೊಳಗೆ ಪ್ರವೇಶಿಸಿದಾಗ, ಲಂಕೆಯನ್ನು ರಕ್ಷಿಸುತ್ತಿದ್ದ ಲಂಕಿಣಿ ಎಂಬ ಹೆಸರಿನ ರಾಕ್ಷಸಿ ಅವನನ್ನು ಪ್ರವೇಶದ್ವಾರದಲ್ಲಿ ತಡೆದಳು. ಆಗ ಹನುಮಂತನು ತಕ್ಷಣ ವಿರಾಟ ರೂಪ ಧರಿಸಿ ಲಂಕಿಣಿಯ ಹಣೆಗೆ ರಭಸದಿಂದ ಮುಷ್ಟಿಪ್ರಹಾರ ಮಾಡಿದನು. ಒಂದು ಮುಷ್ಟಿ ಪ್ರಹಾರದಲ್ಲಿ ಲಂಕಿಣಿಯ ದುರ್ದಶೆಯಾಯಿತು ಹಾಗೂ ಅವಳು ಹನುಮಂತನಿಗೆ ಶರಣಾದಳು. ಯುದ್ಧಕುಶಲ ಮತ್ತು ದಿವ್ಯಾಸ್ತ್ರಗಳ ಬಗ್ಗೆ ಜ್ಞಾನವಿರುವವನು : ಹನುಮಂತನು ವೀರರೂಪವನ್ನು ಧರಿಸಿ ಸೂರಸಾ ರಾಕ್ಷಸಿ, ಅಕ್ಷಯಕುಮಾರ, ಜಂಬುಮಾಳಿ,ದೇವಾಂತಕ, ನರಾಂತಕ, ತ್ರಿಶಿರಾ, ಅಹಿರಾವಣ, ಮಹಿರಾವಣ, ಮಾಯಾಸುರ ಮೊದಲಾದ ರಾಕ್ಷಸರೊಂದಿಗೆ ಯುದ್ಧ ಮಾಡಿ ಅವರನ್ನು ವಧಿಸಿದನು. ಅವನಿಗೆ ದಿವ್ಯಾಸ್ತ್ರಗಳ ಜ್ಞಾನವಿತ್ತು.

**ನೇತೃತ್ವಗುಣ ಸಂಪನ್ನ :** ಹನುಮಂತನು ಅನೇಕ ಪ್ರಸಂಗಗಳಲ್ಲಿ ಉತ್ತಮ ನೇತೃತ್ವವನ್ನು ಮಾಡಿದನು. ಅದರ ಉದಾಹರಣೆಗಳು ಈ ಮುಂದಿನಂತಿವೆ. ಹನುಮಂತ, ಅಂಗದ, ಜಾಂಬವಂತ ಮತ್ತು ವಾನರ ಸೇನೆಯು ಸೀತೆಯನ್ನು ಹುಡುಕಲು ದಕ್ಷಿಣ ದಿಕ್ಕಿಗೆ ಹೋದಾಗ ಸಂಪಾತಿಯು ಅವರಿಗೆ ಸೀತಾಮಾತೆಯು ಸಮುದ್ರದಲ್ಲಿರುವ ಲಂಕೆಯ ದ್ವೀಪದಲ್ಲಿ ಬಂಧನದಲ್ಲಿದ್ದಾಳೆಂದು ಹೇಳಿತು. 100 ಯೋಜನ ಸಮುದ್ರವನ್ನು ದಾಟಿ ಲಂಕೆಗೆ ಯಾರು ಹೋಗುವರು, ಎನ್ನುವ ಪ್ರಶ್ನೆ ಎಲ್ಲಾ ವಾನರರ ಮುಂದಿತ್ತು. ಆಗ ಹನುಮಂತನು 100 ಯೋಜನ ಸಮುದ್ರವನ್ನು ಒಂದೇ ಉಸಿರಿನಲ್ಲಿ ದಾಟಿ ಶತ್ರುವಿನ ನಗರದೊಳಗೆ ಪ್ರವೇಶಿಸಿ ಸೀತಾ ಮಾತೆಯನ್ನು ಹುಡುಕುವ ಹೊಣೆಯನ್ನು ಸ್ವೀಕರಿಸಿ ಅದನ್ನು ಪೂರ್ಣ ಗೊಳಿಸಿದನು. ಸಂಕಟದಲ್ಲಿಯೂ ಭಯಭೀತನಾಗದೆ ಧೈರ್ಯದಿಂದ ಉಪಾಯವನ್ನು ಕಂಡು ಹಿಡಿಯುವ ಹನುಮಂತ ! ಲಂಕೆಯಲ್ಲಿ ಯುದ್ಧದ ಸಮಯದಲ್ಲಿ ಇಂದ್ರಜಿತನು ರಾಮ ಮತ್ತು ಲಕ್ಷ್ಮಣನ ಮೇಲೆ ನಾಗಪಾಶವನ್ನು ಪ್ರಯೋಗಿಸಿ ಅವರನ್ನು ಬಂಧಿಸಿದನು, ಆಗ ವಾನರ ಸೇನೆಯಲ್ಲಿ ಹಾಹಾಕಾರ ಹರಡಿತು. ಆಗ ಹನುಮಂತನು ಶೂನ್ಯ ಗತಿಯಲ್ಲಿ ವೈಕುಂಠಕ್ಕೆ ಹೋಗಿ ಗರುಡನನ್ನು ಕರೆದುಕೊಂಡು ಪೃಥ್ವಿಗೆ ಬಂದನು. ಗರುಡನು ರಾಮ ಮತ್ತು ಲಕ್ಷ್ಮಣರನ್ನು ನಾಗಪಾಶದಿಂದ ತಕ್ಷಣ ಮುಕ್ತಗೊಳಿಸಿದನು.

**ಹನುಮಾನ ಜಯಂತಿಯ ನಿಮಿತ್ತ ಸನಾತನ ಸಂಸ್ಥೆಯ ವಿಶೇಷ ಲೇಖನ**

# ಬಿಬಿಎಂಪಿ ನೌಕರರ ಕ್ಷೇಮಾಭಿವೃದ್ದಿ ಸಂಘದ ವತಿಯಿಂದ 50ಲಕ್ಷ ರೂ.ದೇಣಿಗೆ

## ಸಂಘದ ಜೊತೆಯಲ್ಲಿ ದೇವಸ್ಥಾನ ಆಡಳಿತ ಮಂಡಳಿ, ಅರ್ಚಕರು ನವೀಕರಣ ಮಾಡಲು ಆರ್ಥಿಕ ಸಹಕಾರ ಕೊಡುವಂತೆ ಮನವಿ

• ಉದಯ ವಾಹಿನಿ, ಬೆಂಗಳೂರು

ಬಿಬಿಎಂಪಿ ಕೇಂದ್ರ ಕಛೇರಿ ಅವರಣದಲ್ಲಿರುವ ಏಳು ಸುತ್ತಿನ ಕೋಟೆ ಸಪ್ತಮಾತೃಕಾ ಸಹಿತ ಶ್ರೀ ಅದಿಶಕ್ತಿ ಅಮ್ಮನವರ ದೇವಸ್ಥಾನ ಆರ್ಥಿಕ ಕೊರತೆ ದೇವಸ್ಥಾನ ನವೀಕರಣ ಕಾರ್ಯ ಕುಂಠಿತಗೊಂಡಿತ್ತು, ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಜೊತೆಯಲ್ಲಿ ದೇವಸ್ಥಾನ ಆಡಳಿತ ಮಂಡಳಿ, ಅರ್ಚಕರು ನವೀಕರಣ ಮಾಡಲು ಆರ್ಥಿಕ ಸಹಕಾರ ಕೊಡುವಂತೆ ಮನವಿ ಸಲ್ಲಿಸಿದರು. ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘವು ದೇವಾಲಯ ನವೀಕರಣ ಕಾರ್ಯ 50ಲಕ್ಷರೂಪಾಯಿ ಚಕ್ಕನ್ನು ಬಿಬಿಎಂಪಿ ಮುಖ್ಯ ಆಯುಕ್ತರಾದ ತುಷಾರ್ ಗಿರಿನಾಥ್ ರವರಿಗೆ ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು ಹಸ್ತಾಂತರ ಮಾಡಿದರು. ಮುಖ್ಯ ಆಯುಕ್ತರಾದ ತುಷಾರ್ ಗಿರಿನಾಥ್ ರವರು ಮಾತನಾಡಿ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ನಡುವೆ ಸಾಮರಸ್ಯ ಇರಬೇಕು ಇಂದು ಬೆಂಗಳೂರುನಗರ



ಅಭಿವೃದ್ಧಿಯಾಗಲು ಅಧಿಕಾರಿ, ನೌಕರರ ಶ್ರಮವಿದೆ. ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘವು ನೌಕರರ ಸಮಸ್ಯೆಗಳಿಗೆ ಹೋರಾಟದ ಜೊತೆಯಲ್ಲಿ ಸಮಾಜ ಸೇವೆ, ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಜನರ ಪ್ರೀತಿ, ವಿಶ್ವಾಸ ಗಳಿಸಿದ್ದಾರೆ ಎಂದು ಹೇಳಿದರು. ಎ.ಅಮೃತ್ ರಾಜ್ ರವರು ಮಾತನಾಡಿ ಅಧಿಕಾರಿ, ನೌಕರರ ಹಿತರಕ್ಷಣೆ ಜೊತೆಯಲ್ಲಿ ಸಮಾಜಮುಖಿ ಕಾರ್ಯಗಳನ್ನು ನಮ್ಮ ಸಂಘವು ಮಾಡುತ್ತಿದೆ.

ಧರ್ಮಸ್ಥಳದಲ್ಲಿ ನೀರಿನ ಅಭಾವ ಅದಾಗ 1ಲಕ್ಷ ಲೀಟರ್ ನೀರು ಕಳುಹಿಸಿ ಕೊಡಲಾಯಿತು ಮತ್ತು ಮರದ ಕೊಂಬೆ ಬಿದ್ದು ಮೃತಪಟ್ಟ ಕುಟುಂಬಕ್ಕೆ 1ಲಕ್ಷ ಪರಿಹಾರ, ಅಸಿಡ್ ದಾಳಿಗೆ ಒಳಗಾದ ಯುವತಿ ವೈದ್ಯಕೀಯ ಚಿಕಿತ್ಸೆಗೆ ಸಹಾಯಹಸ್ತ. ಉತ್ತರ ಕರ್ನಾಟಕ, ಕೊಡಗು, ಕೇರಳದ ವೈನಾಡುವಿನಲ್ಲಿ ಪ್ರವಾಹ ಸಂಸ್ತತ್ಥರಿಗೆ ದಿನಸಿ ಕಿಟ್ ವಿತರಣೆ, ಪರಿಸರ ಜಾಗೃತಿ ಮತ್ತು ಉಚಿತ ಆರೋಗ್ಯ ಶಿಬಿರ ಹಲವಾರು ಜನಪರ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದೆ. ಸಂಘದ ಪದಾಧಿಕಾರಿಗಳಾದ ಸಾಯಿಶಂಕರ್ ಕೆ.ಜಿ.ರವಿ, ಎಸ್.ಜಿ.ಸುರೇಶ್, ರಾಮಚಂದ್ರ, ಮಂಜೇಗೌಡ,ಹೆಚ್.ಬಿ.ಹರೀಶ್, ಮಾರ್ಕೆಟ್ ಮಂಜುನಾಥ್, ಶ್ರೀಧರ್, ಮಂಜುನಾಥ್, ಕೆ.ನರಸಿಂಹ, ಎನ್.ಶಿವಪ್ರಸಾದ್, ಎನ್.ಹರೀಶ್ ಕುಮಾರ್ ರವರು ಭಾಗವಹಿಸಿದ್ದರು.



ಉದಯವಾಹಿನಿ ಚಿತ್ರ

**ಶ್ರೀ ಅದಿಶಕ್ತಿ ಅಮ್ಮನವರ ದೇವಸ್ಥಾನ ಅತ್ಯಂತ ಪುರಾತನ ದೇವಸ್ಥಾನವಾಗಿದೆ, ಆರ್ಥಿಕ ಮುಗ್ಗಟ್ಟು ಕಾರಣ ದೇವಾಲಯ ಅಭಿವೃದ್ಧಿ ಕಾರ್ಯಗಳು ನೆನೆಗುದಿಗೆ ಬಿದ್ದಿತ್ತು, ನಮ್ಮ ಸಂಘ ಪದಾಧಿಕಾರಿಗಳು, ಸದಸ್ಯರು ದೇವಸ್ಥಾನ ನವೀಕರಣ ಕಾರ್ಯಕ್ಕೆ ಕೈಜೋಡಿಸಬೇಕು ತೀರ್ಮಾನಿಸಿ ಇದೀಗ 50ಲಕ್ಷ ರೂಪಾಯಿ ಸಂಗ್ರಹ ಮಾಡಿ ದೇವಾಲಯ ನವೀಕರಣ ಕಾರ್ಯಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತರ ಸಮ್ಮುಖದಲ್ಲಿ ನೀಡುತ್ತಿದ್ದೇವೆ ಎಂದು ಹೇಳಿದರು.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** – ನಿಮ್ಮ ಮೇಲೆ ಬಹಳಷ್ಟು ಅವಲಂಬಿಸಿರುತ್ತದೆ ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳಲು ಮಾನಸಿಕ ಸ್ಪಷ್ಟತೆ ಅಗತ್ಯವಾಗಿರುತ್ತದೆ. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ.

**ವೃಷಭ** – ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ.

**ಮಿಥುನ** – ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ. ಪ್ರಮುಖ ಜನರು ವಿಶೇಷವರ್ಗ ಹೊಂದಿರುವ ಯಾವುದಕ್ಕಾದರೂ ಹಣಕಾಸು ನೀಡಲು ಸಿದ್ಧವಾಗಿರುತ್ತಾರೆ.

**ಕರ್ಕಾಟಕ** – ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಈ ರಾಶಿಚಕ್ರದ ದೊಡ್ಡ ಉದ್ಯಮಿಗಳು ಇಂದು ತುಂಬಾ ಯೋಚಿಸಿ ಅರ್ಥಮಾಡಿಕೊಂಡು ಹಣದ ಹೂಡಿಕೆ ಮಾಡುವ ಅಗತ್ಯವಿದೆ.

**ಸಿಂಹ** – ಇಂದು ನಿಮಗೆ ನಿಮ್ಮ ಆತ್ಮನ ಬದಿಯಿಂದ ಯಾವುದೇ ಕೆಟ್ಟ ಸುದ್ದಿ ಸಿಗಬಹುದು. ಇದರಿಂದಾಗಿ ನಿಮ್ಮ ಮನಸ್ಸಿಗೆ ದುಃಖವಾಗುತ್ತದೆ ಮತ್ತು ನೀವು ಸಾಕಷ್ಟು ಸಮಯವನ್ನು ಆಲೋಚಿಸುವಲ್ಲಿ ಕಳೆಯಬಹುದು.

**ಕನ್ಯಾ** – ಬಹಳಷ್ಟು ವಿಷಯಗಳು ನೀವು ಬಯಸಿದಂತಿರುವ ಹಾಸ್ಯದಿಂದ ತುಂಬಿದ ಒಂದು ದಿನ. ಸಮಯ ಮತ್ತು ಹಣದ ಕಾತರ ನೀವು ಮಾಡಬೇಕು ಇಲ್ಲದಿದ್ದರೆ ಮುಂಬರುವ ಸಮಯ ತೊಂದರೆಗಳಿಂದ ತುಂಬಿರಬಹುದು.

**ತುಲಾ** – ಮಕ್ಕಳೊಂದಿಗೆ ಆಟವಾಡುವುದು ನಿಮಗೆ ಯಾವತ್ತೂ ಅದ್ಭುತ ಚಿಕಿತ್ಸೆಯ ಅನುಭವ ನೀಡುತ್ತದೆ. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ.

**ವೃಶ್ಚಿಕ** – ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಬಹಳ ಪ್ರಯೋಜನಕಾರಿ ದಿನವಲ್ಲ – ಆದ್ದರಿಂದ ನಿಮ್ಮ ಹಣದ ಪರಿಸ್ಥಿತಿಯನ್ನು ಪರಿಶೀಲಿಸಿ ಮತ್ತು ನಿಮ್ಮ ವೆಚ್ಚಗಳ ಮೇಲೆ ಮಿತಿ ಹೇರಿ.

**ಧನಸ್ಸು** – ನಿಮ್ಮ ಸಂಗಾತಿಯ ಮೇಲೆ ಭಾವನಾತ್ಮಕ ಬೆದರಿಕೆಯನ್ನು ಬಳಸಬಾರದು. ನಿಮಗೆ ಇತ್ತೀಚಿನ ತಂತ್ರಜ್ಞಾನಗಳನ್ನು ಮತ್ತು ಕೌಶಲಗಳನ್ನು ಕಲಿಯಲು ಸಹಾಯವಾಗುವ ಅಲ್ಪಾವಧಿ ಕಾರ್ಯಕ್ರಮಗಳಿಗೆ ದಾಖಲಾಗಿ.

**ಮಕರ** – ಪತ್ನಿಯ ವ್ಯವಹಾರಗಳಲ್ಲಿ ಮೂಗು ತೂರಿಸುವುದು ಅವಳಿಗೆ ಕೋಪ ತರಬಹುದಾದ್ದರಿಂದ ಹಾಗೆ ಮಾಡಬೇಡಿ. ನಿಮ್ಮ ಕೆಲಸ ನೋಡಿಕೊಳ್ಳುವುದು ಉತ್ತಮ.

**ಕುಂಭ** – ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ನೀವು ನಿಮ್ಮ ಸ್ನೇಹಿತರೊಂದಿಗೆ ಎಲ್ಲಿಗಾದರೂ ಸುತ್ತಾಡಲು ಹೋಗುತ್ತಿದ್ದರೆ, ಹಣವನ್ನು ಚೆನ್ನಾಗಿ ಯೋಚಿಸಿ ಖರ್ಚು ಮಾಡಿ.

**ಮೀನ** – ಹೊರಾಂಗಣ ಕ್ರೀಡೆ ನಿಮ್ಮನ್ನು ಸೆಳೆಯುತ್ತದೆ–ಧ್ಯಾನ ಮತ್ತು ಯೋಗ ಲಾಭ ತರುತ್ತವೆ. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ಇಂದು ನೀವು ಕಲಿಯಬಹುದು.

## ಹಿಂದೂಗಳು ಧರ್ಮ ಕಾರ್ಯಕ್ಕೆ ಸಮಯ ಮೀಸಲಿಡಿ : ಕಲ್ಯಾಣರಾವ ದೇಶಮುಖ

• ಉದಯವಾಹಿನಿ ಔರಾದ

ಇಂದು ಸನಾತನ ಹಿಂದೂ ಧರ್ಮದ ವೈಭವವನ್ನು ಮರುಸ್ಥಾಪಿಸಲು ಹಿಂದೂಗಳು ಒಂದಾಗಬೇಕು ಧರ್ಮದ ಕಾರ್ಯಗಳಿಗೆ ಸಹಕಾರ ನೀಡುವುದರ ಜೊತೆಗೆ ಸಮಯ ನೀಡಬೇಕು ಎಂದು ಹಿರಿಯ ಮುಖಂಡ ಕಲ್ಯಾಣರಾವ ದೇಶಮುಖ ಹೇಳಿದರು. ಪಟ್ಟಣದ ಪುರಾತನ ಹನುಮಾನ ಮಂದಿರದಲ್ಲಿ ನಡೆದ ಶ್ರೀ ರಾಮ ನವಮಿ ಉತ್ಸವದಲ್ಲಿ ಮಾತನಾಡಿದ ಅವರು ಸರ್ವಕಾಲಕ್ಕೂ ಆದರ್ಶ ಎನಿಸುವ ಶ್ರೀರಾಮನ ಬದುಕು ಹೇಳುವುದಕ್ಕೆ ಮತ್ತು ಕೇಳುವುದಕ್ಕೆ ಮಾತ್ರವಲ್ಲ. ಆ ಆದರ್ಶಗಳನ್ನು ನಾವೆಲ್ಲರೂ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು, ಪ್ರತಿಯೊಬ್ಬ ಹಿಂದೂ ಸದಾ ಧರ್ಮ ಕಾರ್ಯಕ್ಕೆ ಸಮಯ ಮೀಸಲಿಡಬೇಕು ಎಂದು ತಿಳಿಸಿದರು.

## ಕಾರ್ಮಿಕ ಟೂಲ್ ಕಿಟ್ ವಿತರಣೆಗೆ ಅರ್ಜಿ ಆಹ್ವಾನ

• ಉದಯವಾಹಿನಿ ಮುದ್ದೇಬಿಹಾಳ

ಕಾರ್ಮಿಕ ಇಲಾಖೆ ಹಾಗೂ ಕಟ್ಟಡ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಗೌಂಡಿ ,ವೆಲ್ಡಿಂಗ್, ಟೈಲ್ಸ್, ರೋಡ್ ವರ್ಕ ಕಿಟ್‌ಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಫಲಾನುಭವಿಗಳು ತಮ್ಮ ಗುರುತಿನ ಚೀಟಿ, ಆಧಾರ ಕಾರ್ಡ್ ಮತ್ತು ಭಾವಚಿತ್ರ ಇತರೆ ದಾಖಲೆಗಳನ್ನು ಮುದ್ದೇಬಿಹಾಳ ಪಟ್ಟಣದ ಹುಡ್ಕೊ ಬಡಾವಣೆಯ ಕಾರ್ಮಿಕ ನೀರಿಕ್ಷಕ ಕಚೇರಿಯಲ್ಲಿ ದಿನಾಂಕ 8/4/25 ರಿಂದ 19/4/25 ಒಳಗೆ ಸಲ್ಲಿಸಲು ಸೂಚಿಸಲಾಗಿದೆ ಕಿಟ್‌ಗಳನ್ನು ಜೇಷ್ಠತಾ ಆಧಾರದ ಮೆರಗೆ ವಿತರಿಸಲಾಗುತ್ತದೆ ಮುದ್ದೇಬಿಹಾಳ ಕಾರ್ಮಿಕ ನೀರಿಕ್ಷಕ ಅಧಿಕಾರಿ ಅಲೀಂ ಕೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಭ್ರಮದ ರಾಮನವಮಿ ಆಚರಣೆ

• ಉದಯವಾಹಿನಿ ಹುಮನಾಬಾದ್

ಪಟ್ಟಣದ ಬಾಲಾಜಿ ಮಂದಿರದಲ್ಲಿ ಹಿರೇಮಠ ಸಂಸ್ಥಾಮದ ಪೀಠಾಧಿಪತಿ ರೇಣುಕ ವೀರ ಗಂಗಾಧರ ಶಿವಾಚಾರ್ಯರ ಸಾನಿಧ್ಯದಲ್ಲಿ ರಾಮ ನವಮಿ ಕಾರ್ಯಕ್ರಮ ಸಂಭ್ರಮದಿಂದ ಆಚರಿಸಲಾಯಿತು.

ಬೆಳಗ್ಗೆಯಿಂದ ದೇವಸ್ಥಾನದಲ್ಲಿ ಧಾರ್ಮಿಕ ವಿಧಿ ವಿಧಾನದಂತೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಮಾಜಿ ಸಚಿವ ರಾಜಶೇಖರ ಪಾಟೀಲ್ ಸೇರಿ ಅನೇಕ ಮುಖಂಡರು ಸರತಿ ಸಾಲಿನಲ್ಲಿ ರಾಮನ ದರ್ಶನ ಪಡೆದರು. ಮಾಜಿ ಸಚಿವ ರಾಜಶೇಖರ ಪಾಟೀಲ್ ಮಾತನಾಡಿ, ಹುಮನಾಬಾದ್ ಪಟ್ಟಣದಲ್ಲಿಯೇ ಬಾಲಾಜಿ ಮಂದಿರ ಐತಿಹಾಸಿಕ ಹಿನ್ನಲೆಯನ್ನು ಹೊಂದಿದೆ. ಈ ದೇವಸ್ಥಾನದ ಬೆಳವಣಿಗೆಗೆ ವಯಕ್ತಿಕವಾಗಿ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು.

## ಪ್ರಸಿದ್ಧ ಯಕ್ಷಗಾನ ಕಲಾವಿದ ದುರ್ಮರಣ

• ಉದಯವಾಹಿನಿ ಕುಂದಾಪುರ

ಯಕ್ಷಗಾನ ಕಲಾವಿದರೊಬ್ಬರು ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ ಘಟನೆ ಅರಾಟೆ ಸೇತುವೆ ಬಳಿ ನಡೆದಿದೆ. ಮೃತಪಟ್ಟ ಕಲಾವಿದರನ್ನು ಹಟ್ಟಿಯಂಗಡಿ ಮೇಳದ ಪ್ರಧಾನ ಮದ್ದಳೆಗಾರ ನಾರಾಯಣ ಪೂಜಾರಿ (40) ಎಂದು ಗುರುತಿಸಲಾಗಿದೆ. ಶಿರೂರಿನ ತೂದಳ್ಳಿಯಲ್ಲಿ ನಡೆಯಬೇಕಿದ್ದ ಹಟ್ಟಿಯಂಗಡಿ ಮೇಳದ ಆಟ ಭಾರೀ ಮಳೆಯಿಂದಾಗಿ ರದ್ದಾಗಿತ್ತು. ಕಾರ್ಯಕ್ರಮ ರದ್ದಾದ ನಂತರ ಮೇಳದ ಪ್ರಧಾನ ಮದ್ದಳೆಗಾರ ನಾರಾಯಣ ಪೂಜಾರಿ ಬೈಕ್‌ನಲ್ಲಿ ಮನೆಗೆ ಹಿಂತಿರುಗುತ್ತಿದ್ದರು. ಅರಾಟೆ ಸೇತುವೆಯಲ್ಲಿ ದುರಸ್ತಿ ಕಾರ್ಯ ನಡೆಯುತ್ತಿದ್ದ ಕಾರಣ ಏಕಮುಖ ಸಂಚಾರ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಜಾರಿಗೊಳಿಸಲಾಗಿತ್ತು. ಗೊಂದಲಕ್ಕೆ ಒಳಗಾದ ನಾರಾಯಣ ಪೂಜಾರಿ ಬದಲಾದ ಸಂಚಾರ ವ್ಯವಸ್ಥೆಯ ಅರಿವಿಲ್ಲದ ತಡೆ ಗೋಡೆಯಾಗಿ ಇರಿಸಲಾಗಿದ್ದ ಮಣ್ಣಿನ ದಿಬ್ಬಕ್ಕೆ ಡಿಕ್ಕಿ ಹೊಡೆದಿದ್ದಾರೆ ಎನ್ನಲಾಗಿದೆ.

## ಕುಡಿಯುವ ನೀರಿನ ಸಮಸ್ಯೆ ಆಗದಂತೆ ಮುನ್ನೆಚ್ಚರಿಕೆ ವಹಿಸಿ: ದಿನೇಶ್ ಗುಂಡೂರಾವ್

• ಉದಯವಾಹಿನಿ ಮಂಗಳೂರು

ಬೇಸಿಗೆಯಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ನೋಡಿಕೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

‘‘ಪ್ರಸ್ತುತ, ಅಣೆಕಟ್ಟುಗಳಲ್ಲಿ ಸಾಕಷ್ಟು ನೀರಿದ್ದು, ಕೆಲವು ಪ್ರದೇಶಗಳಲ್ಲಿ ಕಡಿಮೆ ಮಳೆಯಾಗುತ್ತಿದೆ’’ ಎಂದು ಅವರು ಹೇಳಿದರು.

**ಸರಿಯಾದ ನೀರಿನ ನಿರ್ವಹಣೆಯ ಅಗತ್ಯ**

ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ನಡೆಸಲಾಯಿತು. ಮುಂದಿನ ಎರಡು ತಿಂಗಳುಗಳಲ್ಲಿ ಯಾವುದೇ ರೀತಿಯ ಕೊರತೆಯನ್ನು ತಪ್ಪಿಸಲು ಸರಿಯಾದ ನೀರಿನ ನಿರ್ವಹಣೆಯ ಅಗತ್ಯವನ್ನು ಸಚಿವರು ಒತ್ತಿ ಹೇಳಿದರು. ಸಾಕಷ್ಟು ನೀರು ಇದೆ ಎಂದು ಭಾವಿಸಿ ನಾವು ಅಪಾಯಗಳನ್ನು ತೆಗೆದುಕೊಳ್ಳಬಾರದು.

ಕೈಗಾರಿಕೆಗಳಿಗೆ ನೀರು ಸರಬರಾಜನ್ನು ಆದಷ್ಟು ಬೇಗ ನಿಯಂತ್ರಿಸಬೇಕು ಎಂದು ಅವರು ಹೇಳಿದರು.

ಸಾಕಷ್ಟು ನೀರಿನ ಸಂಗ್ರಹ ಇರುವುದರಿಂದ ನೀರಿನ ಕೊರತೆ ಉಂಟಾಗುವುದಿಲ್ಲ ಎಂದು ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್ ಭರವಸೆ ನೀಡಿದರು. ತುಂಬೆ ಮತ್ತು ಎಎಂಆರ್ ಅಣೆಕಟ್ಟುಗಳಲ್ಲಿನ


ಉದಯವಾಹಿನಿ ಚಿತ್ರ

ನೀರಿನ ಮಟ್ಟವು ಮುಂದಿನ 35 ರಿಂದ 40 ದಿನಗಳವರೆಗೆ ಸಾಕಾಗುತ್ತದೆ ಎಂದು ಅವರು ಮಾಹಿತಿ ನೀಡಿದರು. ಎಂಸಿಸಿ ಮಿತಿಯೊಳಗಿನ ಮೂರು ಅಣೆಕಟ್ಟುಗಳಿಂದ ನೀರು ಸರಬರಾಜು ಮಾಡಿದರೆ, ಅದು ಮೂರು ತಿಂಗಳವರೆಗೆ ಸಾಕಾಗುತ್ತದೆ.

ನೇತ್ರಾವತಿ ನದಿಗೆ ಒಳಚರಂಡಿ ನೀರು ಬಿಡುಗಡೆ ಮಾಡುವ ಬಗ್ಗೆ ಸಚಿವರು ವಿಚಾರಿಸಿದಾಗ, ಬಂಟ್ವಾಳ ತಾಲ್ಲೂಕು ಪಂಚಾಯತ್ ಸಿಇಒ ಈ ಸಮಸ್ಯೆಗೆ ಸಂಬಂಧಿಸಿದಂತೆ ವಿವರವಾದ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿದೆ ಎಂದು ಪ್ರತಿಕ್ರಿಯಿಸಿದರು.

ಮುಂಬರುವ ಮಳೆಗಾಲಕ್ಕೆ ಅಧಿಕಾರಿಗಳು ಸಜ್ಜಾಗಿರಬೇಕು ಮತ್ತು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಮುಂಚಿತವಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರು ಒತ್ತಾಯಿಸಿದರು.

### ಪ್ರಧಾನಿ ಮೋದಿ ಅವರಿಂದ ದೇಶ ಸುರಕ್ಷಿತವಾಗಿದೆ ಎಂದ ಬಿಜೆಪಿ ಉಚ್ಚಾಟಿತ ಶಾಸಕ

# 2028ರಲ್ಲಿ ನಾನೇ ರಾಜ್ಯದ ಸಿಎಂ: ಬಸನಗೌಡ ಪಾಟೀಲ್ ಯತ್ನಾಳ್

• ಉದಯವಾಹಿನಿ ಹುಬ್ಬಳ್ಳಿ

2028ರಲ್ಲಿ ನಾನು ಕರ್ನಾಟಕದ ಮುಖ್ಯಮಂತ್ರಿಯಾಗಲಿದ್ದು, ಪ್ರಧಾನಮಂತ್ರ ನರೇಂದ್ರ ಮೋದಿ ಅವರ ಆಶೀರ್ವಾದ ನನಗೆ ದೊರೆಯಲಿದೆ ಎಂದು ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಭವಿಷ್ಯ ನುಡಿದಿದ್ದಾರೆ.

ಹುಬ್ಬಳ್ಳಿಯಲ್ಲಿ ನಡೆದ ರಾಮ ನವಮಿ ಮತ್ತು ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಯತ್ನಾಳ್, ಹಿಂದೂ ಪರ ಮಾತನಾಡುವ ವ್ಯಕ್ತಿಯೇ ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಆಗುತ್ತಾನೆ.

ಕರ್ನಾಟಕ ದಲ್ಲಿ ನನ್ನಷ್ಟು ಪ್ರಖರವಾಗಿ ಹಿಂದುತ್ವ ರಾಜಕಾರಣವನ್ನು ಯಾರೂ ಮಾಡುವುದಿಲ್ಲ. ಹೀಗಾಗಿ 2028ರ ವಿಧಾನಸಭೆ ಚುನಾವಣೆ ಬಳಿಕ ನಾನೇ ಈ ರಾಜ್ಯದ ಮುಖ್ಯಮಂತ್ರಿಯಾಗಲಿದ್ದೇನೆ.. ಎಂದು ಘೋಷಿಸಿದರು.

ಕರ್ನಾಟಕದಲ್ಲಿ ಹಿಂದೂಗಳು ಸುಖವಾಗಿ ಜೀವನ ಮಾಡುವುದಕ್ಕೆ ಹುಬ್ಬಳ್ಳಿಯ ಹಿಂದು ಶಕ್ತಿ ಕಾರಣ. ನಾನು ಹಿಂದೂಗಳ ಮತಗಳಿಂದ ಗೆದ್ದು ಬರುತ್ತೇನೆ. ಭಗವಾ ಧ್ವಜಕ್ಕಾಗಿ ನಾನು ಪ್ರಾಣ ಕೊಡಲೂ ಸಿದ್ಧನಿದ್ದೇನೆ. ಇದರಲ್ಲಿ ಯಾವುದೇ ಸಂಶಯ ಬೇಡ. ಕೆಲವರು ಲಿಂಗಾಯತರು ಹಿಂದೂಗಳಲ್ಲ ಎಂದು


ಉದಯವಾಹಿನಿ ಚಿತ್ರ

**ನನ್ನ ಹೃದಯದಲ್ಲಿ ಬಿಜೆಪಿ ಇದೆ**

ಭಾರತ ಸುರಕ್ಷಿತವಾಗಿರಬೇಕಾದರೆ, ಅದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೇ ಕಾರಣ. ನನ್ನನ್ನು ಇವತ್ತು ಬಿಜೆಪಿಯಿಂದ ಹೊರಹಾಕಿರಬಹುದು. ಆದರೆ ನನ್ನ ಹೃದಯದಲ್ಲಿ ಬಿಜೆಪಿ ಇದೆ. ನನ್ನನ್ನು ಪಕ್ಷದಿಂದ ಹೊರಹಾಕಿದ ಬಳಿಕ ನನ್ನ ಜನಪ್ರಿಯತೆ ಮತ್ತಷ್ಟು ಹೆಚ್ಚಿದ್ದು, ನಾನಿಲ್ಲದೇ ಯಾವುದೇ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದಿಲ್ಲ. ಹೀಗಾಗಿ ಮುಂದಿನ ಆರು ತಿಂಗಳುಗಳ ಒಳಗಾಗಿ ಬಿಜೆಪಿ ಮತ್ತೆ ನನ್ನನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಿದೆ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಭರವಸೆ ವ್ಯಕ್ತಪಡಿಸಿದರು.

ಹೇಳುತ್ತಾರೆ. ಆದರೆ, ಈ ಜಗತ್ತಿನಲ್ಲಿ ಮೊದಲು ಹುಟ್ಟಿದ್ದು ಸನಾತನ ಧರ್ಮವಾದ್ದರಿಂದ, ನಾನು ಸನಾತನ ಧರ್ಮದ ಅನುಯಾಯಿ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಸನಾತನ ಧರ್ಮ ಉಳಿದರೆ ಮಾತ್ರ ವಿಭೂತಿ ಉಳಿಯುತ್ತದೆ.. ಎಂದು ವಿಜಯಪುರ ನಗರ ಶಾಸಕ ಹೇಳಿದರು. ಪ್ರಭು ಶ್ರೀರಾಮ ಯಾವುದೇ ಜಾತಿಗೆ ಸಿಮೀತವಾಗಿಲ್ಲ. ದಲಿತರು, ಹಿಂದುಳಿದವರು, ಮೇಲ್ವರ್ಗದವರ ಮನೆಯಲ್ಲಿ ರಾಮ ಇದ್ದಾನೆ. ರಾಮನ ಬಿಟ್ಟು ಭಾರತವಿಲ್ಲ ಭಾರತ ಬಿಟ್ಟು ರಾಮ ಇಲ್ಲ ಎಂದು

- ಯತ್ನಾಳ್ ವಿಭೂತಿಯ ಹಿಂದುತ್ವ ರಾಜಕಾರಣ ಖಾಯಂ
- 2028ರಲ್ಲಿ ನಾನೇ ರಾಜ್ಯದ ಸಿಎಂ ಎಂದ ಬಸನಗೌಡ ಪಾಟೀಲ್ ಯತ್ನಾಳ್
- ಪ್ರಧಾನಿ ಮೋದಿ ಅವರಿಂದ ದೇಶ ಸುರಕ್ಷಿತವಾಗಿದೆ ಎಂದ ಬಿಜೆಪಿ ಉಚ್ಚಾಟಿತ ಶಾಸಕ
- ಹುಬ್ಬಳ್ಳಿಯಲ್ಲಿ ರಾಮ ನವಮಿ ಉತ್ಸವ ಕಾರ್ಯಕ್ರಮದಲ್ಲಿ ಯತ್ನಾಳ್ ಭಾಗಿ
- ಹಿಂದುತ್ವ ರಾಜಕಾರಣವನ್ನು ಮುಂದುವರೆಸುವ ಶಪಥ ಮಾಡಿದ ಯತ್ನಾಳ್

ಬಸನಗೌಡ ಪಾಟೀಲ್ ಯತ್ನಾಳ್ ಇದೇ ವೇಳೆ ಮಾರ್ಮಿಕವಾಗಿ ಹೇಳಿದರು. ಇನ್ನು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಬಿಜೆಪಿ ಉಚ್ಚಾಟಿತ ಶಾಸಕ, ರಾಜ್ಯದಲ್ಲಿ ಗಣೇಶನನ್ನೂ ಜೈಲಿಗೆ ಹಾಕುವಂತ ಕೆಟ್ಟ ಸರ್ಕಾರ ಅಸ್ತಿತ್ವದಲ್ಲಿದೆ. ಕಾಂಗ್ರೆಸ್‌ನ ಮುಸ್ಲಿಂ ತುಷ್ಟೀಕರಣ ಮೀತಿ ಮೀರಿದ್ದು, ಇವರ ಕಪಿಮುಷ್ಠಿಯಿಂದ ರಾಜ್ಯವನ್ನು ಪಾರು

ಇದೇ ವೇಳೆ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆ ಗಲಭೆ ಪ್ರಕರಣವನ್ನು ಉಲ್ಲೇಖಿಸಿದ ಯತ್ನಾಳ್, ಒಂದು ವೇಳೆ ನಾನು ರಾಜ್ಯದ ಗೃಹ ಸಚಿವನಾಗಿದ್ದರೆ, ಹಳೇ ಹುಬ್ಬಳ್ಳಿ ಠಾಣೆ ಒಳಹೊಕ್ಕವರನ್ನು ಜನ್ನತ್(ಸ್ವರ್ಗ)ಗೆ ಕಳುಹಿಸುತ್ತಿದ್ದೆ ಎಂದು ತೀವ್ರ ಆಕ್ರೋಶ ಹೊರಹಾಕಿದರು. ರಾಮ ನವಮಿ ದಿನ, ಗಣೇಶೋತ್ಸವ ದಿನದ ಮೆರವಣಿಗೆ ವೇಳೆ ಹಿಂದೂಗಳ ಮೇಲೆ ಕಲ್ಲು ತೂರಾಟ ನಡೆಸುವವರು ಸ್ವರ್ಗಕ್ಕೆ ಹೋಗಲು ಸಿದ್ಧರಾಗಿರಬೇಕು ಎಂದು ಯತ್ನಾಳ್ ಎಚ್ಚರಿಕೆ ನೀಡಿದರು.

ಮಾಡಿ, ಹಿಂದೂ ಪರ ಸರ್ಕಾರವನ್ನು ಅಸ್ತಿತ್ವಕ್ಕೆ ತರುವುದು ಶತಸಿದ್ಧ ಎಂದು ಘೋಷಿಸಿದರು.

ಒಟ್ಟಿನಲ್ಲಿ ತಾವು ಬಿಜೆಪಿಗೆ ಮರಳುವುದಾಗಿ ಮತ್ತು 2028ರ ವಿಧಾನಸಭೆ ಚುನಾವಣೆ ಬಳಿಕ ರಾಜ್ಯದ ಮುಖ್ಯಮಂತ್ರಿಯಾಗುವುದಾಗಿ ಹೇಳುವ ಮೂಲಕ, ಬಸನಗೌಡ ಪಾಟೀಲ್ ಯತ್ನಾಳ್ ಅವರು ರಾಜ್ಯ ರಾಜಕಾರಣದಲ್ಲಿ ತಮ್ಮ ಪಾತ್ರದ ಮುಂದುವರಿಕೆಯ ಖಾತರಿಪಡಿಸಿದ್ದಾರೆ ಎಂದು ಹೇಳಬಹುದು.

## ಹೋರಾಟಗಾರರಿಗೆ ಸಾವು-ಬದುಕಿನ ಭಯವಿರುವುದಿಲ್ಲ

• ಉದಯವಾಹಿನಿ ಕಲಬುರಗಿ

ಹೋರಾಟಗಾರರಿಗೆ ಸಾವು-ಬದುಕಿನ ಭಯವಿರುವುದಿಲ್ಲ. ಹೋರಾಟದಿಂದ ನ್ಯಾಯ ಪಡೆಯುವುದೇ ಜೀವನವಾಗಿಸಿಕೊಳ್ಳುತ್ತಾರೆ ಎಂದು ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೇಸ್ ರಾಜ್ಯ ಉಪಾಧ್ಯಕ್ಷರಾದ ಕಾಂ. ಪ್ರಭುದೇವ ಯಳಸಂಗಿ ಹೇಳಿದರು.

ನಗರದ ಜೇವರ್ಗಿ ಕ್ರಾಸ್‌ನಲ್ಲಿರುವ ಎಐಟಿಯುಸಿ ಕಛೇರಿಯಲ್ಲಿ ಎಐಟಿಯುಸಿ ಜಿಲ್ಲಾ ಸಮಿತಿ ಹಾಗೂ ಕೆಎಸ್‌ಆರ್‌ಟಿಸಿ ಸ್ಟಾಫ್ ಮತ್ತು ವರ್ಕರ್ಸ್ ಫೆಡರೇಷನ್ ಹಮ್ಮಿಕೊಂಡಿರುವ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇತ್ತೀಚಿಗೆ ನಿಧನ ಹೊಂದಿರುವ ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಯೂನಿಯನ್ ಕಲಬುರಗಿ ವಿಭಾಗ-2ರ ಪ್ರಧಾನ ಕಾರ್ಯದರ್ಶಿ ಕಾಂ. ಅಬ್ದುಲ್ ಕಲೀಂ ರವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಕಾಂ. ಅಬ್ದುಲ್ ಕಲೀಂ ರವರು ಜೀವಮಾನ ಪೂರ್ತಿ ಜಾತ್ಯತೀತವಾಗಿ ಬದುಕು ನಡೆಸಿದವರು. ಅವರೊಬ್ಬ ಆದರ್ಶ ಮತ್ತು ತತ್ವನಿಷ್ಠೆ ಹಾಗೂ ನಿಷ್ಠುರ


ಉದಯವಾಹಿನಿ ಚಿತ್ರ

ವ್ಯಕ್ತಿತ್ವ ಉಳವರಾಗಿದ್ದರು. ಅವರ ಅಗಲಿಕೆಯಿಂದ ಒಬ್ಬ ಪ್ರಾಮಾಣಿಕ ,ನಿಷ್ಠಾವಂತ ಹೋರಾಟಗಾರನನ್ನು ಕಳೆದುಕೊಂಡಿದ್ದೇವೆ. ಅವರ ತತ್ವಸಿದ್ಧಾಂತಗಳು ಇಂದಿನ ಹೋರಾಟಗಾರರಿಗೆ ಅವಶ್ಯಕತೆ ಇದೆ. ಅವರ ವಿಚಾರಗಳೊಂದಿಗೆ ಹೋರಾಟಗಳನ್ನು ಮುಂದುವರೆಸೋಣ ಎಂದರು.

ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ರಾಜ್ಯ ಕಾರ್ಯಾಧ್ಯಕ್ಷರಾದ ಕಾಂ. ಸಿದ್ದಪ್ಪ ಪಾಲ್ಕಿ ರವರು ಮಾತನಾಡುತ್ತಾ, ಸಮಾಜ ಹೋರಾಟಗಾರರನ್ನು ಗುರುತಿಸುವುದು ತತ್ವಸಿದ್ಧಾಂತ ಬದ್ಧತೆಯಿಂದ ಮಾತ್ರ ಗುರುತಿಸಿಕೊಳ್ಳುತ್ತಾರೆ. ಅಂತಹ ಸಾಲಿನಲ್ಲಿ ಕಾಂ. ಅಬ್ದುಲ್ ಕಲೀಂ ಅವರು ಸಹ ಒಬ್ಬರು ಎಂದರು.

### ಡಾ. ಬಾಬು ಜಗಜೀವನ ರಾಮ್ ಅವರ 118ನೇ ಜಯಂತಿ

## ಒಗ್ಗೂಡಿ ಶ್ರಮಿಸಿದರೆ ಸುಸ್ಥಿರ ಸಮಾಜ ನಿರ್ಮಾಣ ಸಾಧ್ಯ

• ಉದಯವಾಹಿನಿ ಬಳ್ಳಾರಿ

ಬುದ್ಧಿಜೀವಿಗಳಾಗಿರುವ ಅಧ್ಯಾಪಕರು, ಪತ್ರಕರ್ತರು, ಸಾಹಿತಿಗಳು ಒಗ್ಗೂಡಿ ಶ್ರಮಿಸಿದರೆ ಸುಸ್ಥಿರ ಸಮಾಜ ಸಾಧ್ಯ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ. ಬಿ ಅಭಿಪ್ರಾಯಪಟ್ಟರು.

ಅವರು ದಲಿತ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕ ಸಂಜೆ ನಗರದ ಮರ್ಚೇಡ್ ಸಭಾಂಗಣದಲ್ಲಿ ಆಯೋಜಿಸಿದ್ದ ಡಾ. ಬಾಬು ಜಗಜೀವನ ರಾಮ್ ಅವರ 118ನೇ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಹಾಗೂ ಹಿರಿಯ ಸಾಧಕ, ಹೋರಾಟಗಾರ ಎ. ಮಾನಯ್ಯ ಅವರ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಕರ್ನಾಟಕ ದಲಿತ ಸಂಘರ್ಷ


ಉದಯವಾಹಿನಿ ಚಿತ್ರ

ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಮಾನಯ್ಯ ಅವರು ಸ್ವಾರ್ಥ ರಹಿತ ನಾಯಕ. ಬೇರೆಯವರ ಸಮಸ್ಯೆ, ಕುಂದು ಕೊರತೆಗಳನ್ನು ಕಾನೂನು ಪರಿಮಿತಿಯಲ್ಲಿ ಪರಿಹರಿಸಲು ಕೋರುತ್ತಾರೆಂದರು. ಅಭಿನಂದನೆ ಬಳಿಕ ಮಾತನಾಡಿದ ಎ.ಮಾನಯ್ಯ ಅವರು, ತಾವು ಮೂರು ದಶಕಗಳ ಕಾಲ ಡಾ.ಸಿದ್ದಲಿಂಗಯ್ಯ, ಚಂದ್ರ ಪ್ರಸಾದ್ ತ್ಯಾಗಿ, ಡಿ.ಜಿ ಸಾಗರ್ ಮತ್ತಿತರ ಮುಖಂಡರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ. ಈಗ

ಡಾ. ಬಾಬುಜೀ ಅವರ ಕುರಿತು ವಿಶೇಷ ಉಪನ್ಯಾಸ ನೀಡಿದ ಹಂಪಿ ಕನ್ನಡ ವಿವಿ ಪ್ರಾಧ್ಯಾಪಕ ಡಾ. ಚಿನ್ನಸ್ವಾಮಿ ಸೋಸಲೆ, ಅಂಬೇಡ್ಕರ್ ಮತ್ತು ಬಾಬು ಜಗಜೀವನ ರಾಮ್ ಅವರನ್ನು ದೇವರನ್ನಾಗಿ ನೋಡದೇ ಬೌದ್ಧಿಕವಾಗಿ ಅವರ ವಿಚಾರ, ತತ್ವಾದರ್ಶಗಳನ್ನು ಅರಿಯಬೇಕೆಂದರು.

ದೇಶದ ಸಂವಿಧಾನ ಅಪಾಯದಲ್ಲಿದೆ. ದೇಶದ ಬಹುಜನರು ಸಂವಿಧಾನವನ್ನು ರಕ್ಷಿಸಬೇಕು. ಬುದ್ಧಿ ಜೀವಿಗಳು ಅಪಾಯದ ಕುರಿತು ಜನಸಾಮಾನ್ಯರನ್ನು ಎಚ್ಚರಿಸಬೇಕು ಎಂದ ಅವರು, ಎಂದಿಗೂ ನಾನು ಜನಪರವಾಗಿ ದುಡಿಯುತ್ತೇನೆಂದರು.

## ಎಸ್‌ಬಿಎಮ್ ವತಿಯಿಂದ ತಂಪಾದ ಕುಡಿಯುವ ನೀರಿನ ಅರವಟಿಕೆ



ಉದಯವಾಹಿನಿ ಚಿತ್ರ

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಾ ಸಫಾ ಬೈತುಲ್ಲಾ ಮಾಲ್ ವತಿಯಿಂದ ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿಯೂ ಕಳೆದ 15ವರ್ಷಗಳಿಂದ ಬೇಸಿಗೆಕಾಲದಲ್ಲಿ ಸಾರ್ವಜನಿಕರಿಗೆ ತಂಪಾದ ಕುಡಿಯುವ ನೀರಿನ ಅರವಟಿಕೆ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಸಫಾ ಬೈತುಲ್ಲಾ ಮಾಲ್ ಅಧ್ಯಕ್ಷ ಹಾಫೀಜ್ ಇಸ್ಮಾಯಿಲ್ ಹೇಳಿದರು.

ಪಟ್ಟಣದ ಎಸ್.ಬಿ.ಐ ಬ್ಯಾಂಕ್ ಎದುರುಗಡೆ ಸಫಾ ಬೈತುಲ್ಲಾ ಮಾಲ್ ವತಿಯಿಂದ ಹಮ್ಮಿಕೊಂಡಿದ್ದ ಸಾರ್ವಜನಿಕರಿಗೆ ತಂಪಾದ ಕುಡಿಯುವ ನೀರಿನ ಅರವಟಿಕೆಯನ್ನು ಸಿಪಿಐ ಕಪೀಲದೇವ ಉಧ್ಘಾಟಿಸಿ ಮಾತನಾಡಿದ ಅವರು,ಬೆಸಿಗೆ ಕಾಲದಲ್ಲಿ ಸಾರ್ವಜನಿಕರಿಗೆ ಎಸ್.ಬಿ. ಎಮ್.ವತಿಯಿಂದ ತಂಪಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ. ಆದರೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು ಬಹಳಷ್ಟು ಸೂಕ್ಷ್ಮ ವಿಷವಾಗಿದ್ದು ನೀರು ತುಂಬುವಾಗ ಅತ್ಯಂತ ಜಾಗೃತರಾಗಿ ಚನ್ನಾಗಿ ವಿಕ್ಷಿಸಿ ಸ್ವಚ್ಚಗೊಳಿಸಿ ನೀರು ತುಂಬಬೇಕು ನೀರು ಕುಡಿಸುವುದು ತುಂಬಾ ಪುಣ್ಯದ ಕೆಲಸವಾಗಿದೆ ಎಂದರು. ಈ ಸಂದರ್ಭದಲ್ಲಿ ಎಸ್.ಬಿ.ಐ ಬ್ಯಾಂಕ್ ವ್ಯವಸ್ಥಾಪಕ ನಾಗೇಂದ್ರಪ್ಪಾ ಬಾಪುಗೋಳ,ಜಿಪಂ. ಮಾಜಿ ಸದಸ್ಯ ಗೌತಮ್ ಪಾಟೀಲ,ಕೆಎಂ ಬಾರಿ,ಅಬ್ದುಲ್ ಬಾಷೀದ್,ಡಾ.ಮಹ್ಮದ್ ಗಫಾರ್,ಹಣಮಂತ ಪೂಜಾರಿ, ಸೈಯ್ಯದ್ ಖಲೀಲ್ ಪಟೇಲ,ಗೋಪಾಲ ಪೂಜಾರಿ,ಅಹೇಮದ್ ಬಾಗಬಾನ್, ಮಸ್ತಾನಪಟೇಲ ದೇಗಲಮಡಿ,ಅನೇಕರಿದ್ದರು.

## ಸಿಬ್ಬಂದಿಯೊಂದಿಗೆ ನೀರಿನ ಟ್ಯಾಂಕ್ ಶುಚಿಗೊಳಿಸಿದ ಗ್ರಾಪಂ. ಸದಸ್ಯ

• ಉದಯವಾಹಿನಿ ವಡಗೇರಾ

ಇಲ್ಲೊಬ್ಬ ಅಪರೂಪದ ಜನಪರ ಕಾಳಜಿಯುಳ್ಳ ಗ್ರಾಮ ಪಂಚಾಯಿತಿ ಸದಸ್ಯ ವಡಗೇರಾ ತಾಲ್ಲೂಕಿನ ಊಳ್ಳೆಸೂಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೇಕರಾಳ ಗ್ರಾಮದ ಗ್ರಾಮ ಪಂಚಾಯಿತಿ ಸದಸ್ಯ ಹಣಮಂತರಾಯ ಗೌಡ ಮಾಲಿ ಪಾಟೀಲ್ ಇವರು ತನಗೆ ಮತ ನೀಡಿ ಗೆಲ್ಲಿಸಿರುವ ಜನರಿಗಾಗಿ ಒಂದಿಲ್ಲ ಒಂದು ರೀತಿಯ ಸಹಕಾರ ಸೇವೆಯನ್ನು ಸದ್ದಿಲ್ಲದೆ ಮಾಡುತ್ತಿದ್ದಾರೆ ಜನರಿಗೆ ಸರಕಾರದ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಆಸ್ಪತ್ರೆ, ಮಕ್ಕಳ ಶಿಕ್ಷಣ ಧಾರ್ಮಿಕ ಕ್ಷೇತ್ರ ಹಾಗೂ ಇನ್ನಿತರ ಸಮಾಜಮುಖಿ ಕೆಲಸಗಳನ್ನು ಯಾವುದೇ ಫಲಾ ಪೇಕ್ಷವಿಲ್ಲದೆ ಮಾಡುತ್ತಿದ್ದಾನೆ ಮೊನ್ನೆಯಷ್ಟೇ ತೇಕರಾಳ ಗ್ರಾಮದಲ್ಲಿ ಧನಕರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ ಸುದ್ದಿಯಾಗಿದ್ದ ಈ ವ್ಯಕ್ತಿ ತನ್ನೂರಿನ ಜನರ ಆರೋಗ್ಯ ದೃಷ್ಟಿಯಿಂದ ಕುಡಿಯುವ ನೀರಿನ ಶೇಖರಣೆ ಘಟಕವನ್ನು ಗ್ರಾಮ ಪಂಚಾಯಿತಿ ಸಿಬ್ಬಂದಿ ಹಣಮಂತ್ ಸಗರ ಜೊತೆಗೂಡಿ ತಾವೇ ಸ್ವತಃ ನೀರಿನ ಟ್ಯಾಂಕರ್ ನಲ್ಲಿ ಇಳಿದು ಶುಚಿಗೊಳಿಸುವ ಮೂಲಕ ಮಾದರಿಯಾಗಿದ್ದಾರೆ.


ಉದಯವಾಹಿನಿ ಚಿತ್ರ

ಅದೆಷ್ಟು ಗ್ರಾಮ ಪಂಚಾಯಿತಿ ಸದಸ್ಯರು ಗೆದ್ದ ನಂತರ ತಾನಾಯಿತು ತಮ್ಮ ಮನೆ ಕೆಲಸ ಎಂದು ಮತ ನೀಡಿದ ಪ್ರಜೆಗಳನ್ನೇ ಮರೆತುಬಿಡುತ್ತಾರೆ ಆದರೆ ಇವರು ಮಾತ್ರ ತನ್ನನ್ನು ಆಯ್ಕೆ ಮಾಡಿದ ಜನರಿಗಾಗಿ ಶ್ರಮಿಸುತ್ತಿರುವುದು ಶ್ಲಾಘನೀಯ. ಇವರಂತೆ ಪ್ರತಿಯೊಬ್ಬ ಗ್ರಾಮ ಪಂಚಾಯಿತಿ ಸದಸ್ಯರು ತಮ್ಮ ತಮ್ಮ ಗ್ರಾಮಗಳಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಲ್ಲಿ ಗ್ರಾಮಗಳು ಮತ್ತಷ್ಟು ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಸಾರ್ವಜನಿಕರು ಹೇಳುತ್ತಾರೆ.

ಗ್ರಾಮ ಪಂಚಾಯಿತಿ ಸದಸ್ಯ ಹಣಮಂತರಾಯ ಗೌಡ ಮಾಲಿ ಪಾಟೀಲ್ ಮಾತನಾಡಿ ಗ್ರಾಮಸ್ಥರ ಆರೋಗ್ಯ ದೃಷ್ಟಿಯಿಂದ ನಾನೇ ಸ್ವತಃ ಸಿಬ್ಬಂದಿ ಜೊತೆಗೂಡಿ ನೀರಿನ ಟ್ಯಾಂಕನ್ನು ಸ್ವಚ್ಛಗೊಳಿಸಿದ್ದೇವೆ ಸ್ವಚ್ಛತೆ ಮತ್ತು ಆರೋಗ್ಯಕ್ಕೆ ಮೊದಲ ಆದ್ಯತೆ ನೀಡುತ್ತೇನೆ ಜನರಿಂದಲೇ ಆಯ್ಕೆಯಾಗಿದ್ದು ಜನರಿಗಾಗಿ ಸೇವೆ ಮಾಡಲು ಸದಾ ಸಿದ್ಧ ಎಂದು ಅವರು ತಿಳಿಸಿದ್ದಾರೆ

### ಇಷ್ಟೊಂದು ಪ್ರಮಾಣದ ಬಾವಿಗಳು ಭವಿಷ್ಯದ ನೀರಿನ ಕೊರತೆಗೆ ದೊಡ್ಡ ಮಟ್ಟದ ಪರಿಹಾರವಾಗಿ ಕೆಲಸ ಮಾಡಲಿದೆ

# ನೀರಿಗಾಗಿ 2363 ಬಾವಿಗಳು, ಕುಟುಂಬಗಳಿಗೆ ‘ನೀರಭದ್ರತೆ’ ಒದಗಿಸಿದ ನರೇಗಾ

• ಉದಯವಾಹಿನಿ ಪುತ್ತೂರು

ಬೇಸಿಗೆ ಆರಂಭವಾದರೆ ಸಾಕು ಎಲ್ಲೆಡೆಗಳಲ್ಲಿಯೂ ಕುಡಿಯುವ ನೀರಿನ ಸಮಸ್ಯೆ. ಇಂದಿನ ದಿನಗಳಲ್ಲಿ ಗ್ರಾಮೀಣ ಭಾಗದ ಜನತೆಗೂ ನೀರಿನ ಸಂಕಷ್ಟ. ಈ ಹಿನ್ನಲೆಯಲ್ಲಿ ಜನತೆಯ ಕುಡಿಯುವ ನೀರಿನ ಬವಣೆ ತಪ್ಪಿಸಲು ಚಿಂತನೆ ನಡೆಸಿದ್ದೇ ಮಹತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆ. ಅವಿಭಜಿತ ಪುತ್ತೂರು ತಾಲ್ಲೂಕಿನಲ್ಲಿ ಈ ಉದ್ಯೋಗ ಖಾತರಿ ಯೋಜನೆಯಿಂದ ನಿರ್ಮಾಣವಾದ ಬಾವಿಗಳ ಸಂಖ್ಯೆ ಬರೋಬ್ಬರಿ 2363. ಗ್ರಾಮೀಣ ಭಾಗದಲ್ಲಿ ಅಡಿಕೆ ಕೃಷಿ ವಿಶಾಲಗೊಳ್ಳುತ್ತಿರುವಂತೆ ರೈತರ ಭೂಮಿಗಳಲ್ಲಿದ್ದ ಕೆರೆ-ಬಾವಿಗಳು ಮಾಯವಾದವು. ಕೊಳವೆಬಾವಿಗಳ ಸಂಖ್ಯೆ ಅಪಾರಪ್ರಮಾಣದಲ್ಲಿ ಏರಿಕೆ ಕಂಡಿತು. ಯಾವಾಗ ಈ ಕೆರೆ-ಬಾವಿಗಳು ಹಾಗೂ ಭತ್ತದ ಗದ್ದೆಗಳು ಕಡಿಮೆಯಾದವೋ ಭೂಮಿಯಲ್ಲಿ ಅಂತರ್ಜಲದ ಮಟ್ಟ ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಿದೆ. ಇದರಿಂದ ಕೊಳವೆಬಾವಿಗಳೂ ಬತ್ತಿ ಹೋಗಲು ಆರಂಭವಾಯಿತು. ಗ್ರಾಮೀಣ ಜನತೆಯೂ ಗ್ರಾಪಂಗಳು ನೀಡುವ ಕೊಳವೆ ನೀರಿನ ಆಶ್ರಯದತ್ತ ವಾಲಿಕೊಂಡರು. ಗ್ರಾಪಂಗಳು ಕೂಡಾ ಕೊಳವೆ ಬಾವಿಯನ್ನೇ ಆಶ್ರಯಿಸಿಕೊಂಡಿರುವುದರಿಂದ ನೀರಿನ ಸಂಕಷ್ಟ ಕಾಡಲಾರಂಭಿಸಿತು.

ವೈಯುಕ್ತಿಕ ನೆಲೆಯಲ್ಲಿ ಕುಟುಂಬಕ್ಕೊಂದು ಬಾವಿ ನಿರ್ಮಿಸುವ ಚಿಂತನೆ ಆರಂಭಗೊಂಡಿತು.

ಉದ್ಯೋಗ ಖಾತರಿ ಯೋಜನೆಯ ಮೂಲಕ ಸಾವಿರಾರು ಬಾವಿಗಳ ನಿರ್ಮಾಣ ಮಾಡುವ ಮೂಲಕ ಜನತೆಯ ಮೂಲಭೂತ ಸೌಕರ್ಯವಾದ ಕುಡಿಯುವ ನೀರಿನ ಸಮಸ್ಯೆ ಪೂರ್ಣಪ್ರಮಾಣದಲ್ಲಿ ಅಲ್ಲದಿದ್ದರೂ ಪರಿಹಾರ ಕಂಡುಕೊಳ್ಳುವ ಕೆಲಸ ನಡೆದಿದೆ. ಎರಡೂ ತಾಲ್ಲೂಕಿನಲ್ಲಿ ಕೆರೆಗಳ ಅಭಿವೃದ್ಧಿಯನ್ನೂ ಮಾಡಲಾಗಿದೆ. ಈ ಬಗ್ಗೆ ಇನ್ನಷ್ಟು ಪ್ರಯತ್ನ ನಡೆಸುವ ಮೂಲಕ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಚಿಂತನೆ ಮಾಡಲಾಗಿದೆ

-ವಿಲ್ಪ್ರೆಡ್ ರೋಡ್ರಿಗಸ್, ಗ್ರಾಮೀಣ ಉದ್ಯೋಗ ಖಾತರಿಯೋಜನೆಯ ಸಹಾಯಕ ನಿರ್ದೇಶಕ


ಉದಯವಾಹಿನಿ ಚಿತ್ರ

ಆ ಮೂಲಕ ನೈಸರ್ಗಿಕ ಸಂಪನ್ಮೂಲಗಳಾದ ನೀರು, ಮಣ್ಣು, ಅರಣ್ಯ ಸಂರಕ್ಷಣೆಗೆ ಆದ್ಯತೆ ನೀಡುವ ಕಾರ್ಯಯೋಜನೆ ಮೊದಲಾಯಿತು. ಈ ನರೇಗಾ ಯೋಜನೆಯಡಿ ಪುತ್ತೂರು ತಾಲ್ಲೂಕಿನ 22 ಗ್ರಾಪಂಗಳಲ್ಲಿ ಈ ತನಕ 1226 ಬಾವಿಗಳನ್ನು ನಿರ್ಮಿಸಲಾಗಿದೆ.

ಕಡಬ ತಾಲ್ಲೂಕಿನ 20 ಗ್ರಾಪಂಗಳಲ್ಲಿ 1037 ಬಾವಿಗಳು ಅಸ್ತಿತ್ವ ಕಂಡುಕೊಂಡಿವೆ. ಕುಡಿಯುವ ನೀರು ಒದಗಿಸುವುದು, ಅಂತರ್ಜಲ ಹೆಚ್ಚಿಸುವುದರ ಜತೆಗೆ ಮಳೆಯ ನೀರನ್ನು ಕಾಯ್ದುಕೊಳ್ಳುವ ಈ ಬಾವಿಗಳು ಕುಟುಂಬಕ್ಕೆ ನೀರಿನ ಭದ್ರತೆಯನ್ನೂ ನೀಡಿವೆ. ಜತೆಗೆ ಒಂದು ಬಾವಿ ನಿರ್ಮಾಣಕ್ಕೆ ರೂ.1.50 ಲಕ್ಷ ಸಹಾಯಧನವೂ ಈ ಕುಟುಂಬಗಳಿಗೆ ದೊರೆಯುತ್ತದೆ.

ಪುತ್ತೂರು ತಾಲ್ಲೂಕಿನಲ್ಲಿ 22 ಗ್ರಾಪಂಗಳಲ್ಲಿ 1226 ಕುಟುಂಬಗಳು ತಮ್ಮ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಿಕೊಂಡಿದ್ದಾರೆ. ಕಡಬ ತಾಲ್ಲೂಕಿನ 21 ಗ್ರಾಪಂಗಳ 1137 ಕುಟುಂಬಗಳು ಬಾವಿಯನ್ನು ನಿರ್ಮಿಸಿಕೊಂಡಿದ್ದಾರೆ. ಈ ಕುಟುಂಬಗಳಿಗೆ ಆರ್ಥಿಕವಾದ ಶಕ್ತಿಯನ್ನೂ ನರೇಗಾ ಯೋಜನೆ ನೀಡಿದೆ. ಈ ಬಾವಿಗಳಿಂದ ಭೂಮಿ ರಕ್ಷಣೆಯ ಕೆಲಸವೂ ನಡೆಯುತ್ತಿದೆ. ಅಂತರ್ಜಲ ಮಟ್ಟದ ಏರಿಕೆಗೆ ಪೂರಕವಾಗಿರುವ ಇಷ್ಟೊಂದು ಪ್ರಮಾಣದ ಬಾವಿಗಳು ಭವಿಷ್ಯದ ನೀರಿನ ಕೊರತೆಗೆ ದೊಡ್ಡ ಮಟ್ಟದ ಪರಿಹಾರವಾಗಿ ಕೆಲಸ ಮಾಡಲಿದೆ.

ಗ್ರಾಮೀಣ ಭಾಗದಲ್ಲಿ ಕೃಷಿಕರಿಗೆ ಮಾತ್ರವಲ್ಲ, ಕಾಲೊನಿಗಳ ಕುಟುಂಬಗಳಿಗೂ ವೈಯುಕ್ತಿಕ ಬಾವಿಗಳನ್ನು ನೀಡುವ ಮೂಲಕ ನಿಜವಾದ ಅರ್ಥದಲ್ಲಿ ನರೇಗಾ ಯೋಜನೆಯನ್ನು ಅರ್ಥಪೂರ್ಣವಾಗಿ ಅಳವಡಿಕೆ ಮಾಡಿಕೊಂಡಿರುವುದು ಈ ಅವಿಭಜಿತ ಪುತ್ತೂರು ತಾಲ್ಲೂಕಿನ ಹೆಮ್ಮೆಯಾಗಿದೆ.

**ಕುಟುಂಬಕ್ಕೊಂದು ಬಾವಿ**

ಗ್ರಾಪಂಗಳ ಆಡಳಿತಗಳಿಗೆ ಇಚ್ಛಾಶಕ್ತಿ ಹೆಚ್ಚಾದರೆ ಇನ್ನಷ್ಟು ಬಾವಿಗಳನ್ನು ತೆರೆಯುವ ಚಿಂತನೆ ಇದೆ. ಅವಿಭಜಿತ ಪುತ್ತೂರು ತಾಲ್ಲೂಕಿನಲ್ಲಿ ಈ ವರ್ಷ ಮತ್ತೆ 300 ಬಾವಿಗಳನ್ನು ನಿರ್ಮಿಸುವ ಮೂಲಕ ‘ಕುಟುಂಬಕ್ಕೊಂದು ಬಾವಿ’ ನಿರ್ಮಿಸುವ ಯೋಜನೆ ಇದೆ. ಜನತೆಯಿಂದ ಬಾವಿಗಳಿಗೆ ಬೇಡಿಕೆ ಇದೆ. ಆದರೆ ಈ ಬಗೆಗಿನ ಮಾಹಿತಿ ಗ್ರಾಪಂನ ಕಟ್ಟಕಡೆಯ ವ್ಯಕ್ತಿಗೂ ತಲುಪುವ ನಿಟ್ಟಿನಲ್ಲಿ ಅಭಿವೃದ್ಧಿ ಅಧಿಕಾರಿಗಳು ಶ್ರಮ ಪಡಬೇಕು. ಯೋಜನೆಯನ್ನು ಪೂರ್ಣವಾಗಿ ಅರ್ಥ ಮಾಡಿಕೊಂಡು ಜನತೆಗೆ ಮಾರ್ಗದರ್ಶನ ಮಾಡಬೇಕು. ಹಾಗಾದಾಗ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪೂರ್ಣವಾಗಿ ಪರಿಹರಿಸಬಹುದಾಗಿದೆ. ಗ್ರಾಪಂಗಳ ಮೇಲಿನ ಒತ್ತಡಕ್ಕೂ ಕಡಿವಾಣ ಹಾಕಬಹುದು- ನವೀನ್‌ಕುಮಾರ್ ಭಂಡಾರಿ ಕಾರ್ಯನಿರ್ವಹಣಾಧಿಕಾರಿ ಪುತ್ತೂರು.

ಹಜ್ ಯಾತ್ರೆಗೆ ಭಾರತ ಸೇರಿ 14 ದೇಶಗಳಿಗೆ ವೀಸಾ ಬ್ಯಾನ್! ಸೌದಿ ಅರೇಬಿಯಾದ ದಿಟ್ಟ ನಿರ್ಧಾರಕ್ಕೆ ಕಾರಣವೇನು?

# ಏ.13 ರವರೆಗೆ ಮಾತ್ರ ಉಮ್ರಾ ವೀಸಾದಲ್ಲಿ ಹಜ್‌ಗೆ ತೆರಳಲು ಅವಕಾಶ


**ಸೌದಿ ಅರೇಬಿಯಾ:** ಪ್ರಸಕ್ತ ವರ್ಷದ ಹಜ್ ಯಾತ್ರೆ ಆರಂಭಕ್ಕೂ ಮುಂಚಿತವಾಗಿ, ಸೌದಿ ಅರೇಬಿಯಾ 14 ದೇಶಗಳ ನಾಗರಿಕರಿಗೆ ವೀಸಾ ನೀಡುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ.

ತಾತ್ಕಾಲಿಕ ವೀಸಾ ನಿಷೇಧವು ವ್ಯಾಪಾರ, ಕುಟುಂಬ ವೀಸಾಗಳ ಜೊತೆಗೆ ಉಮ್ರಾ ವೀಸಾಗಳಿಗೂ ಅನ್ವಯಿಸುತ್ತದೆ. ನೋಂದಣಿ ಇಲ್ಲದೆ ಜನರು ಹಜ್ ಯಾತ್ರೆಯಲ್ಲಿ ಭಾಗವಹಿಸುವುದನ್ನು ತಡೆಯಲು ಹಾಗೂ ಹೆಚ್ಚಿನ ಜನದಟ್ಟಣೆಯನ್ನು ನಿಯಂತ್ರಿಸುವ ಸಲುವಾಗಿ ಸೌದಿ ಸರ್ಕಾರವು ತಾತ್ಕಾಲಿಕ ವೀಸಾ ನಿಷೇಧದ ನಿರ್ಧಾರವನ್ನು ತೆಗೆದುಕೊಂಡಿದೆ.

- ಹಜ್ ಯಾತ್ರೆ ಸಂದರ್ಭದಲ್ಲಿ ನಾಗರಿಕರಿಗೆ ವೀಸಾ ರದ್ದುಗೊಳಿಸಿದ ಸೌದಿ ಅರೇಬಿಯಾ
- ಜೂನ್‌ವರೆಗೆ ಉಮ್ರಾ, ವ್ಯಾಪಾರ ಮತ್ತು ಕುಟುಂಬ ಭೇಟಿ ವೀಸಾಗಳು ಅಲಭ್ಯ

ಈ ವರ್ಷದ ಹಜ್ ಪೂರ್ಣಗೊಳ್ಳುವವರೆಗೆ (ಜೂನ್ ಮಧ್ಯಭಾಗ) ವೀಸಾ ನಿಷೇಧ ಮುಂದುವರಿಯುತ್ತದೆ. ವಿದೇಶಿಯರು ಏ.13 ರವರೆಗೆ ಮಾತ್ರ ಉಮ್ರಾ ವೀಸಾದಲ್ಲಿ ಬರಬಹುದು ಎಂದು ಸೌದಿ ಅಧಿಕಾರಿಗಳು ತಿಳಿಸಿದ್ದಾರೆ.

**14 ದೇಶಗಳ ಸಂಪೂರ್ಣ ಪಟ್ಟಿ:** ಭಾರತ, ಬಾಂಗ್ಲಾದೇಶ, ಪಾಕಿಸ್ತಾನ, ಅಲ್ಜೀರಿಯಾ, ಈಜಿಪ್ಟ್, ಇಥಿಯೋಪಿಯಾ, ಇಂಡೋನೇಷ್ಯಾ, ಇರಾಕ್, ಜೋರ್ಡಾನ್, ಮೊರಾಕೊ, ನೈಜೀರಿಯಾ, ಸುಡಾನ್, ಟುನೀಶಿಯಾ ಮತ್ತು ಯೆಮೆನ್.



ಹಜ್‌ನಲ್ಲಿ ಸುಗಮ ವ್ಯವಸ್ಥೆ ಕಲ್ಪಿಸಲು ವೀಸಾ ನಿಯಮಗಳನ್ನು ಕಟ್ಟುನಿಟ್ಟುಗೊಳಿಸುವಂತೆ ಸೌದಿ ಕ್ರೌನ್ ಪ್ರಿನ್ಸ್ ಮೊಹಮ್ಮದ್ ಬಿನ್ ಸಲ್ಮಾನ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. 2024ರ ಹಜ್ ಯಾತ್ರೆಯ ಸಮಯದಲ್ಲಿ ಸಾವನ್ನಪ್ಪಿದ ಜನರಲ್ಲಿ ಹೆಚ್ಚಿನವರು ಅನಧಿಕೃತ ಯಾತ್ರಿಕರು.

ಈ ಸಮಸ್ಯೆ ಕಡಿವಾಣ ಹಾಕುವ ನಿಟ್ಟಿನಲ್ಲಿ ವೀಸಾ ನೀಡುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ.

**ಹಜ್ ಯಾತ್ರೆಯನ್ನು ಸರಳೀಕರಿಸಲು ನಿರ್ಧಾರ:** ಹಜ್ ಪ್ರಯಾಣವನ್ನು ಸುಗಮಗೊಳಿಸಲು, ಭದ್ರತೆಯನ್ನು ಹೆಚ್ಚಿಸಲು, ಸೌದಿ ಅರೇಬಿಯಾ ಕೆಲವು ವೀಸಾ ಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ.

ದಂಡವನ್ನು ತಪ್ಪಿಸಲು ಅಧಿಕಾರಿಗಳು ಹೊಸ ನಿಯಮಗಳನ್ನು ಪಾಲಿಸುವಂತೆ ಒತ್ತಾಯಿಸುತ್ತಾರೆ.

**ಪ್ರಸಕ್ತ ವರ್ಷದ ಹಜ್ ಯಾತ್ರೆ ಆರಂಭಕ್ಕೂ ಮುಂಚಿತವಾಗಿ, ಸೌದಿ ಅರೇಬಿಯಾ 14 ದೇಶಗಳ ನಾಗರಿಕರಿಗೆ ವೀಸಾ ನೀಡುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ತಾತ್ಕಾಲಿಕ ವೀಸಾ ನಿಷೇಧವು ವ್ಯಾಪಾರ ಮತ್ತು ಕುಟುಂಬ ವೀಸಾಗಳ ಜೊತೆಗೆ ಉಮ್ರಾ ವೀಸಾಗಳಿಗೂ ಅನ್ವಯಿಸುತ್ತದೆ. ನೋಂದಣಿ ಇಲ್ಲದೆ ಜನರು ಹಜ್ ಯಾತ್ರೆಯಲ್ಲಿ ಭಾಗವಹಿಸುವುದನ್ನು ತಡೆಯಲು, ಹೆಚ್ಚಿನ ಜನದಟ್ಟಣೆಯನ್ನು ನಿಯಂತ್ರಿಸುವ ಸಲುವಾಗಿ ಸೌದಿ ಸರ್ಕಾರವು ತಾತ್ಕಾಲಿಕ ವೀಸಾ ನಿಷೇಧದ ನಿರ್ಧಾರವನ್ನು ತೆಗೆದುಕೊಂಡಿದೆ. ವಿದೇಶಿಯರು ಏ.13 ರವರೆಗೆ ಮಾತ್ರ ಉಮ್ರಾ ವೀಸಾದಲ್ಲಿ ಬರಬಹುದು ಎಂದು ಸೌದಿ ಅಧಿಕಾರಿಗಳು ತಿಳಿಸಿದ್ದಾರೆ.**




ಕಾನೂನುಬಾಹಿರವಾಗಿ ಹೆಚ್ಚುಕಾಲ ತಂಗಿದರೆ ದೇಶದಿಂದ ಐದು ವರ್ಷಗಳ ನಿಷೇಧ ಹೇರಲಾಗುತ್ತದೆ.

ವರದಿಗಳ ಪ್ರಕಾರ, ಕ್ರೌನ್ ಪ್ರಿನ್ಸ್ ಮೊಹಮ್ಮದ್ ಬಿನ್ ಸಲ್ಮಾನ್ ಅವರು ಸರ್ಕಾರಕ್ಕೆ ವೀಸಾ ನಿಯಮಗಳನ್ನು ಬಿಗಿಗೊಳಿಸುವಂತೆ ಮತ್ತು ವೀಸಾ ನೀಡುವ ಮೊದಲು ಸರಿಯಾದ ಪರಿಶೀಲನೆ ನಡೆಸುವಂತೆ ನಿರ್ದೇಶಿಸಿದ್ದಾರೆ. ಯಾತ್ರಿಕರಿಗೆ ನಿಯಮಗಳನ್ನು ಪಾಲಿಸಲು ಸಹಕಾರಿಯಾಗುವಂತೆ, ಸೌದಿ ಅರೇಬಿಯಾ ಅಧಿಕಾರಿಗಳು ಹಜ್, ಉಮ್ರಾಕ್ಕಾಗಿ 16 ಭಾಷೆಗಳಲ್ಲಿ ಡಿಜಿಟಲ್ ಮಾರ್ಗದರ್ಶಿಯನ್ನು ರಚಿಸಿದ್ದಾರೆ.

**ಉಮ್ರಾ ವೀಸಾ ಎಂದರೇನು?:** ಉಮ್ರಾ ವೀಸಾ ಎಂಬುದು ಸೌದಿ ಅರೇಬಿಯಾ ನೀಡುವ ವಿಶೇಷ ಪ್ರಯಾಣ ಪರವಾನಗಿಯಾಗಿದ್ದು, ಇದು ಮುಸ್ಲಿಮರು ಮೆಕ್ಕಾ ಮತ್ತು ಮದೀನಾದಲ್ಲಿ ಹಜ್‌ಗಾಗಿ ದೇಶವನ್ನು ಪ್ರವೇಶಿಸಲು ಅನುವು ಮಾಡಿಕೊಡುತ್ತದೆ. ಇದು ಸಾಮಾನ್ಯವಾಗಿ ಏಕ ಅಥವಾ ಬಹು-ಪ್ರವೇಶ ವೀಸಾಗಳಾಗಿದ್ದು, ಸೀಮಿತ ಅವಧಿಗೆ ಮಾನ್ಯವಾಗಿರುತ್ತದೆ. ಇದನ್ನು ಉದ್ಯೋಗ ಅಥವಾ ಪ್ರವಾಸೋದ್ಯಮದಂತಹ ಇತರ ಉದ್ದೇಶಗಳಿಗಾಗಿ ಬಳಸಲಾಗುವುದಿಲ್ಲ.

2024ರ ಹಜ್‌ಯಾತ್ರೆಯಲ್ಲಿ 1000ಕ್ಕೂ ಹೆಚ್ಚು ಜನರ ಸಾವು ಸೌದಿ ಅರೇಬಿಯಾದಲ್ಲಿ ಹೆಚ್ಚಿದ ಉಷ್ಣಾಂಶ, ಬಿಸಿಗಾಳಿ, ಹೀಟ್ ಸ್ಟ್ರೋಕ್, ಕಾಲ್ತುಳಿತದಿಂದಾಗಿ ಕಳೆದ ವರ್ಷ ಹಜ್ ಯಾತ್ರೆಯ ಸಮಯದಲ್ಲಿ 1 ಸಾವಿರಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದರು. ಮೃತಪಟ್ಟವರಲ್ಲಿ ಹೆಚ್ಚಿನವರು ಈಜಿಪ್ಟಿನವರು.

ಹಜ್ ಯಾತ್ರೆ ಕೈಗೊಂಡಿರುವ ಸಾವಿರಾರು ಮಂದಿ ಯಾವುದೇ ನೋಂದಣಿ ಮಾಡಿಕೊಂಡಿರಲಿಲ್ಲ, ಹೀಗಾಗಿ ಅವರಿಗೆಲ್ಲಾ ವಸತಿ ವ್ಯವಸ್ಥೆ, ಸೌಲಭ್ಯ ನೀಡಲು ಸಾಧ್ಯವಾಗಿರಲಿಲ್ಲ. ವಿದೇಶಾಂಗ ವ್ಯವಹಾರಗಳ ಸಂಸ್ಥೆ ಹಜ್ ಸಮಯದಲ್ಲಿ 98 ಭಾರತೀಯ ನಾಗರಿಕರು ಸಾವನ್ನಪ್ಪಿದ್ದರು.

## ಅಮರಾವತಿ ನಿರ್ಮಾಣಕ್ಕೆ ಕೇಂದ್ರದಿಂದ 4200 ಕೋಟಿ ರೂ. ರಿಲೀಸ್

**ಅಮರಾವತಿ:** ಅಮರಾವತಿ ಬಂಡವಾಳ ಅಭಿವೃದ್ಧಿ ಯೋಜನೆಗಾಗಿ ಕೇಂದ್ರ ಸರ್ಕಾರವು ಆಂಧ್ರಪ್ರದೇಶಕ್ಕೆ 4.200 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ವಿಶ್ವ ಬ್ಯಾಂಕ್, ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕ್ (ಎಡಿಬಿ) ಒಟ್ಟಾಗಿ ಅಮರಾವತಿ ರಾಜಧಾನಿ ನಗರ -1 ರ ಅಭಿವೃದ್ಧಿಗೆ ತಲಾ 800 ಮಿಲಿಯನ್ ಡಾಲರ್ (13,600 ಕೋಟಿ ರೂ.) ಧನಸಹಾಯ ನೀಡಲು ಬದ್ಧವಾಗಿದ್ದರೆ, ಕೇಂದ್ರವು ಮೊದಲ ಹಂತದ ಅಭಿವೃದ್ಧಿಗೆ ಬದ್ಧವಾಗಿರುವ 15,000 ಕೋಟಿ ರೂ.ಗಳಲ್ಲಿ ಉಳಿದ 1.400 ಕೋಟಿ ರೂ.ಗಳನ್ನು ಕೇಂದ್ರವು ನೀಡಲಿದೆ. ವಿಶ್ವಬ್ಯಾಂಕ್ ದಾಖಲೆಗಳ ಪ್ರಕಾರ, ಈ ಯೋಜನೆಯು ಈ ವರ್ಷದ ಜನವರಿ 22 ರಂದು ಜಾರಿಗೆ ಬಂದಿತು, ಕಾರ್ಯಕ್ರಮ ಮುಂಗಡಕ್ಕಾಗಿ 205 ಮಿಲಿಯನ್ ಯುಎಸ್‌ಡಿಯ ಮೊದಲ ವಿತರಣೆಯನ್ನು ಕಳೆದ ತಿಂಗಳು ಮಾಡಲಾಯಿತು. ಈ ಒಟ್ಟು 15,000 ಕೋಟಿ ರೂ.ಗಳಲ್ಲಿ ವಿಶ್ವ ಬ್ಯಾಂಕ್, ಎಬಿಡಿ ಮತ್ತು ಕೇಂದ್ರದ ನಡುವೆ ಹಂಚಿಕೆ ಇದೆ.



ಅವರು ಕೂಡ ಅದೇ ಮೊತ್ತವನ್ನು ನೀಡಿರಬಹುದು.

ಅವರು ಭಾರತ ಸರ್ಕಾರಕ್ಕೆ ಎಷ್ಟು ನೀಡಿದ್ದಾರೆ ಎಂದು ನಿಖರವಾಗಿ ತಿಳಿದಿಲ್ಲ. ಸುಮಾರು 800 ಕೋಟಿ ರೂ.ಗಳ ಮ್ಯಾಚಿಂಗ್ ಮೊತ್ತವನ್ನು ಸಹ ಬಿಡುಗಡೆ ಮಾಡಿತು. ಆದ್ದರಿಂದ ನಾವು ಏಪ್ರಿಲ್ 1 ರಂದು ಕೇಂದ್ರದಿಂದ ಒಟ್ಟು 4,285 ಕೋಟಿ ರೂ.ಗಳನ್ನು ಸ್ವೀಕರಿಸಿದ್ದೇವೆ ಎಂದು ಅಧಿಕಾರಿ ಪಿಟಿಐಗೆ ತಿಳಿಸಿದ್ದಾರೆ.

ಅಧಿಕಾರಿಯ ಪ್ರಕಾರ, ಒಟ್ಟು ಬದ್ಧ ಮೊತ್ತದ 25 ಪ್ರತಿಶತವನ್ನು ಕ್ರೋಢೀಕರಣ ಮುಂಗಡವಾಗಿ ನೀಡಲು ಕೇಂದ್ರವು ಒಪ್ಪಿಕೊಂಡಿದೆ ಮತ್ತು ಬಿಡುಗಡೆಯಾದ ಮೊತ್ತವು ಈ ಶೀರ್ಷಿಕೆಯಡಿಯಲ್ಲಿದೆ. ರಾಜ್ಯ ಸರ್ಕಾರವು ಸ್ವಲ್ಪ ಪ್ರಗತಿಯನ್ನು ತೋರಿಸಿದ ನಂತರ ಮತ್ತು ಬಿಲ್‌ಗಳು ಅಥವಾ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸಿದ ನಂತರ ಬದ್ಧ ಮೊತ್ತದ ಮುಂದಿನ ಕಂತನ್ನು ಬಿಡುಗಡೆ ಮಾಡಲಾಗುವುದು ಎಂದು ಅಧಿಕಾರಿ ಹೇಳಿದರು. ಎರಡನೇ ಕಂತಿನ ನಿಧಿ ಸಮಯ ತೆಗೆದುಕೊಳ್ಳುತ್ತದೆ. ಇದು ಕನಿಷ್ಠ ಆರು ತಿಂಗಳು ತೆಗೆದುಕೊಳ್ಳುತ್ತದೆ. ಏಕೆಂದರೆ ಕೆಲಸಗಳು ಈಗಷ್ಟೇ ಪ್ರಾರಂಭವಾಗಿವೆ ಮತ್ತು ಇನ್ನೂ ಎರಡು ಮೂರು ತಿಂಗಳಲ್ಲಿ ಅವು ವೇಗ ಪಡೆಯುತ್ತವೆ ಎಂದು ಅಧಿಕಾರಿ ಹೇಳಿದರು.

ಪರಿಸರ, ಜೀವನೋಪಾಯದ ಸಮಸ್ಯೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿ ವಿಶ್ವ ಬ್ಯಾಂಕ್‌ಗೆ ಸಲ್ಲಿಸಲಾದ ಕೆಲವು ದೂರುಗಳ ಬಗ್ಗೆ ಮಾತನಾಡಿದ ಅವರು, ಕುಂದುಕೊರತೆಗಳನ್ನು ಪರಿಹರಿಸಲು ವಿಶ್ವ ಬ್ಯಾಂಕ್ ತಮ್ಮದೇ ಆದ ಬಲವಾದ ಕಾರ್ಯವಿಧಾನವನ್ನು ಹೊಂದಿವೆ. ಅದು ಅವರ ಮಂಡಳಿಯಿಂದ ಸ್ವತಂತ್ರವಾಗಿದೆ ಎಂದು ಹೇಳಿದರು.

## 5 ವಿಮಾನಗಳಲ್ಲಿ ಅಮೆರಿಕಕ್ಕೆ ಐಫೋನ್ ರವಾನಿಸಿದ ಆಪಲ್

**ನವದೆಹಲಿ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿದ ತೆರಿಗೆ ಸುಂಕದಿಂದ ಪಾರಾಗಲು ಆಪಲ್ ಕಂಪನಿ ಭಾರತದಿಂದ 5 ವಿಮಾನದಷ್ಟು ಐಫೋನ್ ಮತ್ತು ಇತರ ಉತ್ಪನ್ನಗಳನ್ನು ಅಮೆರಿಕಕ್ಕೆ ರಫ್ತು ಮಾಡಿದೆ. ಟ್ರಂಪ್ ತೆರಿಗೆ ಸಮರ ಆರಂಭಿಸಿದ್ದು ವಿದೇಶದಿಂದ ಅಮೆರಿಕಕ್ಕೆ ಆಮದಾಗುವ ವಸ್ತುಗಳ ಮೇಲಿದ್ದ ಸುಂಕವನ್ನು ಹೆಚ್ಚಿಸಿದ್ದಾರೆ. ಇದರಿಂದಾಗಿ ಅಮೆರಿಕದಲ್ಲಿ ವಿದೇಶದಿಂದ ಆಮದಾಗುವ ವಸ್ತುಗಳ ಬೆಲೆ ಏರಿಕೆಯಾಗಲಿದೆ. ವಸ್ತುಗಳ ಬೆಲೆ ಏರಿಕೆಯಿಂದ ಪಾರಾಗಲು ಆಪಲ್ ಕಂಪನಿ ಭಾರೀ ಪ್ರಮಾಣದಲ್ಲಿ ಐಫೋನ್, ಇತರ ವಸ್ತುಗಳನ್ನು ಭಾರತದಿಂದ ರಫ್ತು ಮಾಡಿದೆ ಎಂದು ವರದಿಯಾಗಿದೆ. ಭಾರತದ ಮೇಲೆ ಟ್ರಂಪ್ ಶೇ. 26 ಮತ್ತು ಚೀನಾದ ಮೇಲೆ ಶೇ. 52, ತೈವಾನ್ ಮೇಲೆ 32%, ವಿಯೆಟ್ನಾಂ ಮೇಲೆ 46% ತೆರಿಗೆ ವಿಧಿಸಿದ್ದಾರೆ. ಐಫೋನ್ ಅಮೆರಿಕ ಕಂಪನಿಯಾದರೂ ಬಹುತೇಕ ಐಫೋನ್‌ಗಳು, ಅದರ ಬಿಡಿಭಾಗಗಳು ಭಾರತ, ವಿಯೆಟ್ನಾಂ, ತೈವಾನ್, ಚೀನಾದಲ್ಲಿ ತಯಾರಾಗುತ್ತವೆ. ಹೀಗಾಗಿ ಈ ದೇಶಗಳಿಂದ ರಫ್ತಾಗುವ ಐಫೋನ್ ಗಳೂ ದುಬಾರಿ ಆಗಲಿವೆ. ಬೇರೆ ದೇಶಗಳಿಗೆ ಹೋಲಿಕೆ ಮಾಡಿದರೆ ಭಾರತದ ಮೇಲೆ ವಿಧಿಸಿದ ಸುಂಕ ಕಡಿಮೆಯಿದೆ.



ಮಾರ್ಚ್ ಕೊನೆಯ ವಾರದಲ್ಲಿ ಆಪಲ್ ಐಫೋನ್‌ಗಳನ್ನು ರಫ್ತು ಮಾಡಿದೆ. ಏಪ್ರಿಲ್ 5 ರಿಂದ ಜಾರಿಗೆ ಬಂದ ಟ್ರಂಪ್ ಆಡಳಿತವು ವಿಧಿಸಿದ 10% ಪ್ರತಿ ತೆರಿಗೆ ಮೊದಲು ರಫ್ತಾಗಿದೆ. ಚೀನಾದ ಸರಕುಗಳ ಮೇಲೆ 54% ತೆರಿಗೆ ವಿಧಿಸಿದರೆ ಭಾರತದ ವಸ್ತುಗಳ ಮೇಲೆ 26% ತೆರಿಗೆ ವಿಧಿಸಲಾಗುತ್ತಿದೆ. ಈ ನಿರ್ಧಾರದಿಂದ ಭಾರತವು ಆಪಲ್‌ನ ದೊಡ್ಡ ಜಾಗತಿಕ ಉತ್ಪಾದನಾ ನೆಲೆಯಾಗಿ ಹೊರಹೊಮ್ಮುವ ಸಾಧ್ಯತೆಯಿದೆ. ಅಂದಾಜು ಅಮೆರಿಕಕ್ಕೆ 9 ಶತಕೋಟಿ ಡಾಲರ್ ಮೌಲ್ಯದ ಐಫೋನ್‌ಗಳನ್ನು ಭಾರತ ರಫ್ತು ಮಾಡುತ್ತಿದೆ. ಫಾಕ್ಸ್ ಕಾನ್ 2019ರಿಂದ ಆಪಲ್ ಐಫೋನ್ ಗಳನ್ನು ಭಾರತದಲ್ಲಿ ತಯಾರಿಸುತ್ತಿದ್ದು, ತಮಿಳುನಾಡಿನಲ್ಲಿ ತನ್ನ ಘಟಕ ತೆರದಿದೆ. ಕರ್ನಾಟಕದ ಕೋಲಾರದ ನರಸಾಪುರ, ಬೆಂಗಳೂರಿನ ಪೀಣ್ಯದಲ್ಲಿ ವಿಸ್ಟ್ರಾನ್ ಕಂಪನಿ ಐಫೋನ್ ತಯಾರಿಸುತ್ತಿದೆ.

## ಇಬ್ಬರು ಬ್ರಿಟನ್ ಸಂಸದರ ಬಂಧನ: ಒಪ್ಪಲಾಗದು, ತೀವ್ರ ಕಳವಳಕಾರಿ

**ಲಂಡನ್:** ಬ್ರಿಟನ್‌ನ ಇಬ್ಬರು ಶಾಸಕರನ್ನು ಇಸ್ರೇಲ್ ಬಂಧಿಸಿ, ಅವರಿಗೆ ಪ್ರವೇಶ ನಿರಾಕರಿಸಿರುವುದು ಸ್ವೀಕಾರಾರ್ಹವಲ್ಲ ಎಂದು ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಲ್ಯಾಮಿ ಹೇಳಿದ್ದಾರೆ.

ಆಡಳಿತಾರೂಢ ಲೇಬರ್ ಪಾರ್ಟಿಯ ಯುವಾನ್ ಯಾಂಗ್, ಅಬ್ತಿಸಮ್ ಮೊಹಮದ್ ಲಂಡನ್‌ನಿಂದ ಇಸ್ರೇಲ್‌ಗೆ ತೆರಳಿದಾಗ ಅವರಿಗೆ ದೇಶ ಪ್ರವೇಶಿಸದಂತೆ ನಿರ್ಬಂಧಿಸಲಾಗಿದೆ, ಗಡೀಪಾರು ಮಾಡಲಾಗಿದೆ ಎಂದು ಬ್ರಿಟಿಷ್ ಮಾಧ್ಯಮ ವರದಿ ಮಾಡಿದೆ.

ಇಸ್ರೇಲ್‌ಗೆ ತೆರಳಿದ ಸಂಸದೀಯ ನಿಯೋಗದಲ್ಲಿದ್ದ ಇಬ್ಬರು ಬ್ರಿಟಿಷ್ ಸಂಸದರನ್ನು ಇಸ್ರೇಲಿ ಅಧಿಕಾರಿಗಳು ಬಂಧಿಸಿದ್ದು, ಪ್ರವೇಶ ನಿರಾಕರಿಸಿದ್ದಾರೆ ಎಂಬುದನ್ನು ಒಪ್ಪಲಾಗದು, ಇದು ಪ್ರತಿಕೂಲವಾಗಿದ್ದು, ತೀವ್ರ ಕಳವಳಕಾರಿಯಾಗಿದೆ ಎಂದು ಲ್ಯಾಮಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಇದು ಬ್ರಿಟಿಷ್ ಸಂಸದರು ಸರಿಯಾಗಿ ನಡೆಸಿಕೊಳ್ಳುವ ಕ್ರಮವಲ್ಲಾ ಎಂದು ಇಸ್ರೇಲ್ ಸರ್ಕಾರದ ನನ್ನ ಸಹವರ್ತಿಗಳಿಗೆ ಸ್ಪಷ್ಟಪಡಿಸುತ್ತೇನೆ. ನಮ್ಮ ಬೆಂಬಲ ನೀಡಲು ನಾವು ಇಬ್ಬರೂ ಸಂಸದರನ್ನು ಸಂಪರ್ಕಿಸಿದ್ದೇವೆ ಎಂದು ಅವರು ಹೇಳಿದ್ದಾರೆ. ಇಸ್ರೇಲ್ ತೆಗೆದುಕೊಂಡು ಕ್ರಮ ಆಶ್ಚರ್ಯ ಮೂಡಿಸಿದೆ ಎಂದು ಇಬ್ಬರು ಸಂಸದರು



**ಈ ಘಟನೆಯು ಲ್ಯಾಮಿ ಮತ್ತು ವಿರೋಧ ಪಕ್ಷದ ಕನ್ಸರ್ವೇಟಿವ್ ನಾಯಕ ಕೆಮಿ ಬಡೆನೋಚ್ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ. ಯುಕೆ ಸಂಸದರನ್ನು ಬಂಧಿಸಿರುವುದು ಆಶ್ಚರ್ಯಕರವಾಗಿಲ್ಲ ಎಂದು ಕೆಮಿ ಬಡೆನೋಚ್ ಸ್ಕೈ ನ್ಯೂಸ್‌ಗೆ ಹೇಳಿದ್ದರು. ಇದಕ್ಕೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿದ ಲ್ಯಾಮಿ, ಇಬ್ಬರು ಬ್ರಿಟಿಷ್ ಸಂಸದರನ್ನು ಬಂಧಿಸಿ ಗಡೀಪಾರು ಮಾಡಿದ್ದಕ್ಕಾಗಿ ನೀವು ಇನ್ನೊಂದು ದೇಶವನ್ನು ಹುರಿದುಂಬಿಸುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಕಿಡಿಕಾರಿದ್ದಾರೆ.**

ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಆದರೆ ಅಧಿಕೃತ ಸಂಸದೀಯ ನಿಯೋಗದಲ್ಲಿದ್ದರು ಎಂಬ ಅವರ ಹೇಳಿಕೆ ಸುಳ್ಳು ಎಂದು ಕಂಡುಬಂದಿದೆ. ಅಂತಹ ಯಾವುದೇ ಅಧಿಕೃತ ನಿಯೋಗದ ಭೇಟಿ ಕುರಿತು ಅಧಿಕೃತ ಮಾಹಿತಿ ಬಂದಿರಲಿಲ್ಲ ಎಂದು ಇಸ್ರೇಲ್ ಹೇಳಿದೆ. ಇಸ್ರೇಲ್ ಭದ್ರತಾ ಪಡೆಗಳ ಕ್ರಮಗಳನ್ನು ದಾಖಲಿಸುವುದು ಮತ್ತು ಇಸ್ರೇಲ್ ವಿರುದ್ಧ ದ್ವೇಷದ ಭಾಷಣವನ್ನು ಹರಡುವುದು ಅವರ ಭೇಟಿಯ ಉದ್ದೇಶವಾಗಿತ್ತು ಎಂದು ಹೆಚ್ಚಿನ ವಿಚಾರಣೆಯಿಂದ ತಿಳಿದುಬಂದಿದೆ ಎಂದು ಆಂತರಿಕ ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಿದೆ. ಕಳೆದ ತಿಂಗಳು ಹಮಾಸ್ ನೊಂದಿಗೆ ಹೊಸದಾದ ಮಿಲಿಟರಿ ಕಾರ್ಯಾಚರಣೆ ಆರಂಭವಾದಾಗಿನಿಂದಲೂ ಗಾಜಾಪಟ್ಟಿಯಲ್ಲಿರುವ ಪ್ರದೇಶಗಳ ವಶಕ್ಕೆ ಮುಂದಾಗಿರುವ ಇಸ್ರೇಲ್, ಇದು ಒತ್ತೆಯಾಳುಗಳ ಬಿಡುಗಡೆಯ ಕಾರ್ಯತಂತ್ರವಾಗಿದೆ ಎಂದು ಹೇಳಿದೆ.

ಕಳೆದ ತಿಂಗಳು ಇಸ್ರೇಲ್ ತೀವ್ರ ಬಾಂಬ್ ದಾಳಿಯನ್ನು ಪುನರಾರಂಭಿಸಿದಾಗಿನಿಂದ 1,249 ಜನರು ಸಾವನ್ನಪ್ಪಿದ್ದಾರೆ ಎಂದು ಹಮಾಸ್ ಆಡಳಿತದ ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ. ಯುದ್ಧ ಪ್ರಾರಂಭವಾದಾಗಿನಿಂದ ಒಟ್ಟಾರೆ ಮೃತಪಟ್ಟವರ ಸಂಖ್ಯೆ 50,609 ಕ್ಕೆ ತಲುಪಿದೆ.

## ಮಲಪ್ಪುರಂನ್ನು ವಿಭಿನ್ನ ದೇಶ ಮಾಡುವ ಹೇಳಿಕೆ

**ಮಲಪ್ಪುರಂ:** ಮುಸ್ಲಿಮರು ಅತಿ ಹೆಚ್ಚು ವಾಸಿಸುವ ಕೇರಳದ ಮಲಪ್ಪುರಂ ವಿಭಿನ್ನ ದೇಶವಿದ್ದಂತೆ ಎಂಬ ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೆಲ್ಲಪಲ್ಲಿ ನಟೇಶನ್ ಹೇಳಿಕೆ ಇದೀಗ ವಿವಾದ ಪಡೆದುಕೊಂಡಿದೆ. ಮಲಪ್ಪುರಂನಲ್ಲಿ ನಡೆದ ಸಮಾವೇಶದಲ್ಲಿ ಶ್ರೀನಾರಾಯಣ ಧರ್ಮ ಪರಿಪಾಲನಾ (ಎಸ್‌ಎನ್‌ಡಿಪಿ) ಯೋಗಂ ಪ್ರಧಾನ ಕಾರ್ಯದರ್ಶಿ ವೆಲ್ಲಪಲ್ಲಿ ನಟೇಶನ್ ಮಾಡಿದ ಭಾಷಣಕ್ಕೆ ಕೇರಳದಾದ್ಯಂತ ರಾಜಕೀಯ, ಸಮುದಾಯದ ಮುಖಂಡರಿಂದ ತೀಕ್ಷ್ಣ ಪ್ರತಿಕ್ರಿಯೆಗಳು ಬಂದಿವೆ.



ರಾಜ್ಯದ ಮುಸ್ಲಿಂ ಬಹುಸಂಖ್ಯಾತ ಜಿಲ್ಲೆಯಾದ ಮಲಪ್ಪುರಂ ಅನ್ನು ಉಲ್ಲೇಖಿಸಿದ ನಟೇಶನ್ ಅದನ್ನು ವಿಭಿನ್ನ ದೇಶ ಎಂದು ಬಣ್ಣಿಸಿದರು.

ಅಲ್ಲಿ ನಾವು ಶುದ್ಧ ಗಾಳಿಯನ್ನು ಉಸಿರಾಡುವ ಮೂಲಕ ವಾಸಿಸಬಹುದು ಎಂದು ನಾನು ಭಾವಿಸುವುದಿಲ್ಲ ಎಂದಿದ್ದರು. ಮಲಪ್ಪುರಂ ಒಂದು ವಿಭಿನ್ನ ದೇಶ. ಇದು ವಿಭಿನ್ನ ಜನರ ಸ್ಥಿತಿ ಎಂದು ನಟೇಶನ್ ಚುಂಗತಾರಾ ಪ್ರದೇಶದಲ್ಲಿ ನಡೆದ ಸಭೆಯಲ್ಲಿ ಮಾತನಾಡುತ್ತಾ ಹೇಳಿದರು.

ದಶಕಗಳ ಸ್ವಾತಂತ್ರ್ಯದಿಂದ ಹಿಂದುಳಿದ ಸಮುದಾಯಗಳು ಪ್ರಯೋಜನ ಪಡೆದಿವೆಯೇ ಎಂದು ಅವರು ಪ್ರಶ್ನಿಸಿದರು. 2011 ರ ಜನಗಣತಿಯ ಪ್ರಕಾರ 4.1 ದಶಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಮಲಪ್ಪುರಂನಲ್ಲಿ ಶೇ.70ಕ್ಕಿಂತ ಹೆಚ್ಚು ಮುಸ್ಲಿಂ ಬಹುಮತವಿದೆ. ಜಿಲ್ಲೆಯ ಜನಸಂಖ್ಯೆಯಲ್ಲಿ ಕೇವಲ ಶೇ. 27.6 ರಷ್ಟು ಹಿಂದೂಗಳು ಅಲ್ಪಸಂಖ್ಯಾತರಾಗಿದ್ದಾರೆ. ಎಸ್‌ಎನ್‌ಡಿಪಿ ಈಳವ ಸಮುದಾಯವನ್ನು ಪ್ರತಿನಿಧಿಸುತ್ತದೆ. ಇದು ಕೇರಳದ ವಿವಿಧ ಭಾಗಗಳಲ್ಲಿ ಗಮನಾರ್ಹ ಉಪಸ್ಥಿತಿಯನ್ನು ಹೊಂದಿದೆ.

## ಕುನಾಲ್ ಕಾಮ್ರಾಗೆ ನೀಡಿದ್ದ ಮಧ್ಯಂತರ ನಿರೀಕ್ಷಣಾ ಜಾಮೀನು ಅವಧಿ ವಿಸ್ತರಣೆ

**ಚೆನ್ನೈ:** ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಏಕನಾಥ ಶಿಂಧೆ ಅವರನ್ನು 'ದೇಶದ್ರೋಹಿ' ಎಂದು ಕರೆದು ವಿವಾದಕ್ಕೆ ಸಿಲುಕಿರುವ ಸ್ಟ್ಯಾಂಡ್‌ಅಪ್ ಕಾಮಿಡಿಯನ್ ಕುನಾಲ್ ಕಾಮ್ರಾ ಅವರಿಗೆ ನೀಡಲಾಗಿದ್ದ ಮಧ್ಯಂತರ ನಿರೀಕ್ಷಣಾ ಜಾಮೀನನ್ನು ಏಪ್ರಿಲ್ 17ರವರೆಗೆ ಮದ್ರಾಸ್ ಹೈಕೋರ್ಟ್ ಸೋಮವಾರ ವಿಸ್ತರಿಸಿದೆ. ಸಂಬಂಧಪಟ್ಟ ನ್ಯಾಯಾಲಯಗಳನ್ನು ಸಂಪರ್ಕಿಸಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ನ್ಯಾಯಮೂರ್ತಿ ಸುಂದರ್ ಮೋಹನ್ ಅವರು ಅರ್ಜಿದಾರರಾದ ಕಾಮ್ರಾ ಅವರಿಗೆ ಸೂಚಿಸಿದ್ದಾರೆ.

ಸೋಮವಾರ ಪ್ರಕರಣದ ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ವಿ ಸುರೇಶ್, ಮಹಾರಾಷ್ಟ್ರದಲ್ಲಿ ಅರ್ಜಿದಾರರ ವಿರುದ್ಧ ಇನ್ನೂ ಮೂರು ಎಫ್‌ಐಆರ್‌ಗಳು ದಾಖಲಾಗಿವೆ ಎಂದು ತಿಳಿಸಿದರು. ಅಧಿಕಾರಿಗಳು ಮುಂಬೈನಲ್ಲಿರುವ ಅವರ ಪೋಷಕರ ಮನೆಗೆ ಭೇಟಿ ನೀಡಿ ಅವರ ವೃದ್ಧ ಪೋಷಕರಿಗೆ ತೊಂದರೆ ಉಂಟುಮಾಡಿದ್ದಾರೆ. ಅರ್ಜಿದಾರರ ಮೇಲಿನ ದ್ವೇಷ ಇನ್ನೂ ಮುಂದುವರೆದಿದೆ. ಅವರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನರನ್ನು ಸಹ ಪೊಲೀಸರು ಕರೆಸಿದ್ದಾರೆ ಎಂದು ಸುರೇಶ್ ಹೇಳಿದರು.



ನ್ಯಾಯಾಧೀಶರು ಪ್ರಕರಣದ ಮುಂದಿನ ವಿಚಾರಣೆಯನ್ನು ಏಪ್ರಿಲ್ 17ಕ್ಕೆ ಮುಂದೂಡಿದರು. ಮುಂಬೈನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಏಕನಾಥ್ ಶಿಂಧೆ ಅವರ ವಿರುದ್ಧ ನೀಡಿದ ಹೇಳಿಕೆಗಳು 36 ವರ್ಷದ ಕಾಮ್ರಾ ಅವರನ್ನು ಸಂಕಷ್ಟಕ್ಕೆ ಸಿಲುಕಿಸಿದ್ದು, ವಿವಾದಕ್ಕೆ ಕಾರಣವಾಗಿವೆ.

ಈ ಸಂಬಂಧ ಮುಂಬೈ ಪೊಲೀಸರು ಮೂರು ಬಾರಿ ಸಮನ್ಸ್ ಜಾರಿ ಮಾಡಿದ್ದಾರೆ. ಏಕನಾಥ್ ಶಿಂಧೆ ವಿರುದ್ಧದ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿ, ಏಕನಾಥ್ ಶಿಂಧೆ ನೇತೃತ್ವದ ಶಿವಸೇನಾ ಕಾರ್ಯಕರ್ತರು ಮುಂಬೈನ ಖಾರ್ ಪ್ರದೇಶದ ಕಾಂಟಿನೆಂಟಲ್ ಹೋಟೆಲ್‌ನಲ್ಲಿರುವ ಹ್ಯಾಬಿಟಾಟ್ ಕಾಮಿಡಿ ಕ್ಲಬ್ ಅನ್ನು ಧ್ವಂಸಗೊಳಿಸಿದ್ದಾರೆ.

ಸ್ಟ್ಯಾಂಡ್‌ಅಪ್ ಕಾಮಿಡಿಯನ್ ವಿರುದ್ಧ ಪ್ರಕರಣವನ್ನೂ ದಾಖಲಿಸಲಾಗಿದೆ.

ನಿರೀಕ್ಷಣಾ ಜಾಮೀನಿಗಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ಕಾಮ್ರಾ, 2021ರಲ್ಲಿ ಮುಂಬೈನಿಂದ ತಮಿಳುನಾಡಿಗೆ ತೆರಳಿದ್ದಾಗಿ ಮತ್ತು ಅಂದಿನಿಂದ ಸಾಮಾನ್ಯವಾಗಿ ಈ ರಾಜ್ಯದ ನಿವಾಸಿಯಾಗಿದ್ದೇನೆ ಮತ್ತು ಮುಂಬೈ ಪೊಲೀಸರಿಂದ ಬಂಧನಕ್ಕೊಳಗಾಗುವ ಭಯವಿದೆ ಎಂದು ಹೇಳಿದ್ದರು.

# ಕೆಲಸ ಕಳೆದುಕೊಂಡವರ ಬೆಂಬಲಕ್ಕೆ ನಿಲ್ಲುತ್ತೇವೆ

### ಅವರ ಘನತೆ ಪುನಃಸ್ಥಾಪಿಸಲು ಅಗತ್ಯವಿರುವ ಎಲ್ಲವನ್ನೂ ಮಾಡುತ್ತೇವೆ: ಮಮತಾ

**ಕೋಲ್ಕತ್ತಾ:** ಸುಪ್ರೀಂ ಕೋರ್ಟ್ ಆದೇಶದ ನಂತರ ಉದ್ಯೋಗ ಕಳೆದುಕೊಂಡ ಅರ್ಹ ಶಿಕ್ಷಕರಿಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ಭರವಸೆ ನೀಡಿದ್ದಾರೆ. ಅವರು ನಿರುದ್ಯೋಗಿಗಳಾಗಿ ಉಳಿಯದಂತೆ ಅಥವಾ ಸೇವೆಯಲ್ಲಿ ವಿರಾಮ ಪಡೆಯದಂತೆ ತಮ್ಮ ಸರ್ಕಾರ ಅವರಿಗೆ ಪರ್ಯಾಯ ವ್ಯವಸ್ಥೆ ಮಾಡುತ್ತದೆ. ಎಂದು ಅವರು ಹೇಳಿದ್ದಾರೆ.

ಇಲ್ಲಿನ ನೇತಾಜಿ ಒಳಾಂಗಣ ಕ್ರೀಡಾಂಗಣ ದಲ್ಲಿ ನಡೆದ ಉದ್ಯೋಗ ಕಳೆದುಕೊಂಡವರ ಸಭೆಯಲ್ಲಿ ಮಾತನಾಡಿದ ಬ್ಯಾನರ್ಜಿ, ಬಾಧಿತ ಶಿಕ್ಷಕರು, ಸಿಬ್ಬಂದಿ ತಮ್ಮ ತಮ್ಮ ಶಾಲೆಗಳಿಗೆ ಮರಳಬೇಕು, 'ಸ್ವಯಂ ಪ್ರೇರಣೆಯಿಂದ' ಕರ್ತವ್ಯವನ್ನು ಪುನರಾರಂಭಿಸಬೇಕು ಎಂದು ಒತ್ತಾಯಿಸಿದರು. ಪಶ್ಚಿಮ ಬಂಗಾಳದ ಸರ್ಕಾರಿ, ಅನುದಾನಿತ ಶಾಲೆಗಳಲ್ಲಿನ 25,753 ಶಿಕ್ಷಕರು ಮತ್ತು ಇತರ ಸಿಬ್ಬಂದಿ ನೇಮಕವನ್ನು ಅಸಿಂಧುಗೊಳಿಸಿ ಸುಪ್ರೀಂ ಕೋರ್ಟ್ ಏಪ್ರಿಲ್ 3 ತೀರ್ಪು ನೀಡಿತ್ತು. ಇಡೀ ನೇಮಕಾತಿ ಪ್ರಕ್ರಿಯೆ ದುರ್ಬಲವಾಗಿದ್ದು, ದೋಷಪೂರಿತವಾಗಿದೆ' ಎಂದು ನ್ಯಾಯಾಲಯ ತಿಳಿಸಿತ್ತು. ಪಶ್ಚಿಮ ಬಂಗಾಳ ಸಿಬ್ಬಂದಿ ನೇಮಕಾತಿ ಆಯೋಗ 2016 ರಲ್ಲಿ 24,640 ಹುದ್ದೆಗಳಿಗಾಗಿ ನೇಮಕಾತಿ ಪರೀಕ್ಷೆ ನಡೆಸಿತ್ತು. ಪರೀಕ್ಷೆಗೆ ಹಾಜರಾಗಿದ್ದ 23 ಲಕ್ಷ ಅಭ್ಯರ್ಥಿಗಳ ಪೈಕಿ 25,753 ಮಂದಿಗೆ ನೇಮಕಾತಿ ಪತ್ರ ನೀಡಲಾಗಿತ್ತು.



**ಉದ್ಯೋಗಗಳನ್ನು ಮರಳಿ ನೀಡಿ**

**ಸುಪ್ರೀಂ ಕೋರ್ಟ್ ತೀರ್ಪಿನ ಬಗ್ಗೆ ತಮ್ಮ ಸರ್ಕಾರವು ಪರಿಶೀಲನಾ ಅರ್ಜಿ ಸಲ್ಲಿಸಲಿದೆ. ಏಪ್ರಿಲ್ 3ರ ತೀರ್ಪಿನ ಬಗ್ಗೆ ಸಂಬಂಧಪಟ್ಟ ಪೀಠದಿಂದ 'ಸ್ಪಷ್ಟೀಕರಣ ಪಡೆಯಲಿದೆ. ಮೊದಲ ಹಂತದಲ್ಲಿ, ನಾವು ಅರ್ಹ ಅಭ್ಯರ್ಥಿಗಳ ವಿವರಗಳನ್ನು ಪರಿಶೀಲಿಸುತ್ತೇವೆ ಮತ್ತು ಅವರು ಕಳೆದುಕೊಂಡ ಉದ್ಯೋಗಗಳನ್ನು ಮರಳಿ ನೀಡಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.**

ಎರಡು ತಿಂಗಳೊಳಗೆ ಎಲ್ಲಾ ಅರ್ಹ ಅಭ್ಯರ್ಥಿಗಳಿಗೆ ಪರ್ಯಾಯ ವ್ಯವಸ್ಥೆಗಳನ್ನು ಕಲ್ಪಿಸಲಾಗುವುದು.

ನೀವು ನಿಮ್ಮ ಶಾಲೆಗಳಿಗೆ ಹಿಂತಿರುಗಬಹುದು, ಸ್ವಯಂಪ್ರೇರಣೆಯಿಂದ ಬೋಧನೆಯನ್ನು ಪುನರಾರಂಭಿಸಬಹುದು. ನಿಮಗೆ ಇನ್ನೂ ಯಾವುದೇ ವಜಾ ಪತ್ರವನ್ನು ನೀಡದ ಕಾರಣ ನೀವು ಇನ್ನೂ ಸೇವೆಯಲ್ಲಿದ್ದೀರಿ. ಯಾವುದೇ ಅರ್ಹ ಅಭ್ಯರ್ಥಿ ಕೆಲಸ ಕಳೆದುಕೊಳ್ಳದಂತೆ ನೋಡಿಕೊಳ್ಳುವುದು ನಮ್ಮ ಸರ್ಕಾರದ ಕರ್ತವ್ಯ. ಅರ್ಹ ಅಭ್ಯರ್ಥಿಗಳು ಸೇವೆಯಲ್ಲಿ ಯಾವುದೇ ವಿರಾಮ ವನ್ನು ಎದುರಿಸದಂತೆ ನೋಡಿಕೊಳ್ಳಲು ನಾವು ಯೋಜನೆ ಗಳನ್ನು ಸಿದ್ಧಪಡಿಸಿದ್ದೇವೆ. ಯಾರೊಬ್ಬರೂ ನಿರುದ್ಯೋಗಿಗಳಾಗಿ ಉಳಿಯಲು ನಾವು ಬಿಡುವುದಿಲ್ಲ' ಎಂದು ಸಾವಿರಾರು ಬಾಧಿತ ಶಿಕ್ಷಕರು ಹಾಜರಿದ್ದ ಸಭೆಯಲ್ಲಿ ಮಮತಾ ಬ್ಯಾನರ್ಜಿ ಹೇಳಿದರು.

**ಎರಡನೇ ಹಂತದಲ್ಲಿ, ಕಳಂಕಿತ ಅಭ್ಯರ್ಥಿಗಳೆಂದು ಕರೆಯಲ್ಪಡುವ ಪ್ರಕರಣಗಳನ್ನು ಕೈಗೆತ್ತಿಕೊಳ್ಳುತ್ತೇವೆ. ಅವರನ್ನು 'ಅನರ್ಹರು' ಎಂದು ಏಕೆ ಬ್ರಾಂಡ್ ಮಾಡಲಾಯಿತು, ಅವರನ್ನು ಕಳಂಕಿತರು ಎನ್ನಲು ಕಾರಣಗಳು ಮತ್ತು ಅವರು ತಪ್ಪಿತಸ್ಥರೆಂದು ಹೇಳಲು ಹೇಗೆ ತನಿಖೆ ನಡೆಸಲಾಯಿತು ಎಂಬುದನ್ನು ನಾವು ಆಳವಾಗಿ ಪರಿಶೀಲಿಸುತ್ತೇವೆ. ನಾನು ಅವರೊಂದಿಗೆ ಪ್ರತ್ಯೇಕ ಸಭೆ ನಡೆಸುತ್ತೇನೆ. ಸರ್ಕಾರ ಮಾಡುವ ಕೆಲಸದ ಮೇಲೆ ನಂಬಿಕೆ ಇಡಿ. ಅರ್ಹ ಮತ್ತು ಕಳಂಕಿತ ಅಭ್ಯರ್ಥಿಗಳ ನಡುವೆ ಯಾವುದೇ ಮುಖಾಮುಖಿ ಇರಬಾರದು**

**– ಮಮತಾ ಬ್ಯಾನರ್ಜಿ, ಸಿಎಂ**

ಅನ್ಯಾಯವಾಗಿ ಕೆಲಸ ಕಳೆದುಕೊಂಡವರ ಬೆಂಬಲಕ್ಕೆ ನಾನು ನಿಲ್ಲುತ್ತೇನೆ. ಇತರರು ಏನು ಯೋಚಿಸುತ್ತಾರೆ ಎಂಬುದು ನನಗೆ ಮುಖ್ಯವಲ್ಲ. ನಿಮ್ಮ ಘನತೆಯನ್ನು ಪುನಃಸ್ಥಾಪಿಸಲು ನಾನು ಎಲ್ಲವನ್ನೂ ಮಾಡುತ್ತೇನೆ. ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ತೀರ್ಪನ್ನು ಗೌರವಿಸುತ್ತದೆ. ಪರಿಸ್ಥಿತಿಯನ್ನು ಅತ್ಯಂತ ಕಾಳಜಿ ಮತ್ತು ನ್ಯಾಯಯುತವಾಗಿ ನಿಭಾಯಿಸಲು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ' ಎಂದು ಹೇಳಿದರು.

## ಕನಿಷ್ಠ ಸಹಿಯನ್ನಾದ್ರೂ ತಮಿಳಲ್ಲಿ ಮಾಡಿ, ಆಮೇಲೆ ಹಿಂದಿ ಹೇರಿಕೆ ಬಗ್ಗೆ ಮಾತಾಡಿ

**ರಾಮೇಶ್ವರಂ:** ಪಂಬನ್ ಸೇತುವೆ ಉದ್ಘಾಟನೆ ಮಾಡಲು ತಮಿಳುನಾಡಿಗೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಹಿಂದಿ ಹೇರಿಕೆ ವಿಷಯವಾಗಿ ಡಿಎಂಕೆ, ಸಿಎಂ ಎಂಕೆ ಸ್ಟಾಲಿನ್ ಗೆ ಭರ್ಜರಿ ಟಾಂಗ್ ನೀಡಿದ್ದಾರೆ. ಕೇಂದ್ರ ಸರ್ಕಾರದ ವಿರುದ್ಧ ಡಿಎಂಕೆ ಹಿಂದಿ ಹೇರಿಕೆ ಮಾಡುತ್ತಿದೆ ಎಂದು ಆರೋಪ ಮಾಡಿತ್ತು. ಈ ಆರೋಪಗಳಿಗೆ ತಿರುಗೇಟು ನೀಡಿರುವ ಪ್ರಧಾನಿ ನರೇಂದ್ರ ಮೋದಿ, ತಮಿಳುನಾಡಿನಿಂದ ಹಲವು ರಾಜಕಾರಣಿಗಳು ತಮಗೆ ಪತ್ರ ಬರೆಯುತ್ತಾರೆ. ಆ ಪತ್ರಗಳು ಸಂಪೂರ್ಣ ಇಂಗ್ಲೀಷ್‌ನಲ್ಲಿಯೇ ಇರುತ್ತದೆ. ಕನಿಷ್ಠ ಪಕ್ಷ ಪತ್ರದ ಕೆಳಗೆ ಸಹಿಯನ್ನಾದರೂ ತಮಿಳಿನಲ್ಲಿ ಮಾಡುವುದಿಲ್ಲ. ಸಹಿಯನ್ನಾದರೂ ಇನ್ನು ಮುಂದೆ ತಮಿಳಿನಲ್ಲಿ ಮಾಡಿ ಎಂದು ಸಲಹೆ ನೀಡಿದ್ದಾರೆ. ಇದೇ ವೇಳೆ 'ತಮಿಳು ಮಾಧ್ಯಮದಲ್ಲಿ ವೈದ್ಯಕೀಯ ಶಿಕ್ಷಣವನ್ನು ನೀಡಿ' ಎಂದು ಸ್ಟಾಲಿನ್ ಸರ್ಕಾರಕ್ಕೆ ಮೋದಿ ಸವಾಲು ಹಾಕಿದ್ದಾರೆ. ರಾಮನವಮಿಯ ಸಂದರ್ಭದಲ್ಲಿ ತಮಿಳುನಾಡಿನ ಒಟ್ಟು 8,300 ಕೋಟಿ ರು.ಗಳಿಗೂ ಹೆಚ್ಚು ಮೌಲ್ಯದ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಪಾಂಬನ್ ಸೇತುವೆಯನ್ನು ರಾಷ್ಟ್ರಕ್ಕೆ ಲೋಕಾರ್ಪಣೆ ಮಾಡಿದ ನಂತರ ಮೋದಿ ಈ ಹೇಳಿಕೆ ನೀಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಮೋದಿ ತಮಿಳು ಭಾಷೆ ಬಗ್ಗೆ ಬಲವಾಗಿ ಪ್ರತಿಪಾದನೆ ಮಾಡಿದ್ದಾರೆ. ತಮಿಳು ಭಾಷೆ, ಪರಂಪರೆಯನ್ನು ಜಗತ್ತಿನ ಮೂಲೆ ಮೂಲೆಗಳಿಗೆ ಕೊಂಡೊಯ್ಯುವ ಪ್ರಯತ್ನಗಳು ನಡೆಯುತ್ತಿವೆ' ಎಂದು ಮೋದಿ ತಿಳಿಸಿದ್ದಾರೆ. ಇದೇ ವೇಳೆ ಡಿಎಂಕೆ ಜನಪ್ರತಿನಿಧಿಗಳನ್ನು ಅವರ ಹೆಸರೆತ್ತದೇ ತರಾಟೆಗೆ ತೆಗೆದುಕೊಂಡ ಮೋದಿ, ನನಗೆ ತಮಿಳುನಾಡಿನ ನಾಯಕರ ಪತ್ರಗಳು ಬರುತ್ತವೆ. ಆದರೆ ಅವುಗಳಲ್ಲಿನ ಸಹಿ ತಮಿಳಿನಲ್ಲಿ ಇರುವುದಿಲ್ಲ. ಕನಿಷ್ಠ ಪಕ್ಷ ನಿಮ್ಮ ಸಹಿಯನ್ನಾದರೂ ತಮಿಳಿನಲ್ಲಿ ಮಾಡಿ' ಎಂದು ಟೀಕಾ ಪ್ರಹಾರ ಮಾಡಿದ್ದಾರೆ. ಸಾಮಾನ್ಯವಾಗಿ ಹಿಂದಿಯಲ್ಲಿ ಭಾಷಣ ಮಾಡುವ ಪ್ರಧಾನಿ ನರೇಂದ್ರ ಮೋದಿ ಅವರು, ಹಿಂದಿ ಹೇರಿಕೆ ವಿವಾದದ ನಡುವೆ ರಾಮೇಶ್ವರದಲ್ಲಿ ಭಾನುವಾರ ಹಿಂದಿ ಜತೆಗೆ ಇಂಗ್ಲಿಷ್‌ನಲ್ಲೂ ಭಾಷಣ ಮಾಡಿ ಗಮನ ಸೆಳೆದರು. ಅವರ ಭಾಷಣವನ್ನು ತಮಿಳಿಗೆ ತರ್ಜುಮೆಯನ್ನೂ ಮಾಡಲಾಯಿತು. ಇತ್ತೀಚೆಗೆ ತಮಿಳುನಾಡಿನ ಡಿಎಂಕೆ ಸರ್ಕಾರ. 'ಕೇಂದ್ರ ಸರ್ಕಾರ ಶಿಕ್ಷಣ ಹಾಗೂ ಆಡಳಿತದಲ್ಲಿ ಹಿಂದಿ ಹೇರಿಕೆ ಮಾಡುತ್ತಿದೆ' ಎಂದು ರಾಜ್ಯದಲ್ಲಿ ತೀವ್ರ ಪ್ರತಿಭಟನೆಗಳು ನಡೆಯುತ್ತಿವೆ.





## ಮಿನಿ ನ್ಯೂಸ್

### ಪೋರ್ಚುಗಲ್‌ಗೆ ಸ್ಲೋವಾಕ್ ಗಣರಾಜ್ಯ ಪ್ರವಾಸದಲ್ಲಿ ರಾಷ್ಟ್ರಪತಿ

**ಲಿಸ್ಬನ್:** ಪೋರ್ಚುಗಲ್ ಮತ್ತು ಸ್ಲೋವಾಕ್ ಗಣರಾಜ್ಯಕ್ಕೆ ನಾಲ್ಕು ದಿನಗಳ ಅಧಿಕೃತ ಭೇಟಿಯ ಮೊದಲ ಹಂತಕ್ಕಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಲಿಸ್ಬನ್‌ಗೆ ಆಗಮಿಸಿದರು. ಫಿಗೋ ಮದುರೊ ಮಿಲಿಟರಿ ವಾಯುನೆಲೆಯಲ್ಲಿ ಅಧ್ಯಕ್ಷರನ್ನು ಪೋರ್ಚುಗಲ್ ನಲ್ಲಿರುವ ಭಾರತದ ರಾಯಭಾರಿ ಪುನೀತ್ ಆರ್ ಕುಂಡಾಲ್ ಮತ್ತು ಭಾರತದಲ್ಲಿನ ಪೋರ್ಚುಗಲ್ ರಾಯಭಾರಿ ಜೊವಾವೊ ರಿಬೈರೊ ಡಿ ಲಿಡಿಯಾ ಸ್ವಾಗತಿಸಿದರು. ಗಮನಾರ್ಹ ಜಾಗತಿಕ ಆರ್ಥಿಕ ಬದಲಾವಣೆಯ ಸಮಯದಲ್ಲಿ ಅವರ ಈ ಭೇಟಿ ಬಂದಿದೆ. ಇತ್ತೀಚೆಗೆ ಯುನೈಟೆಡ್ ಸ್ಟೇಟ್ಸ್ ವಿಧಿಸಿದ ವ್ಯಾಪಾರ ಸುಂಕಗಳು ಅಂತರರಾಷ್ಟ್ರೀಯ ವಾಣಿಜ್ಯವನ್ನು ಮರುರೂಪಿಸುತ್ತವೆ, ಯುರೋಪಿನೊಂದಿಗೆ ಭಾರತದ ಹೆಚ್ಚುತ್ತಿರುವ ತೊಡಗಿಸಿಕೊಳ್ಳುವಿಕೆಯನ್ನು ಪ್ರೋತ್ಸಾಹಿಸಲಿದೆ.

ಫೆಬ್ರವರಿಯಲ್ಲಿ, ಯುರೋಪಿಯನ್ ಆಯೋಗದ ಅಧ್ಯಕ್ಷ ಉರ್ಸುಲಾ ವಾನ್ ಡೆರ್ ಲೇಯೆನ್, ಕಾಲೇಜ್ ಆಫ್ ಕಮಿಷನರ್ಸ್ ಭಾರತಕ್ಕೆ ಭೇಟಿ ನೀಡಿದ್ದರು.

ಈ ವರ್ಷ ಭಾರತ-ಇಯು ಮುಕ್ತ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸುವ ಭರವಸೆಯಿದೆ ಎಂದು ಭಾರತ ಹೇಳಿದೆ. ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧಗಳ 50 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪೋರ್ಚುಗಲ್‌ಗೆ ಎರಡು ದಿನಗಳ ಹೆಗ್ಗುರುತು ಭೇಟಿಯು ಭಾರತೀಯ ಅಧ್ಯಕ್ಷರು ಕೊನೆಯ ಬಾರಿಗೆ ಭೇಟಿ ನೀಡಿದ ನಂತರ 27 ವರ್ಷಗಳ ನಂತರ ಬಂದಿದೆ.

### ರಾಮನವಮಿ ಸಂಭ್ರಮ

**ಅಬುಧಾಬಿ:** ಇಲ್ಲಿನ ವಿಶ್ವಪ್ರಸಿದ್ಧ ಬಿಎಪಿಎಸ್ ಹಿಂದೂ ದೇವಾಲಯದಲ್ಲಿ ರಾಮನವಮಿಯನ್ನು ಭವ್ಯವಾಗಿ ಆಚರಿಸಲಾಗಿದೆ. ರಾಮನವಮಿಯ ಭಕ್ತಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಈ ಪ್ರದೇಶದಾದ್ಯಂತದ ಭಕ್ತರು ದೇವಾಲಯದಲ್ಲಿ ಜಮಾಯಿಸಿದ್ದರು. ಅಬುಧಾಬಿಯಲ್ಲಿ ರಾಮ ನವಮಿಯನ್ನು ಸಂಭ್ರಮದಿಂದ ಆಚರಿಸಿದ ಹಿಂದೂ ದೇವಾಲಯದಲ್ಲಿ ರಾಮ ಭಜನೆಗಳೊಂದಿಗೆ ಪ್ರಾರಂಭಿಸಿ ಇಡೀ ದಿನದ ಆಚರಣೆಗಳನ್ನು ಆಯೋಜಿಸಲಾಯಿತು. ಇದು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ನಲ್ಲಿ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಸಾಮರಸ್ಯದ ಹೆಗ್ಗುರುತನ್ನು ಸೂಚಿಸುತ್ತದೆ. ಭಕ್ತಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಸರಣಿಯಲ್ಲಿ ಭಾಗವಹಿಸಲು ಈ ಪ್ರದೇಶದಾದ್ಯಂತದ ಭಕ್ತರು ದೇವಾಲಯದಲ್ಲಿ ಜಮಾಯಿಸಿದರು ಎಂದು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ. ದೇವಾಲಯದ ಪ್ರಧಾನ ಅರ್ಚಕ ಪೂಜ್ಯ ಬ್ರಹ್ಮವಿಹಾರಿ ಸ್ವಾಮಿ ಅವರ ಪ್ರಕಾರ, ಬೆಳಿಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ ರಾಮ ಭಜನೆಯೊಂದಿಗೆ ಪ್ರಾರಂಭಿಸಿ, ಮಧ್ಯಾಹ್ನ 12 ಗಂಟೆಗೆ ಶ್ರೀ ರಾಮ್ ಜನ್ಮೋತ್ಸವ ಆರತಿಯೊಂದಿಗೆ ಪೂರ್ಣ ದಿನದ ಆಚರಣೆಗಳನ್ನು ಆಯೋಜಿಸಲಾಗಿತ್ತು.

ಇದಕ್ಕೆ ಸಾವಿರಾರು ಮಂದಿ ಸಾಕ್ಷಿಯಾಗಿದ್ದರು ಎಂದಿದ್ದಾರೆ.

### ವಕ್ಫ್ ತಿದ್ದುಪಡಿ ಕಾಯ್ದೆ ಬೆಂಬಲಿಸಿದ ಮುಸ್ಲಿಂ ಮುಖಂಡನ ಮನೆಗೆ ಬೆಂಕಿ


**ಇಂಫಾಲ್:** ವಕ್ಫ್ ತಿದ್ದುಪಡಿ ಕಾಯ್ದೆಯನ್ನು ಬೆಂಬಲಿಸಿದ್ದಕ್ಕಾಗಿ ಉದ್ರಿಕ್ತ ಗುಂಪೊಂದು ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದ ಮಣಿಪುರ ಅಧ್ಯಕ್ಷ ಮುಹಮ್ಮದ್ ಅಸ್ಕರ್ ಅಲಿ ಅವರ ಮನೆಗೆ ಬೆಂಕಿ ಹಚ್ಚಿದ ಒಂದು ದಿನದ ನಂತರ, ತೌಬಲ್ ಜಿಲ್ಲಾಡಳಿತವು ಇಡೀ ಲಿಲಾಂಗ್ ವಿಧಾನಸಭಾ ಕ್ಷೇತ್ರದಲ್ಲಿ ಬಿಎನ್‌ಎಸ್‌ಎಸ್ ಸೆಕ್ಷನ್ 163 ರ ಅಡಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಿದೆ. ಜಿಲ್ಲಾ ಮ್ಯಾಜಿಸ್ಟ್ರೇಟ್ ಹೊರಡಿಸಿದ ಆದೇಶದಲ್ಲಿ, ಐದು ಅಥವಾ ಅದಕ್ಕಿಂತ ಹೆಚ್ಚು ಜನರು ಸೇರುವುದನ್ನು ಮತ್ತು ಸಾರ್ವಜನಿಕರು ಬಂದೂಕುಗಳು, ಕತ್ತಿಗಳು, ಕೋಲುಗಳು, ಕಲ್ಲುಗಳು ಅಥವಾ ಇತರ ಮಾರಕ ಆಯುಧಗಳನ್ನು ಒಯ್ಯುವುದನ್ನು ನಿಷೇಧಿಸಲಾಗಿದೆ. ಸುಮಾರು 7,000-8,000 ಬಲವಾದ ಗುಂಪು ಲಾಠಿ ಮತ್ತು ಕಲ್ಲುಗಳೊಂದಿಗೆ ಲಿಲಾಂಗ್ ಸಂಬ್ರುಖೋಂಗ್ ಮಾಮಿ ಪ್ರದೇಶದಲ್ಲಿರುವ ಮೊಹಮ್ಮದ್ ಅಸ್ಕರ್ ಅಲಿ ಅವರ ನಿವಾಸಕ್ಕೆ ನುಗ್ಗಿ ಬೆಂಕಿ ಹಚ್ಚಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ವರದಿ ಮಾಡಿದ್ದಾರೆ ಎಂದು ಅದು ಹೇಳಿದೆ. ವಕ್ಫ್ ತಿದ್ದುಪಡಿ ಕಾಯ್ದೆ, 2025 ಕ್ಕೆ ಅಲಿ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಬೆಂಬಲ ವ್ಯಕ್ತಪಡಿಸಿದ್ದರು. ಭಾನುವಾರ ರಾತ್ರಿ ನಡೆದ ಘಟನೆಯ ನಂತರ, ಅವರು ತಮ್ಮ ಹಿಂದಿನ ಹೇಳಿಕೆಗೆ ಕ್ಷಮೆಯಾಚಿಸಿದರು, ಕೃತ್ಯವನ್ನು ಖಂಡಿಸಿದರು. ಲಿಲೋನ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈ ವಿಷಯವು ತುಂಬಾ ಸೂಕ್ಷ್ಮವಾಗಿದೆ ಎಂದು ವರದಿಯಾಗಿದೆ.

### ವಕ್ಫ್ ತಿದ್ದುಪಡಿ ಕಾಯ್ದೆಯಿಂದ ಲ್ಯಾಂಡ್ ಜಿಹಾದ್ ಅಂತ್ಯವಾಗಲಿದೆ

**ಹೈದರಾಬಾದ್:** ವಕ್ಫ್ ತಿದ್ದುಪಡಿ ಕಾಯ್ದೆಯು ದೇಶದಲ್ಲಿ ಲ್ಯಾಂಡ್ ಜಿಹಾದ್‌ಅನ್ನು ಕೊನೆಗೊಳಿಸುತ್ತದೆ ಎಂದು ತೆಲಂಗಾಣದ ಬಿಜೆಪಿ ಶಾಸಕ ಟಿ ರಾಜಾ ಸಿಂಗ್ ಪ್ರತಿಪಾದಿಸಿದ್ದಾರೆ. ರಾಮನವಮಿ ಮೆರವಣಿಗೆಯನ್ನುದ್ದೇಶಿಸಿ ಮಾತನಾಡಿದ ಅವರು, ಭಾರತದಲ್ಲಿ ಕೇಸರಿ ಸರ್ಕಾರ ರಚನೆಯಾದಾಗಿನಿಂದ ಭೂ ಜಿಹಾದಿಗಳು ಕಠಿಣ ಸಮಯವನ್ನು ಎದುರಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ವಕ್ಫ್ ನೋಟಿಸ್ ನೀಡುವ ಮೂಲಕ ಲ್ಯಾಂಡ್‌ಜಿಹಾದ್ ಹೆಸರಿನಲ್ಲಿ ಬೋರ್ಡ್ ಹಾಕುತ್ತಿದ್ದವರು, ಅದು ತಮ್ಮ ತಂದೆಯ ಆಸ್ತಿಯಂತೆ, ಪ್ರಧಾನಿ ನರೇಂದ್ರ ಮೋದಿ ಅವರು ವಕ್ಫ್ ಮಸೂದೆಯನ್ನು ಅಂಗೀಕರಿಸಿರುವುದರಿಂದ ಇನ್ನು ಮುಂದೆ ಅಂತಹ ಬೋರ್ಡ್‌ಗಳನ್ನು ಸ್ಥಾಪಿಸಲು ಸಾಧ್ಯವಾಗುವುದಿಲ್ಲ ಎಂದು ಸಿಂಗ್ ಹೇಳಿದರು. ಉಭಯ ಸದನಗಳಲ್ಲಿ ಬಿಸಿ ಚರ್ಚೆಗಳ ನಂತರ ಕಳೆದ ವಾರ ಸಂಸತ್ತು ಅಂಗೀಕರಿಸಿದ ವಕ್ಫ್ ಮಸೂದೆ, 2025 ಕ್ಕೆ ಅಧ್ಯಕ್ಷ ದ್ರೌಪದಿ ಮುರ್ಮು ಅಂಕಿತ ಹಾಕಿದ್ದಾರೆ. ಭಾರತ ಸ್ವತಂತ್ರವಾದಾಗ ವಕ್ಫ್ ಮಂಡಳಿಗೆ 4,000 ಎಕರೆ ಭೂಮಿ ಇತ್ತು. ಅವರಿಗೆ 9.5 ಲಕ್ಷ ಎಕರೆ ಹೇಗೆ ಸಿಕ್ಕಿತು ತಿದ್ದುಪಡಿಯನ್ನು ಮುಸ್ಲಿಮರು ಅರ್ಥಮಾಡಿಕೊಳ್ಳಬೇಕು ಎಂದು ಬಿಜೆಪಿ ಶಾಸಕ ಹೇಳಿದರು.

### ಕೇಂದ್ರ ಸರ್ಕಾರ ದೇಶದ ಜನರ ಆರೋಗ್ಯ ರಕ್ಷಣೆಗೆ ಹೆಚ್ಚು ಒತ್ತು

**ನವದೆಹಲಿ:** ಕೇಂದ್ರ ಸರ್ಕಾರ ದೇಶದ ಜನರ ಆರೋಗ್ಯ ರಕ್ಷಣೆಗೆ ಹೆಚ್ಚು ಒತ್ತು ನೀಡಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ವಿಶ್ವ ಆರೋಗ್ಯ ದಿನದಂದು ತಮ್ಮ ಸಂದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಸರ್ಕಾರವು ಆರೋಗ್ಯ ರಕ್ಷಣೆಯ ಮೇಲೆ ಗಮನ ಹರಿಸುತ್ತದೆ ಮತ್ತು ಜನರ ಯೋಗಕ್ಷೇಮದ ವಿವಿಧ ಅಂಶಗಳಲ್ಲಿ ಹೂಡಿಕೆ ಮಾಡುತ್ತದೆ ಎಂದು ಪ್ರತಿಪಾದಿಸಿದ್ದಾರೆ. ವಿಶ್ವ ಆರೋಗ್ಯ ದಿನದಂದು, ಆರೋಗ್ಯಕರ ಜಗತ್ತನ್ನು ನಿರ್ಮಿಸುವ ನಮ್ಮ ಬದ್ಧತೆಯನ್ನು ಪುನರುಚ್ಚರಿಸೋಣ ಎಂದು ಅವರು ಹೇಳಿದರು.



ಐಪಿಎಲ್‌ನ 19ನೇ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡ ಜಯ ಸಾಧಿಸಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ ತಂಡವು 152 ರನ್ ಕಲೆಹಾಕಿದರೆ, ಈ ಗುರಿಯನ್ನು ಗುಜರಾತ್ ಟೈಟಾನ್ಸ್ ತಂಡ 16.4 ಓವರ್‌ಗಳಲ್ಲಿ ಬೆನ್ನತ್ತಿ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನ ರೂವಾರಿ ಮೊಹಮ್ಮದ್ ಸಿರಾಜ್. ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಪಂದ್ಯದಲ್ಲಿ ನಿಯಮ ಉಲ್ಲಂಘಿಸಿದಕ್ಕಾಗಿ ಗುಜರಾತ್ ಟೈಟಾನ್ಸ್ ತಂಡದ ವೇಗಿ ಇಶಾಂತ್ ಶರ್ಮಾಗೆ ದಂಡ ವಿಧಿಸಲಾಗಿದೆ. ಹೈದರಾಬಾದ್‌ನ ರಾಜೀವ್ ದಾಂಧಿ ಇಂಟರ್‌ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ಹಾಗೂ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿಯಾಗಿತ್ತು. ಈ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ಪರ ಕಣಕ್ಕಿಳಿದಿದ್ದ ಇಶಾಂತ್ ಶರ್ಮಾ ಐಪಿಎಲ್ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ತಪ್ಪಿತಸ್ಥನೆಂದು ಕಂಡುಬಂದಿದ್ದು, ಹೀಗಾಗಿ ಅವರಿಗೆ ಪಂದ್ಯ ಶುಲ್ಕವನ್ನು ಶೇಕಡಾ 25 ರಷ್ಟು ದಂಡ ವಿಧಿಸಲಾಗಿದೆ. ಅಲ್ಲದೆ ಒಂದು ಡಿಮೆರಿಟ್ ಪಾಯಿಂಟ್ ನೀಡಲಾಗಿದೆ.

ಐಪಿಎಲ್ ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯಲ್ಲಿ ಇಶಾಂತ್ ಶರ್ಮಾ ಮಾಡಿದ ತಪ್ಪಿನ ಬಗ್ಗೆ ಉಲ್ಲೇಖಿಸಲಾಗಿಲ್ಲ. ಮ್ಯಾಚ್ ರೆಫರಿ ಜೊತೆ ಇಶಾಂತ್ ತನ್ನ ಅಪರಾಧವನ್ನು ಒಪ್ಪಿಕೊಂಡಿದ್ದಾರೆ. ಐಪಿಎಲ್ ನಿಯಮದ ಪ್ರಕಾರ, ಲೆವೆಲ್ 1 ರಲ್ಲಿ ತಪ್ಪಿತಸ್ಥರೆಂದು ಕಂಡುಬಂದಿರುವ ಕಾರಣ ಅವರಿಗೆ ಪಂದ್ಯ ಶುಲ್ಕದ ಶೇ.25 ರಷ್ಟು ದಂಡ ವಿಧಿಸಲಾಗಿದೆ.

**ಗೆದ್ದು ಬೀಗಿದ ಗುಜರಾತ್ ಪಡೆ**

ಈ ಪಂದ್ಯದಲ್ಲಿ ಟಾಸ್ ಗೆದ್ದ ಗುಜರಾತ್ ಟೈಟಾನ್ಸ್ ತಂಡದ ನಾಯಕ ಶುಭ್‌ಮನ್ ಗಿಲ್ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ ತಂಡವು 20 ಓವರ್ ಗಳಲ್ಲಿ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 152 ರನ್ ಕಲೆಹಾಕಿತು. 153 ರನ್‌ಗಳ ಗುರಿ ಬೆನ್ನತ್ತಿದ ಗುಜರಾತ್ ಟೈಟಾನ್ಸ್ ಪರ ಶುಭ್ ಮನ್ ಗಿಲ್ ಅಜೇಯ 61 ರನ್ ಬಾರಿಸಿದರು. ಈ ಮೂಲಕ ಗುಜರಾತ್ ಟೈಟಾನ್ಸ್ ತಂಡ 16.4 ಓವರ್‌ಗಳಲ್ಲಿ 153 ರನ್ ಬಾರಿಸಿ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

## ಐಪಿಎಲ್ ನಿಯಮ ಉಲ್ಲಂಘಿಸಿದ ಇಶಾಂತ್‌ಗೆ ದಂಡ



**ಇಶಾಂತ್ ಶರ್ಮಾ ಕಳಪೆ ಪ್ರದರ್ಶನ:** ಗುಜರಾತ್ ಟೈಟಾನ್ಸ್ ಇಶಾಂತ್ ಶರ್ಮಾ ಅವರ 7ನೇ ತಂಡವಾಗಿದೆ. ಟೈಟಾನ್ಸ್ ಪರ ಇಲ್ಲಿಯವರೆಗೆ 3 ಪಂದ್ಯಗಳನ್ನು ಆಡಿರುವ ಅವರು ಕೇವಲ 1 ವಿಕೆಟ್ ಮಾತ್ರ ಪಡೆದಿದ್ದಾರೆ. ಹೀಗಾಗಿಯೇ ಮುಂದಿನ ಪಂದ್ಯಗಳಿಂದ ಹಿರಿಯ ವೇಗಿಯನ್ನು ಗುಜರಾತ್ ಟೈಟಾನ್ಸ್ ತಂಡವು ಕೈ ಬಿಡುವ ಸಾಧ್ಯತೆಯಿದೆ.

## ಕೊನೆ ಬಾಲ್‌ವರೆಗೆ ರಣರೋಚಕ ಐಪಿಎಲ್ ಮ್ಯಾಚ್..

# ಮುಂಬೈ ವಿರುದ್ಧ ಆರ್‌ಸಿಬಿ ಜಯಭೇರಿ

ಕ್ಯಾಪ್ಟನ್ ರಜತ್ ಪಾಟಿದಾರ್, ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರ ಸಿಡಿಲಬ್ಬರದ ಬ್ಯಾಟಿಂಗ್‌ನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಟೀಮ್ ಭರ್ಜರಿ ಗೆಲವು ಸಾಧಿಸಿದೆ. ಈ ಮೂಲಕ ವಾಂಖೆಡೆ ಸ್ಟೇಡಿಯಂನಲ್ಲಿ 10 ವರ್ಷಗಳ ಬಳಿಕ ಅಮೋಘವಾದ ಜಯ ಪಡೆದಿದೆ.

ವಾಂಖೆಡೆ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಮುಂಬೈ ಕ್ಯಾಪ್ಟನ್ ಪಾಂಡ್ಯ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಹೀಗಾಗಿ ಆರ್‌ಸಿಬಿ ಪರ ಓಪನರ್ ಗಳಾದ ಫಿಲಿಪ್ ಸಾಲ್ಟ್ ಹಾಗೂ ವಿರಾಟ್ ಕೊಹ್ಲಿ ಕ್ರೀಸ್‌ಗೆ ಆಗಮಿಸಿದರು. ಆದರೆ ಈ ಇಬ್ಬರೂ ಉತ್ತಮ ಆರಂಭ ಪಡೆಯುವ ಮೊದಲೇ ಮುಂಬೈ ಪರ ಬೌಲರ್ ಟ್ರೆಂಟ್ ಬೋಲ್ಟ್, ಫಿಲಿಪ್ ಸಾಲ್ಟ್ ಅವರನ್ನು 4 ರನ್‌ಗೆ ಕ್ಲೀನ್ ಬೋಲ್ಡ್ ಮಾಡಿದರು.

ವಿರಾಟ್ ಕೊಹ್ಲಿ ಅದ್ಭುತವಾದ ಬ್ಯಾಟಿಂಗ್ ಪ್ರದರ್ಶನ ಮಾಡಿ ಹಾಫ್‌ಸೆಂಚುರಿ ಸಿಡಿಸಿದರು. ಕೇವಲ 29 ಎಸೆತ ಎದುರಿಸಿದ ವಿರಾಟ್ 6 ಬೌಂಡರಿ, 2 ಸಿಕ್ಸರ್‌ನಿಂದ ಅರ್ಧಶತಕ ಪೂರೈಸಿದರು. ಈ ಮ್ಯಾಚ್‌ನಲ್ಲಿ ವಿರಾಟ್ ಒಟ್ಟು 42 ಎಸೆತಗಳಲ್ಲಿ 8 ಬೌಂಡರಿ ಹಾಗೂ 2 ಸಿಕ್ಸರ್‌ನಿಂದ 67 ರನ್ ಸಿಡಿಸಿ ಆಡುವಾಗ ಔಟ್ ಆದರು. ಕನ್ನಡಿಗ ದೇವದತ್ ಪಡಿಕ್ಕಲ್ ಕೇವಲ 22 ಎಸೆತಗಳಲ್ಲಿ 37 ರನ್ ಬಾರಿಸಿದರು. ಸಿಡಿಲಬ್ಬರದ ಬ್ಯಾಟಿಂಗ್ ಮಾಡಿದ ಕ್ಯಾಪ್ಟನ್ ರಜತ್ ಪಾಟಿದಾರ್, 32 ಬಾಲ್‌ಗಳನ್ನು ಆಡಿದ ರಜತ್ 5 ಬೌಂಡರಿ, 4 ಸಿಕ್ಸರ್‌ನಿಂದ 64 ರನ್ ಸಿಡಿಸಿದರು. ವಿಕೆಟ್ ಕೀಪರ್ ಜಿತೇಶ್ ಶರ್ಮಾ 40 ರನ್ ಚಚ್ಚಿದರು. ಹೀಗಾಗಿ ಆರ್‌ಸಿಬಿ 20 ಓವರ್‌ನಲ್ಲಿ 5 ವಿಕೆಟ್‌ಗೆ 222 ರನ್‌ಗಳ ಗುರಿ ನೀಡಿತ್ತು.

- ಮುಂಬೈ ಕ್ಯಾಪ್ಟನ್ ಹಾರ್ದಿಕ್ ಪಾಂಡ್ಯ ಭಾರೀ ಬ್ಯಾಟಿಂಗ್ ಬಲ
- ಆರ್‌ಸಿಬಿ ನಾಯಕ ರಜತ್ ಪಾಟಿದಾರ್ ಬ್ಯಾಟಿಂಗ್‌ಗೆ ಫ್ಯಾನ್ಸ್ ಫಿದಾ
- ಸಿಕ್ಸರ್ ಸಿಡಿಸಿ ಅರ್ಧಶತಕ ಬಾರಿಸಿದ ಆರ್‌ಸಿಬಿ ಸ್ಟಾರ್ ವಿರಾಟ್



**10 ವರ್ಷಗಳ ಬಳಿಕ ಗೆದ್ದು ಇತಿಹಾಸ**

**ಮುಂಬೈ ಪರವಾಗಿ ಓಪನರ್ ಆಗಿ ಬ್ಯಾಟಿಂಗ್‌ಗೆ ಬಂದ ರೋಹಿತ್ ಶರ್ಮಾ ಹಾಗೂ ರಯಾನ್ ರಿಕೆಲ್ಟನ್ ತಲಾ 17 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ವಿಲ್ ಜಾಕ್ಸ್ ಕೂಡ ಮತ್ತೆ ವಿಫಲ ಬ್ಯಾಟಿಂಗ್ ಮಾಡಿ ಕೇವಲ 22 ರನ್‌ಗೆ ಕೊಹ್ಲಿಗೆ ಕ್ಯಾಚ್ ಕೊಟ್ಟರು. ಸೂರ್ಯಕುಮಾರ್ 28 ರನ್‌ನಿಂದ ಉತ್ತಮವಾಗಿ ಬ್ಯಾಟಿಂಗ್ ಮಾಡುವಾಗ ಯಶ್ ದಯಾಳ್ ಬೌಲಿಂಗ್‌ನಲ್ಲಿ ಲಿವಿಂಗ್‌ಸ್ಟನ್‌ಗೆ ಕ್ಯಾಚ್ ಕೊಟ್ಟು ಪೆವಿಲಿಯನ್ ಸೇರಿದರು. ತಿಲಕ್ ವರ್ಮಾ ಅದ್ಭುತವಾದ ಬ್ಯಾಟಿಂಗ್ ಪ್ರದರ್ಶನ ಮಾಡಿ ಅರ್ಧಶತಕ ಸಿಡಿಸಿ ತಂಡಕ್ಕೆ ಕಾಣಿಕೆ ನೀಡಿದರು. ತಿಲಕ್ ವರ್ಮಾ 27 ಎಸೆತದಲ್ಲಿ 5 ಬೌಂಡರಿ, 3 ಸಿಕ್ಸರ್‌ನಿಂದ ಅರ್ಧಶತಕ ಗಳಿಸಿ ಆಡುವಾಗ 56 ರನ್‌ಗೆ ತಿಲಕ್ ವಿಕೆಟ್ ಒಪ್ಪಿಸಿದರು. ಇವರಾದ ಮೇಲೆ ಹೊಡಿಬಡಿ ಬ್ಯಾಟಿಂಗ್ ಮಾಡುತ್ತಿದ್ದ ನಾಯಕ ಹಾರ್ದಿಕ್ ಪಾಂಡ್ಯ ಕೇವಲ 15 ಬಾಲ್‌ಗೆ 4 ಸಿಕ್ಸರ್‌ನಿಂದ 42 ರನ್ ಬಾರಿಸಿ ಬೌಂಡ್ರಿ ಲೈನ್ ಬಳಿ ಕ್ಯಾಚ್ ಕೊಟ್ಟು ಔಟ್ ಆದರು. ತಿಲಕ್ ಹಾಗೂ ಹಾರ್ದಿಕ್ ಔಟ್ ಆಗಿದ್ದು ಮುಂಬೈ ತಂಡಕ್ಕೆ ಭಾರೀ ಹಿನ್ನಡೆಗೆ ಕಾರಣವಾಯಿತು. ಮಿಚೆಲ್ ಸ್ಯಾಂಟ್ನರ್ ಸಿಕ್ಸ್ ಬೌಂಡರಿ ಬಳಿ ಔಟ್ ಆದ್ರೆ ದೀಪಕ್ ಚಹಾರ್ ಕೂಡ ಸಿಕ್ಸ್ ಬೌಂಡರಿ ಬಳಿ ವಿಚಿತ್ರ ಕ್ಯಾಚ್‌ಗೆ ಔಟ್ ಆದರು. ಕೊನೆ ಓವರ್‌ನ 3 ಬಾಲ್‌ಗಳಲ್ಲಿ 18 ರನ್‌ಗಳು ಬೇಕಿದ್ದವು. ಈ ವೇಳೆ ಸ್ಟ್ರೈಕ್‌ನಲ್ಲಿದ್ದ ನಮನ್ ಧೀರ್ ಬೌಂಡರಿ ಬಾರಿಸಿ ಮುಂದಿನ ಎಸೆತದಲ್ಲಿ ಔಟ್ ಆದರು. ಕೊನೆ ಬಾಲ್‌ಗೆ 13 ರನ್ ಬೇಕಿದ್ದವು. ಇದು ಸಾಧ್ಯವಾಗದ ಕಾರಣ ಬೆಂಗಳೂರು ವಿರುದ್ಧ ಮುಂಬೈ ಇಂಡಿಯನ್ಸ್ ಸೋಲು ಒಪ್ಪಿಕೊಂಡು ಸಪ್ಪೆ ಮುಖದಲ್ಲಿ ಎಲ್ಲರಿಗೂ ಶೇಕ್ ಹ್ಯಾಂಡ್ ಮಾಡಿತು. ಇನ್ನು ಆರ್‌ಸಿಬಿ 10 ವರ್ಷಗಳ ಬಳಿಕ ವಾಂಖೆಡೆಯಲ್ಲಿ ರೋಚಕವಾಗಿ ಗೆದ್ದು ಇತಿಹಾಸ ಬರೆಯಿತು**

## ನಾನು ನಿವೃತ್ತಿ ನೀಡುತ್ತಿಲ್ಲ

ಮಹೇಂದ್ರ ಸಿಂಗ್ ಧೋನಿ ನಿವೃತ್ತಿ ವಿಚಾರ ಮತ್ತೆ ಮುನ್ನಲೆಗೆ ಬಂದಿದೆ. ಅದು ಸಹ ಐಪಿಎಲ್ ಸೀಸನ್-18 ಚಾಲ್ತಿಯಲ್ಲಿರುವಾಗ. ಹೀಗೆ ದಿಢೀರನೆ ನಿವೃತ್ತಿ ವಿಷಯ ಚರ್ಚೆಗೆ ಗ್ರಾಸವಾಗಲು ಮುಖ್ಯ ಕಾರಣ, ಚೆನ್ನೈನಲ್ಲಿ ನಡೆದ ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ನಡುವಣ ಪಂದ್ಯದ ವೇಳೆ ಮಹೇಂದ್ರ ಸಿಂಗ್ ಧೋನಿ ಅವರ ಪೋಷಕರು ಕಾಣಿಸಿಕೊಂಡಿರುವುದು. ಎಂಎ ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದ ವೇಳೆ ಧೋನಿಯ ಪೋಷಕರು ಸ್ಟೇಡಿಯಂನಲ್ಲಿ ಹಾಜರಿದ್ದರು. ಇದರ ಬೆನ್ನಲ್ಲೇ ಧೋನಿ ತನ್ನ ಐಪಿಎಲ್ ವೃತ್ತಿಜೀವನವನ್ನು ಕೊನೆಗೊಳಿಸುತ್ತಿದ್ದಾರೆ ಎಂಬ ವದಂತಿಗಳು ಹರಡಿದ್ದವು. ಆದರೀಗ ಈ ಎಲ್ಲಾ ಸುದ್ದಿಗಳಿಗೆ ಖುದ್ದು ಧೋನಿಯೇ ತೆರೆ ಎಳೆದಿದ್ದಾರೆ.



ಪಾಡ್‌ಕಾಸ್ಟ್‌ವೊಂದರಲ್ಲಿ ಮಾತನಾಡಿದ ಮಹೇಂದ್ರ ಸಿಂಗ್ ಧೋನಿ, ಸದ್ಯಕ್ಕಂತ ನಿವೃತ್ತಿ ನೀಡುವ ಯೋಚನೆಯಲ್ಲಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ನಾನು ಇನ್ನೂ ಸಹ ಐಪಿಎಲ್ ಆಡುತ್ತಿದ್ದೇನೆ. ಹೀಗಾಗಿ ನಿವೃತ್ತಿ ವಿಚಾರವನ್ನು ತುಂಬಾ ಸರಳವಾಗಿ ಇಟ್ಟುಕೊಂಡಿದ್ದೇನೆ.

**ನನ್ನ ಮುಂದೆ 10 ತಿಂಗಳಿದೆ**

ಈಗ ನನಗೆ 43 ವರ್ಷ. ಐಪಿಎಲ್ 2025 ಮುಗಿಯುವ ಹೊತ್ತಿಗೆ ನನಗೆ 44 ವರ್ಷ ವಯಸ್ಸಾಗಿರುತ್ತದೆ. ಆನಂತರ, ನಾನು ಆಡಬೇಕೇ ಅಥವಾ ಬೇಡವೇ ಎಂದು ನಿರ್ಧರಿಸಲು ನನಗೆ 10 ತಿಂಗಳುಗಳಿವೆ. ಹೀಗಾಗಿ ಸದ್ಯ ನಿವೃತ್ತಿ ಬಗ್ಗೆ ಯೋಚಿಸುತ್ತಿಲ್ಲ ಎಂದು ಮಹೇಂದ್ರ ಸಿಂಗ್ ಧೋನಿ ಹೇಳಿದ್ದಾರೆ.

44 ನೇ ವಯಸ್ಸಿನಲ್ಲಿಯೂ ಆಡಲು ಸಾಧ್ಯವಾಗುತ್ತದೆಯೇ ಎಂಬುದನ್ನು ಎದುರು ನೋಡುತ್ತೇನೆ. ಐಪಿಎಲ್ ಮುಗಿದ ಬಳಿಕ ಎಂಟು ತಿಂಗಳು ಕಾಲಾವಕಾಶವಿದೆ. ಅದರ ನಡುವೆ ನನ್ನ ದೇಹ ಹೇಗಿರುತ್ತದೆ ಎಂಬುದರ ಆಧಾರದ ಮೇಲೆ ನಾನು ನನ್ನ ಭವಿಷ್ಯವನ್ನು ನಿರ್ಧರಿಸುತ್ತೇನೆ. ಅಂದರೆ ನನ್ನ ನಿವೃತ್ತಿ ನಿರ್ಧರಿಸುವುದು ನನ್ನ ದೇಹ. ಆದ್ದರಿಂದ, ಒಂದೊಂದೇ ವರ್ಷ ಕಳೆಯಲಿ, ಆ ಬಳಿಕ ಅದರ ಬಗ್ಗೆ ಯೋಚಿಸೋಣ ಎಂದು ಮಹೇಂದ್ರ ಸಿಂಗ್ ಧೋನಿ ಹೇಳಿದ್ದಾರೆ. ಹೀಗಾಗಿ ಐಪಿಎಲ್ 2026 ರಲ್ಲೂ ಧೋನಿ ಕಣಕ್ಕಿಳಿದರೂ ಅಚ್ಚರಿಪಡಬೇಕಿಲ್ಲ.

**ಧೋನಿ ಕಳಪೆ ಪ್ರದರ್ಶನ:** ಐಪಿಎಲ್ ಸೀಸನ್-18 ರಲ್ಲಿ 43 ವರ್ಷದ ಧೋನಿಯಿಂದ ನಿರೀಕ್ಷಿತ ಪ್ರದರ್ಶನ ಮೂಡಿಬರುತ್ತಿಲ್ಲ. ವಿಕೆಟ್ ಕೀಪಿಂಗ್‌ನಲ್ಲಿ ಚಾಕಚಕ್ಯತೆ ಮರೆದರೂ ಬ್ಯಾಟಿಂಗ್‌ನಲ್ಲಿ ಸ್ಫೋಟಕ ಇನಿಂಗ್ಸ್ ಕಂಡು ಬಂದಿಲ್ಲ. ಈ ಬಾರಿ ಸಿಎಸ್‌ಕೆ ಆಡಿದ 4 ಪಂದ್ಯಗಳಲ್ಲಿ 3 ಇನಿಂಗ್ಸ್ ಆಡಿರುವ ಧೋನಿ ಒಟ್ಟು 55 ಎಸೆತಗಳನ್ನು ಎದುರಿಸಿದ್ದು ಈ ವೇಳೆ 76 ರನ್‌ಗಳಿಸಲಷ್ಟೇ ಶಕ್ತರಾಗಿದ್ದಾರೆ. ಅದರಲ್ಲೂ ನಿರ್ಣಾಯಕ ಹಂತದಲ್ಲಿ ಎಂಎಸ್‌ಡಿ ನಿಧಾನಗತಿಯಲ್ಲಿ ಬ್ಯಾಟ್ ಮಾಡುತ್ತಿರುವುದು ಚೆನ್ನೈ ಸೂಪರ್ ಕಿಂಗ್ಸ್ ಪಾಲಿಗೆ ಮುಳುವಾಗುತ್ತಿರುವುದು ಸುಳ್ಳಲ್ಲ.



## ರಿಷಬ್‌ಗೆ ಪಂಜುರ್ಲಿ ಅಭಯ

### ಜಗತ್ತಿನೆಲ್ಲೆಡೆ ನಿನಗೆ ಶತ್ರುಗಳಿದ್ದಾರೆ
### 5 ತಿಂಗಳಲ್ಲಿ ಪರಿಹಾರ

'ಕಾಂತಾರ' ಖ್ಯಾತಿಯ ರಿಷಬ್ ಶೆಟ್ಟಿ ಮಂಗಳೂರಿನಲ್ಲಿ ನಡೆದ ಪಂಜುರ್ಲಿ ಕೋಲದಲ್ಲಿ ಭಾಗಿಯಾಗಿದ್ದಾರೆ. ಈ ವೇಳೆ, ಜಗತ್ತಿನೆಲ್ಲೆಡೆ ನಿನಗೆ ದುಷ್ಮನ್‌ಗಳಿದ್ದಾರೆ, 5 ತಿಂಗಳು ಗಡುವಲ್ಲಿ ನಿನಗೆ ಒಳ್ಳೆಯದು ಮಾಡುತ್ತೇನೆ ಎಂದು ಪಂಜುರ್ಲಿ ದೈವ ಅಭಯ ನೀಡಿದೆ.

ಪಂಜುರ್ಲಿ ಕೋಲದಲ್ಲಿ ರಾತ್ರಿಯಿಂದ ಬೆಳಗಿನವರೆಗೂ ಪತ್ನಿ ಮತ್ತು ಮಕ್ಕಳೊಂದಿಗೆ ರಿಷಬ್ ಶೆಟ್ಟಿ ಭಾಗಿಯಾಗಿದ್ದಾರೆ. ಉತ್ಸವದ ಕೊನೆಯಲ್ಲಿ ವಾರಾಹಿ ಪಂಜುರ್ಲಿ ಬಳಿ ರಿಷಬ್ ಕಷ್ಟ ಹೇಳಿಕೊಂಡಿದ್ದಾರೆ. ಆಗ ಜಗತ್ತಿನೆಲ್ಲೆಡೆ ನಿನಗೆ ದುಷ್ಮನ್‌ಗಳಿದ್ದಾರೆ. ನಿನ್ನ ಸಿನಿ ಸಂಸಾರ ಹಾಳು ಮಾಡಲು ಯತ್ನಿಸುತ್ತಿದ್ದಾರೆ. ನನಗೆ ಸೇವೆ ನೀಡುವ ಹರಕೆ ಹೇಳಿಕೋ, 5 ತಿಂಗಳ ಒಳಗೆ ನಿನಗೆ ಒಳ್ಳೆಯದು ಮಾಡುತ್ತೇನೆ ಎಂದು ಪಂಜುರ್ಲಿ ದೈವ ಅಭಯ ನೀಡಿದೆ.

ಅಂದಹಾಗೆ, 'ಕಾಂತಾರ ಚಾಪ್ಟರ್ 1' ಸಿನಿಮಾ ಅಕ್ಟೋಬರ್ 2ರಂದು ರಿಲೀಸ್ ಆಗಲಿದೆ. ಈ ಸಿನಿಮಾದ ಕೆಲಸ ಭರದಿಂದ ನಡೆಯುತ್ತಿದೆ.





## ತಿಮ್ಮಪ್ಪನ ದರ್ಶನ ಪಡೆದ ರಾಗಿಣಿ ದ್ವಿವೇದಿ

ಸ್ಯಾಂಡಲ್‌ವುಡ್ ನಟಿ ರಾಗಿಣಿ ದ್ವಿವೇದಿ ಹಲವು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಇದರ ನಡುವೆ ತಿರುಪತಿ ತಿಮ್ಮಪ್ಪನ ಸನ್ನಿಧಿಗೆ ನಟಿ ತೆರಳಿದ್ದಾರೆ. ಸಿನಿಮಾಗೆ ಕೆಲಸಗಳಿಗೆ ನಟಿ ಬ್ರೇಕ್ ಹಾಕಿ ರಾಮ ನವಮಿಯಂದು ರಾಗಿಣಿ ತಿರುಪತಿ ತಿಮ್ಮಪ್ಪನ ದರ್ಶನ ಪಡೆದಿದ್ದಾರೆ. ತಿಮ್ಮಪ್ಪನಿಗೆ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಕೆಲ ಕಾಲ ದೇವಸ್ಥಾನದಲ್ಲಿ ಸಮಯ ಕಳೆದಿದ್ದಾರೆ. ಅದಷ್ಟೇ ಅಲ್ಲ, ಶ್ರೀಕಾಳಹಸ್ತಿ ಮತ್ತು ಪದ್ಮಾವತಿ ದೇವಸ್ಥಾನಕ್ಕೂ ಅವರು ತೆರಳಿ ಪೂಜೆ ಸಲ್ಲಿಸಿದ್ದಾರೆ. ಅಂದಹಾಗೆ, 'ಪೊಗರು' ಡೈರೆಕ್ಟರ್ ನಂದ ಕಿಶೋರ್ ಅವರು ಮೋಹನ್ ಲಾಲ್‌ಗೆ ಆಕ್ಷನ್ ಕಟ್ ಹೇಳಿದ್ದಾರೆ. ಈ ಚಿತ್ರದಲ್ಲಿ ಕನ್ನಡದ ನಟಿ ರಾಗಿಣಿ ದ್ವಿವೇದಿ ಪವರ್‌ಫುಲ್ ಪಾತ್ರದಲ್ಲಿ ನಟಿಸಿದ್ದಾರೆ. ಈ ವರ್ಷ ಅ.16ರಂದು ರಿಲೀಸ್ ಆಗಲಿದೆ.

ಬಾಲಿವುಡ್, ತೆಲುಗು ಸಿನಿಮಾಗಳಲ್ಲಿಯೂ ಅವರು ಸಕ್ರಿಯರಾಗಿದ್ದಾರೆ. ಉತ್ತಮ ಪಾತ್ರ ಎಂದೆನಿಸಿದರೆ ಪರಭಾಷಾ ಸಿನಿಮಾ ಡಿದಲ್ಲೂ ನಟಿ ಕಾಣಿಸಿಕೊಳ್ತಿದ್ದಾರೆ.

**ತಿಮ್ಮಪ್ಪನಿಗೆ ವಿಶೇಷ ಪೂಜೆ**

## ಖ್ಯಾತ ನಟಿಯ 14 ನಿಮಿಷದ ಖಾಸಗಿ ವಿಡಿಯೋ ಲೀಕ್!

ದಕ್ಷಿಣ ಭಾರತದ ಪ್ರಸಿದ್ಧ ನಟಿಯೊಬ್ಬರ 14 ನಿಮಿಷದ ಖಾಸಗಿ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಈ ವಿಡಿಯೋ ವೈರಲ್ ಆದ ನಂತರ ಆ ನಟಿ ಭಾರೀ ಸುದ್ದಿಯಲ್ಲಿದ್ದಾರೆ.

ಕಳೆದ ಕೆಲದಿನಗಳಿಂದ ಸಾಮಾಜಿಕ ಜಾಲತಾಣದಲ್ಲಿ ನಟಿಯೊಬ್ಬರ ಖಾಸಗಿ ವಿಡಿಯೋ ವೈರಲ್ ಆದ ಬಗ್ಗೆ ಭಾರೀ ಸುದ್ದಿ ಹರಿದಾಡುತ್ತಿದೆ. ದಕ್ಷಿಣ ಭಾರತದ ಕಿರುತೆರೆ ನಟಿಯ ವಿಡಿಯೋ ಇದು ಎಂದು ಹೇಳಲಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ಜನರು ಬಗೆ ಬಗೆಯ ಮಾತುಗಳನ್ನು ಆಡುತ್ತಿದ್ದಾರೆ.

ಅಂದಹಾಗೆ, ತಮಿಳು ಕಿರುತೆರೆ ಜಗತ್ತಿನ ಪ್ರಸಿದ್ಧ ನಟಿಯರ ಪೈಕಿ ಒಬ್ಬರಾಗಿರುವ ಶ್ರುತಿ ನಾರಾಯಣನ್ ಅವರ ವಿಡಿಯೋ ಇದು ಎಂದು ಹೇಳಲಾಗಿದ್ದು, ಈ ವಿಡಿಯೋ ವೈರಲ್ ಆದ ನಂತರ ಶ್ರುತಿ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. ಈ ಖಾಸಗಿ ವಿಡಿಯೋ, ಸಾಮಾಜಿಕ ಮಾಧ್ಯಮದಲ್ಲಿ ಸೋರಿಕೆಯಾದ ನಂತರ ಹಲ್‌ಚಲ್ ಎಬ್ಬಿಸಿದೆ.

ಈ ವಿಡಿಯೋ ಅವರ ಆಡಿಷನ್‌ಗಳಲ್ಲಿ ಒಂದಾಗಿದ್ದು, ಇದು 14 ನಿಮಿಷ ಇದೆ ಎಂದು ಹೇಳಲಾಗುತ್ತದೆ. ಮತ್ತೊಂದೆಡೆ, ಈ ವಿಡಿಯೋವನ್ನು ಕಾಸ್ಟಿಂಗ್ ಕೌಚ್‌ಗೆ ಲಿಂಕ್ ಮಾಡಲಾಗುತ್ತಿದೆ. ಆದರೆ, ಈ ಸೋರಿಕೆಯಾದ ವಿಡಿಯೋದ ಕುರಿತು ನಟಿ ಯಾವುದೇ ಹೇಳಿಕೆ ನೀಡಿಲ್ಲ, ಆದರೆ ವಿಡಿಯೋ ಸೋರಿಕೆಯಾದ ನಂತರ, ಅವರು ಗಂಭೀರ ಹೆಜ್ಜೆ ಇಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಅಂದಹಾಗೆ, ಈ ವೀಡಿಯೊ ಸೋರಿಕೆಯಾದ ತಕ್ಷಣ, ಅವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯನ್ನು ಪ್ರೈವೇಟ್ ಮೋಡ್‌ನಲ್ಲಿ ಇಟ್ಟುಕೊಂಡಿದ್ದಾರೆ. ಅಂದಹಾಗೆ, ಶ್ರುತಿ ನಾರಾಯಣನ್ ಯಾರು ಅನ್ನೋದರ ಕುರಿತಾದ ಅವರಿಗೆ ಸಂಬಂಧಿಸಿದ 5 ವಿಶೇಷ ವಿಷಯಗಳ ಬಗ್ಗೆ ತಿಳಿಯೋಣ 1. ಶ್ರುತಿ ನಾರಾಯಣನ್ ದಕ್ಷಿಣದ ಪ್ರಸಿದ್ಧ ನಟಿ.

ಅವರು ಚೆನ್ನೈ ಮೂಲದವರಾಗಿದ್ದು, 24 ವರ್ಷದ ಶ್ರುತಿ ಚಲನಚಿತ್ರಗಳಿಗೆ ಪ್ರವೇಶಿಸುವ ಮೊದಲು ತಮಿಳು ಟಿವಿ ಕಾರ್ಯಕ್ರಮಗಳಲ್ಲಿನ ಕೆಲಸದಿಂದ ಜನಪ್ರಿಯತೆ ಗಳಿಸಿದ್ದರು. 2. ಶ್ರುತಿ ನಾರಾಯಣನ್ ಅವರು 'ಸ್ಟಾರ್ ವಿಜಯ್' ನಲ್ಲಿ ಪ್ರಸಾರವಾಗುವ ತಮಿಳು ಟಿವಿ ಧಾರಾವಾಹಿ 'ಸಿರಾಗಡಿಕ್ಕ ಆಸೈ' ನಲ್ಲಿ ಪೋಷಕ ಪಾತ್ರದಲ್ಲಿ ನಟಿಸುವ ಮೂಲಕ ಹೆಸರುವಾಸಿಯಾಗಿದ್ದಾರೆ. ಈ ಧಾರಾವಾಹಿ ಸೋಮವಾರದಿಂದ ಶನಿವಾರದವರೆಗೆ ರಾತ್ರಿ 9 ಗಂಟೆಗೆ 649 ಸಂಚಿಕೆಗಳನ್ನು ಪ್ರಸಾರ ಮಾಡಿದೆ.


**ಸೋಶಿಯಲ್ ಮೀಡಿಯಾದಲ್ಲಿ ಭಾರೀ ವೈರಲ್!**



## ಅನುಷ್ಕಾ ಅಷ್ಟ ದ್ರವ್ಯ ಮಹಾಗಣಪತಿ ಯಾಗ

ಕನ್ನಡತಿ ಅನುಷ್ಕಾ ಶೆಟ್ಟಿ ಅವರು ಕಾಸರಗೋಡಿನ ಮಧೂರು ಮದನಂತೇಶ್ವರ ಶ್ರೀ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಅಷ್ಟ ದ್ರವ್ಯ ಮಹಾಗಣಪತಿ ನೆರವೇರಿಸಿದ್ದಾರೆ.

ಕಾಸರಗೋಡಿನ ಮಧೂರು ಮದನಂತೇಶ್ವರ ಶ್ರೀ ಸಿದ್ಧಿವಿನಾಯಕ ಕ್ಷೇತ್ರದಲ್ಲಿ ಅದ್ಧೂರಿಯಾಗಿ ಬ್ರಹ್ಮಕಲಶೋತ್ಸವ ನಡೆಯುತ್ತಿದೆ. ಈ ಹಿನ್ನೆಲೆ ಸಿದ್ಧಿವಿನಾಯಕನಿಗೆ ಅನುಷ್ಕಾ ಶೆಟ್ಟಿ ಅವರು ಅಷ್ಟ ದ್ರವ್ಯ ಮಹಾಗಣಪತಿ ಯಾಗ ನೆರವೇರಿಸಿದ್ದಾರೆ. ಕಾರಣಾಂತರಗಳಿಂದ ಪೂಜೆಗೆ ಭಾಗವಹಿಸಲು ಸಾಧ್ಯವಾಗದ ಹಿನ್ನೆಲೆ ಅನುಷ್ಕಾ ತಮ್ಮ ಹೆಸರಿನಲ್ಲಿ 128 ತೆಂಗಿನಕಾಯಿ ಅಷ್ಟ ದ್ರವ್ಯ ಮಹಾಗಣಪತಿ ಯಾಗ ನೆರವೇರಿಸಿದ್ದಾರೆ. ಅಂದಹಾಗೆ, ಅನುಷ್ಕಾ ನಟನೆಯ ಘಾಟಿ ಮತ್ತು ಮಲಯಾಳಂ ಸಿನಿಮಾವೊಂದರಲ್ಲಿ ಬ್ಯುಸಿಯಾಗಿದ್ದಾರೆ.



## ಒಮನ್‌ನಲ್ಲಿ ವಿಜಯ್ ರಶ್ಮಿಕಾ ಸುತ್ತಾಟ

ನಟಿ ರಶ್ಮಿಕಾ ಮಂದಣ್ಣ 29ನೇ ವರ್ಷದ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸಿದ್ದಾರೆ. ಕಡಲ ತೀರದಲ್ಲಿ ಬರ್ತಡೇ ಆಚರಿಸಿಕೊಂಡಿರೋ ರಶ್ಮಿಕಾ ಜೊತೆ ವಿಜಯ್ ಕೂಡ ಇದ್ದಾರೆ. ಇಬ್ಬರು ಪ್ರೀತಿಯಲ್ಲಿದ್ದಾರೆ ಎಂಬುದಕ್ಕೆ ನೆಟ್ಟಿಗರು ಸಾಕ್ಷಿ ತೋರಿಸಿದ್ದಾರೆ. ಸದ್ಯ ಇಬ್ಬರ ಬೀಚ್ ಫೋಟೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗ್ತಿದೆ. ಏ.5ರಂದು ಬರ್ತ್‌ಡೇ ಇದ್ದ ಹಿನ್ನೆಲೆ ಅವರು 'ಪುಷ್ಪ 2' ನಟಿ ರಶ್ಮಿಕಾ ಒಮನ್‌ಗೆ ತೆರಳಿದ್ದರು. ಆದರೆ ಯಾರೊಂದಿಗೆ ಹೋಗಿದ್ದಾರೆ ಎಂಬುದು ತಿಳಿದಿರಲಿಲ್ಲ. ಅದಕ್ಕೀಗ ಉತ್ತರ ಸಿಕ್ಕಿದೆ. ರಶ್ಮಿಕಾ ಹಾಗೂ ವಿಜಯ್ ತಮ್ಮ ಖಾಸಗಿ ಇನ್ಸ್ಟಾಗ್ರಾಂ ಖಾತೆಯಲ್ಲಿ ಮಾಡಿದ ಪೋಸ್ಟ್‌ನಿಂದ ಇಬ್ಬರ ಗುಟ್ಟು ರಟ್ಟಾಗಿದೆ. ಸೋಶಿಯಲ್ ಮೀಡಿಯಾದಲ್ಲಿ ರಶ್ಮಿಕಾ ಮಂದಣ್ಣ ಬೀಚ್ ಬಳಿ ಕುಳಿತಿರುವ ಫೋಟೋಗಳನ್ನು ಹಂಚಿಕೊಂಡಿದ್ದಾರೆ. ಬ್ಯಾಕ್‌ಗ್ರೌಂಡ್‌ನಲ್ಲಿ ರೆಡ್ ಕಲರ್ ಬಾವುಟವಿದೆ. ಅದರಂತೆ ವಿಜಯ್ ಶೇರ್ ಮಾಡಿರೋ ಪೋಸ್ಟ್‌ನಲ್ಲಿ ಇದೇ ರೀತಿಯ ಬಾವುಟ ಕಾಣಿಸಿದೆ. ಇದರಿಂದ ಇಬ್ಬರೂ ಜೊತೆಯಾಗಿ ಒಮನ್‌ನಲ್ಲಿ ಕಾಲ ಕಳೆಯುತ್ತಿದ್ದಾರೆ ಎನ್ನುವ ವಿಚಾರ ಖಚಿತವಾಗಿದೆ. ಇಬ್ಬರ ಪೋಸ್ಟ್‌ನಿಂದ ಅಭಿಮಾನಿಗಳ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಈ ಜೋಡಿ ಅದ್ಯಾವಾಗ ಅಧಿಕೃತವಾಗಿ ಗುಡ್ ನ್ಯೂಸ್ ನೀಡ್ತಾರೆ ಎಂದು ಫ್ಯಾನ್ಸ್ ಎದುರು ನೋಡ್ತಿದ್ದಾರೆ. ಅಂದಹಾಗೆ, ರಶ್ಮಿಕಾ ಮಂದಣ್ಣ ಹಾಗೂ ವಿಜಯ್ ದೇವರಕೊಂಡ ಗೀತ ಗೋವಿಂದಂ, ಡಿಯರ್ ಕಾಮ್ರೆಡ್ ಚಿತ್ರದಲ್ಲಿ ಜೊತೆಯಾಗಿ ನಟಿಸಿದ್ದಾರೆ.



**ಬೀಚ್ ಫೋಟೋದಿಂದ ಸಿಕ್ಕಿಬಿದ್ದ ಜೋಡಿ**

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**